ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 21 ಸೋಮವಾರ 2025

ಮೈಸೂರು ಮಿತ್ರ 46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 6 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪತ್ನಿಯಿಂದಲೇ ನಿವೃತ್ತ ಡಿಜಿ, ಐಜಿಪಿ
ಓಂ ಪ್ರಕಾಶ್ ಬರ್ಬರ ಹತ್ಯೆ

• ಕೊಲೆ ಮಾಡಿ ಪೊಲೀಸರಿಗೆ ಮಾಹಿತಿ ನೀಡಿದ ಪಲ್ಲವಿ • ಪೊಲೀಸರ ವಶದಲ್ಲಿ ಪತ್ನಿ, ಪುತ್ರಿ ವಿಚಾರಣೆ

ಬೆಂಗಳೂರು, ಏ.20– ಕರ್ನಾಟಕ ನಿವೃತ್ತ ಡಿಜಿ ಐಜಿಪಿ ಓಂ ಪ್ರಕಾಶ್ ಅವರನ್ನು ಸ್ವತಃ ಅವರ ಹೆಂಡತಿಯೇ ಚಾಕು ಇರಿದು ಕೊಲೆ ಮಾಡಿದ್ದಾರೆ. ಬೆಂಗಳೂರಿನ ಹೆಚ್‌ಎಸ್‌ಆರ್ ಲೇಔಟ್‌ನ ಮನೆಯಲ್ಲಿ ಈ ಘಟನೆ ನಡೆದಿದೆ. ಈ ಸಂಬಂಧ ಹೆಚ್‌ಎಸ್‌ಆರ್ ಲೇಔಟ್ ಪೊಲೀಸರು ಓಂ ಪ್ರಕಾಶ್ ಅವರ ಪತ್ನಿ, ಪಲ್ಲವಿ ಮತ್ತು ಪುತ್ರಿ ಕೃತಿ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಇಂದು ಮಧ್ಯಾಹ್ನ 3.30ರ ಸುಮಾರಿನಲ್ಲಿ ಕೊಲೆ ನಡೆದಿದೆ ಎಂದು ಹೇಳಲಾಗಿದ್ದು, ಪತಿಯನ್ನು ಕೊಂದ ಬಳಿಕ ಪಲ್ಲವಿ ಮತ್ತೊರ್ವ ನಿವೃತ್ತ ಡಿಜಿ ಮತ್ತು ಐಜಿಪಿ ಪತ್ನಿಗೆ ವಿಡಿಯೋ ಕಾಲ್ ಮೂಲಕ ಈ ವಿಷಯ ತಿಳಿಸಿದ ನಂತರ ಸ್ವತಃ ತಾವೇ ಪೊಲೀಸರಿಗೆ ಕರೆ ಮಾಡಿ ಪತಿಯನ್ನು ಕೊಂದಿರುವುದಾಗಿ ತಿಳಿಸಿದ್ದಾರೆ ಎನ್ನಲಾಗಿದೆ.



ಓಂ ಪ್ರಕಾಶ್

ಇಂದು ಮಧ್ಯಾಹ್ನ ಓಂಪ್ರಕಾಶ್ ಅವರು ಮಲಗಿದ್ದ ವೇಳೆ ಪತ್ನಿ ಪಲ್ಲವಿ ಅವರ ಮುಖಕ್ಕೆ ಬಟ್ಟೆ ಕಟ್ಟಿ ಚಾಕುವಿನಿಂದ ಸುಮಾರು 10 ಬಾರಿ ಇರಿದು ಕೊಂದಿದ್ದಾರೆ ಎಂದು ಪ್ರಾಥಮಿಕ ಮಾಹಿತಿಗಳಿಂದ ತಿಳಿದು ಬಂದಿದೆ. ಆಸ್ತಿ ವಿಚಾರಕ್ಕಾಗಿ ಈ ಕೊಲೆ ನಡೆದಿದೆ ಎಂದು ಪೊಲೀಸರು ಶಂಕಿಸಿದ್ದಾರೆ.



ಪಲ್ಲವಿ

ಪಲ್ಲವಿ ಅವರಿಂದ ಮಾಹಿತಿ ತಿಳಿದ ತಕ್ಷಣ ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ರಕ್ತಸಿಕ್ತವಾಗಿ ಬಿದ್ದಿದ್ದ ಓಂಪ್ರಕಾಶ್ ಅವರ ಮೃತದೇಹವನ್ನು ಸೆಂಟ್ ಜಾನ್ಸ್ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಿದ್ದಾರೆ. ಘಟನಾ ಸ್ಥಳಕ್ಕೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ನಗರ ಪೊಲೀಸ್ ಆಯುಕ್ತ ದಯಾನಂದ್ ಅವರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ ಓಂ ಪ್ರಕಾಶ್ ಅವರ ■6ನೇ ಪುಟಕ್ಕೆ

ಹೈದರಾಲಿ ರಸ್ತೆಯಲ್ಲಿ 40 ಮರಗಳ ಹನನ
ಸಿಸಿಎಫ್ ದರ್ಜೆಯ ಅಧಿಕಾರಿಯಿಂದ ತನಿಖೆಗೆ ಅರಣ್ಯ ಸಚಿವರ ಆದೇಶ



ಮೈಸೂರು, ಏ.20(ಎಂಟಿವೈ)– ಮೈಸೂರಿನ ಹೈದರಾಲಿ ರಸ್ತೆಯಲ್ಲಿ 40 ಮರಗಳ ಹನನ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಎಫ್ ದರ್ಜೆಯ ಅಧಿಕಾರಿಯಿಂದ ತನಿಖೆ ನಡೆಸಿ, 7 ದಿನದ ಒಳಗೆ ವರದಿ ಸಲ್ಲಿಸುವಂತೆ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಆದೇಶಿಸಿದ್ದಾರೆ.

ರಸ್ತೆ ಅಗಲೀಕರಣದ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಹೈದರಾಲಿ ರಸ್ತೆಯಲ್ಲಿ ಮರಗಳ ತೆರವಿಗೆ ಸಂಬಂಧಿಸಿದಂತೆ ಸಲ್ಲಿಸಿದ ಮನವಿ ಮೇರೆಗೆ ಅರಣ್ಯ ಇಲಾಖೆ ಹೈದರಾಲಿ ರಸ್ತೆಯಲ್ಲಿ 40 ಮರಗಳ ಕಡಿತಕ್ಕೆ ಅನುಮತಿ ನೀಡಿತ್ತು. ಈ ಹಿನ್ನೆಲೆಯಲ್ಲಿ ಕಳೆದ ವಾರ 40 ಮರಗಳನ್ನು ನಿರ್ದಯವಾಗಿ ಕಡಿಯಲಾಗಿತ್ತು. ಮರಗಳ ಹನನ ವಿರೋಧಿಸಿ ಮೈಸೂರಿನಲ್ಲಿ ಪರಿಸರ ಪ್ರೇಮಿಗಳು ಬೃಹತ್ ಪ್ರತಿಭಟನೆ ನಡೆಸಿ ಮರಗಳ ಬುಡಕ್ಕೆ ಶ್ರದ್ಧಾಂಜಲಿ ಅರ್ಪಿಸಿ ಮೇಣದ ಬತ್ತಿಯನ್ನು ಬೆಳಗಿ ಕಂಬನಿ ಮಿಡಿದಿದ್ದರು.



ಈಶ್ವರ್ ಖಂಡ್ರೆ

ಅಲ್ಲದೇ, ಹೈದರಾಲಿ ರಸ್ತೆಯಲ್ಲಿ ವಾಹನ ದಟ್ಟಣೆ ಇರಲಿಲ್ಲ. ಆ ರಸ್ತೆಯ ಅಗಲೀಕರಣದ ಅವಶ್ಯಕತೆಯೂ ಇರಲಿಲ್ಲ. ಆದರೆ ಮೈಸೂರು ಮಹಾನಗರ ಪಾಲಿಕೆಯ ಅವೈಜ್ಞಾನಿಕ ಕ್ರಮದಿಂದ ಹತ್ತಾರು ವರ್ಷಗಳಿಂದ ಇದ್ದ 40 ಮರಗಳನ್ನು ಕಡಿಯಲಾಗಿದೆ ಎಂದು ಸಾರ್ವಜನಿಕರು ಆರೋಪಿಸಿದರು.

ರಸ್ತೆ ಅಗಲೀಕರಣದ ಅಗತ್ಯ ಇರಲಿಲ್ಲ ಎಂಬ ಸಾರ್ವಜನಿಕರ ಅಭಿಪ್ರಾಯವನ್ನು ಗಂಭೀರವಾಗಿ ಪರಿಗಣಿಸಿರುವ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಮರ ಕಡಿತದ ಪ್ರಕರಣಕ್ಕೆ ಸಂಬಂಧಿಸಿದಂತೆ ಹಾಗೂ ಹೈದರಾಲಿ ರಸ್ತೆಯ ಅಗಲೀಕರಣ ಮತ್ತು ಮರಗಳ ಹನನ ಅಗತ್ಯವಿತ್ತೇ? ಹಾಗೂ ಅರಣ್ಯ ಇಲಾಖೆ ಮರ ಕಡಿಯಲು ನಿಯಮಾನುಸಾರ ಅನುಮತಿ ನೀಡಿದೆಯೇ? ಎಂದು ಪರಿಶೀಲಿಸಲು ಸಿಸಿಎಫ್ ದರ್ಜೆಯ ಅಧಿಕಾರಿಯೊಬ್ಬರಿಂದ ತನಿಖೆ ನಡೆಸಿ 7 ದಿನದ ■6ನೇ ಪುಟಕ್ಕೆ

ಸೆಂಟ್ ಫಿಲೋಮಿನಾಸ್ ಕಾಲೇಜು ಆವರಣದಲ್ಲಿ
ಅಕ್ರಮವಾಗಿ ಮರಗಳ ಹನನ

ಕಥೋಲಿಕ ಕನ್ನಡ ಕ್ರೈಸ್ತರ ಸಂಘದಿಂದ ಅರಣ್ಯ ಇಲಾಖೆಗೆ ದೂರು

• ಕಾಲೇಜು ಆಡಳಿತ ಮಂಡಳಿಯಿಂದಲೇ ಪರಿಸರ ನಾಶ: ಆರೋಪ

• ಇಂದು ಅರಣ್ಯಾಧಿಕಾರಿಗಳಿಂದ ಸ್ಥಳ ಪರಿಶೀಲನೆ, ಕಾನೂನು ಕ್ರಮ ಸಾಧ್ಯತೆ

ಮೈಸೂರು, ಏ.20–ಮೈಸೂರಿನ ಹೈದರಾಲಿ ರಸ್ತೆ ಅಗಲೀಕರಣಕ್ಕಾಗಿ 40 ಮರಗಳನ್ನು ಕತ್ತರಿಸಿರುವ ಪ್ರಕರಣ ಹಚ್ಚ ಹಸಿರಾಗಿರುವಾಗಲೇ, ನಗರದ ಬನ್ನಿಮಂಟಪದಲ್ಲಿರುವ ಸೆಂಟ್ ಫಿಲೋಮಿನಾಸ್ ಆವರಣದಲ್ಲಿ 10ಕ್ಕೂ ಹೆಚ್ಚು ಮರಗಳನ್ನು ಅಕ್ರಮವಾಗಿ ಹನನ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ.

ಈ ಸಂಬಂಧ ಕಥೋಲಿಕ ಕನ್ನಡ ಕ್ರೈಸ್ತರ ಸಂಘ ಮೈಸೂರಿನ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಶುಕ್ರವಾರದಂದು ಲಿಖಿತ ದೂರು ಸಲ್ಲಿಸಿದ್ದು, 2024ರ ಜೂನ್‌ನಲ್ಲಿ ಕಾಲೇಜಿನ ಅಧಿಕಾರ ವಹಿಸಿಕೊಂಡ ಫಾದರ್ ಲೂರ್ದು ಪ್ರಸಾದ್ ಜೋಸೆಫ್ ಮತ್ತು ಪ್ರಸ್ತುತ ಪ್ರಾಂಶುಪಾಲರಾಗಿರುವ ಡಾ. ರವಿ ಜೆ.ಡಿ.ಸಲ್ಡಾನಾ ಅವರು ಕಾಲೇಜು ಆವರಣದಲ್ಲಿ ದಶಕಗಳಿಂದ ಬೆಳೆದು ನಿಂತಿದ್ದ ಬೆಲೆ ಬಾಳುವ ಮರಗಳನ್ನು ಅರಣ್ಯ ಇಲಾಖೆಯ ಅನುಮತಿ ಇಲ್ಲದೇ ಅನಧಿಕೃತವಾಗಿ ಕಡಿದು ರಾತ್ರೋರಾತ್ರಿ ಬೇರೊಂದು ಸ್ಥಳಕ್ಕೆ ಸಾಗಿಸಿರುವ ಬಗ್ಗೆ ತಮಗೆ ಮಾಹಿತಿ ಬಂದಿದೆ ಎಂದು ತಿಳಿಸಿದ್ದಾರೆ. ಈ ಸಂಬಂಧ ಇವರಿಬ್ಬರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಅವರು ತಮ್ಮ ದೂರಿನಲ್ಲಿ ಕೋರಿದ್ದಾರೆ.







1946ರಲ್ಲಿ ಸ್ಥಾಪನೆಯಾದ ಸೆಂಟ್ ಫಿಲೋಮಿನಾಸ್ ಕಾಲೇಜಿನ ವಿಸ್ತೀರ್ಣವಾದ ಆವರಣದಲ್ಲಿ ತೇಗ, ಬೀಟೆ, ಶ್ರೀಗಂಧ ಮುಂತಾದ ಬೆಲೆ ಬಾಳುವ ಮರಗಳನ್ನು ಬೆಳೆಸಲಾಗಿತ್ತು. ಹೀಗಾಗಿ ಈ ಆವರಣದ ■6ನೇ ಪುಟಕ್ಕೆ

ಮರಗಳ ಹನನ: ಮರದ ಬುಡದೊಂದಿಗೆ ಪಕ್ಷಿ ಸಂಕುಲನ ರೋಧಿಸುವ ಚಿತ್ರ ಬರೆದು ಕಲಾವಿದನ ವಿನೂತನ ಪ್ರತಿಭಟನೆ



ಹೈದರಾಲಿ ರಸ್ತೆಯಲ್ಲಿ ಮರಗಳ ಹನನ ಖಂಡಿಸಿ ಟೀಂ ಮೈಸೂರು ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಕಲಾವಿದ ಮನೋಹರ್ ಅವರು ಮರಗಳ ಬುಡ ರೋಧಿಸುತ್ತಿರುವ ಚಿತ್ರ ಬರೆದು ಗಮನ ಸೆಳೆದರು.

ಮೈಸೂರು, ಏ.20(ಎಂಟಿವೈ)– ಮೈಸೂರಿನ ಹೈದರಾಲಿ ರಸ್ತೆಯಲ್ಲಿ 40 ಮರಗಳ ಹನನ ಪ್ರಕರಣ ಖಂಡಿಸಿ, ಟೀಂ ಮೈಸೂರು ತಂಡದ ನೇತೃತ್ವದಲ್ಲಿ ಕಲಾವಿದರೊಬ್ಬರು 'ಮರಗಳ ಬುಡದೊಂದಿಗೆ ಪಕ್ಷಿ ಸಂಕುಲ ರೋಧಿಸುತ್ತಿರುವಂತೆ ಚಿತ್ರ' ಬರೆದು ವಿನೂತನವಾಗಿ ಪ್ರತಿಭಟಿಸಿದ್ದಾರೆ.

ಹೈದರಾಲಿ ರಸ್ತೆಯ ಎಸ್ಪಿ ಕಚೇರಿ ವೃತ್ತದಲ್ಲಿ ಟೀಂ ಮೈಸೂರು ತಂಡದಿಂದ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಕಲಾವಿದ ಮನೋಹರ್ ಅವರು ರಸ್ತೆ ಮೇಲೆ ಮರಗಳ ಬುಡದೊಂದಿಗೆ ಅಳಿಲು, ವಿವಿಧ ಪಕ್ಷಿಗಳು ರೋಧಿಸುತ್ತಿರುವಂತೆ ಚಿತ್ರ ಬರೆಯುವ ಮೂಲಕ ಮರಗಳ ■6ನೇ ಪುಟಕ್ಕೆ

ಮೈಸೂರು ಮಿತ್ರ ಸೋಮವಾರ 21 ಏಪ್ರಿಲ್ 2025

ನಾಳೆಯಿಂದ ಪ್ರಧಾನಿ ಮೋದಿ ಸೌದಿ ಅರೇಬಿಯಾ ಪ್ರವಾಸ



ನವದೆಹಲಿ: ಸೌದಿ ಅರೇಬಿಯಾದ ಯುವರಾಜ ಮತ್ತು ಪ್ರಧಾನಿ ಮೊಹಮ್ಮದ್ ಬಿನ್ ಸಲ್ಮಾನ್ ಅವರ ಆಹ್ವಾನದ ಮೇರೆಗೆ ಪ್ರಧಾನಿ ನರೇಂದ್ರ ಮೋದಿ ಸೌದಿ ಅರೇಬಿಯಾಕ್ಕೆ ಭೇಟಿ ನೀಡಲಿದ್ದಾರೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಪ್ರಕಾರ, ಏಪ್ರಿಲ್ 22-23ರ ಭೇಟಿಯು ಪ್ರಧಾನಿಯವರ ಮೂರನೇ ಅವಧಿಯಲ್ಲಿ ಆ ದೇಶಕ್ಕೆ ಮೊದಲ ಭೇಟಿಯಾಗಿದೆ. ಈ ಹಿಂದೆ 2016 ಮತ್ತು 2019ರಲ್ಲಿ ಎರಡು ಬಾರಿ ಸೌದಿ ಅರೇಬಿಯಾಕ್ಕೆ ಭೇಟಿ ನೀಡಿದ್ದರು.

ಜಿ 20 ಶೃಂಗಸಭೆಯಲ್ಲಿ ಭಾಗವಹಿಸಲು ಮತ್ತು ಭಾರತ-ಸೌದಿ ಅರೇಬಿಯಾ ಕಾರ್ಯತಂತ್ರದ ಪಾಲುದಾರಿಕೆ ಮಂಡಳಿ ಮೊದಲ ಸಭೆಯ ಸಹ ಅಧ್ಯಕ್ಷತೆ ವಹಿಸಲು ಮೊಹಮ್ಮದ್ ಬಿನ್ ಸಲ್ಮಾನ್ 2023ರ ಸೆಪ್ಟೆಂಬರ್‌ನಲ್ಲಿ ನವದೆಹಲಿಗೆ ಅಧಿಕೃತ ಭೇಟಿ ನೀಡಿದ ನಂತರ ಈ ಭೇಟಿ ನಡೆದಿದೆ.

ಭಾರತ ಮತ್ತು ಸೌದಿ ಅರೇಬಿಯಾ ಸಾಮಾಜಿಕ-ಸಾಂಸ್ಕೃತಿಕ ಮತ್ತು ವ್ಯಾಪಾರ ಸಂಪರ್ಕಗಳ ಸುದೀರ್ಘ ಇತಿಹಾಸದೊಂದಿಗೆ ನಿಕಟ ಮತ್ತು ಸ್ನೇಹಪರ ಸಂಬಂಧಗಳನ್ನು ಹಂಚಿಕೊಂಡಿವೆ. ವ್ಯೂಹಾತ್ಮಕ ಪಾಲುದಾರರಾಗಿ, ಉಭಯ ದೇಶಗಳು ರಾಜಕೀಯ, ರಕ್ಷಣೆ, ಭದ್ರತೆ, ವ್ಯಾಪಾರ, ಹೂಡಿಕೆ, ಇಂಧನ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಸಂಸ್ಕೃತಿ ಮತ್ತು ಜನರ ನಡುವಿನ ಸಂಬಂಧಗಳು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಬಲವಾದ ದ್ವಿಪಕ್ಷೀಯ ಸಂಬಂಧಗಳನ್ನು ಹಂಚಿಕೊಂಡಿವೆ.

ಇಂದಿನಿಂದ ಐಎಎಸ್, ಕೆಎಎಸ್ ಪರೀಕ್ಷಾರ್ಥಿಗಳಿಗೆ ತರಬೇತಿ ಶಿಬಿರ

ಮೈಸೂರು, ಏ.20(ಬಿಎಲ್‌ಯು)- ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ ಐಎಎಸ್ ಹಾಗೂ ಕೆಎಎಸ್ ಪರೀಕ್ಷಾ ಅಭ್ಯರ್ಥಿಗಳಿಗೆ 50 ದಿನಗಳ ತರಬೇತಿ ಶಿಬಿರ ಆಯೋಜಿಸಿದೆ.

ತರಬೇತಿ ಶಿಬಿರವು ಏಪ್ರಿಲ್ 21ರಿಂದ ಆರಂಭಗೊಳ್ಳಲಿದ್ದು, ಅಂದು ಬೆಳಿಗ್ಗೆ ತರಬೇತಿ ಕಾರ್ಯಕ್ರಮದ ಉದ್ಘಾಟನೆ ನಡೆಯಲಿದೆ. ಕೆಎಎಸ್ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಪಡೆದ ಮಂಡ್ಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಆರ್.ನಂದಿನಿ ಭಾಗವಹಿಸಿ ಪರೀಕ್ಷಾ ಸಿದ್ಧತೆ ಬಗ್ಗೆ ಅಭ್ಯರ್ಥಿಗಳಿಗೆ ಮಾಹಿತಿ ನೀಡುವರು. ಈ ವೇಳೆ ಮೈಸೂರು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ ಪರೀಕ್ಷಾ ತಯಾರಿ ಕ್ರಮದ ಬಗ್ಗೆ ಮಾರ್ಗದರ್ಶನ ನೀಡುವರು. ತರುವಾಯ ಶಿಬಿರಾರ್ಥಿಗಳೊಂದಿಗೆ ಸಂವಾದ ನಡೆಯಲಿದ್ದು, ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ಕೆ.ಬಿ. ಪ್ರವೀಣ್, ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣ ಭಾಗವಹಿಸಲಿದ್ದಾರೆ.

ಜಾತಿಗಣತಿ ವರದಿ ಅವೈಜ್ಞಾನಿಕ ತಿರಸ್ಕರಿಸಿ

ಸಿಇಟಿಯಲ್ಲಿ ಜನಿವಾರ ತೆಗೆಸಿದ ಸಿಬ್ಬಂದಿ ವಜಾಗೊಳಿಸಿ



ನವೀನ್‌ಕುಮಾರ್

ಮೈಸೂರು, ಏ.20(ಜಿಎ)- ಹೆಚ್.ಕಾಂತರಾಜ ಆಯೋಗದ ಜಾತಿಗಣತಿ ವರದಿಯು ಅವೈಜ್ಞಾನಿಕವಾಗಿದ್ದು ಸರ್ಕಾರ ಅದನ್ನು ತಿರಸ್ಕರಿಸಿ ನೂತನ ಸಮೀಕ್ಷೆ ಕೈಗೊಳ್ಳಬೇಕು ಎಂದು ವಿಪ್ರ ಮುಖಂಡ ಎಂ.ಎನ್.ನವೀನ್ ಕುಮಾರ್ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಣತಿಯಲ್ಲಿ ರಾಜ್ಯದಲ್ಲಿ ಬ್ರಾಹ್ಮಣರು ಸುಮಾರು 17.5 ಲಕ್ಷ ಜನಸಂಖ್ಯೆ ಇದ್ದಾರೆ ಎಂದು ಹೇಳಿದ್ದು, ಇದನ್ನು ನಂಬಲು ಅಸಾಧ್ಯ. ನಾವು ಸುಮಾರು 35 ಲಕ್ಷಕ್ಕೂ ಹೆಚ್ಚಿದ್ದೇವೆ. ಸಮುದಾಯವನ್ನು ಕಡಿಮೆ ಜನಸಂಖ್ಯೆ ಎಂದು ಬಿಂಬಿಸಿ ಪ್ರಾತಿನಿಧ್ಯವನ್ನು ಮೊಟಕುಗೊಳಿಸುವ ಹುನ್ನಾರ ನಡೆದಿದೆ ಎಂದು ಆರೋಪಿಸಿದರು.

ಮೈಸೂರಿನಲ್ಲಿಯೇ 2 ಲಕ್ಷಕ್ಕೂ ಹೆಚ್ಚಿನ ಬ್ರಾಹ್ಮಣರಿದ್ದಾರೆ. ರಾಜ್ಯದಲ್ಲಿ 35 ಲಕ್ಷಕ್ಕೂ ಅಧಿಕ ಮಂದಿ ಇದ್ದಾರೆ. ಕೆ.ಆರ್.ಕ್ಷೇತ್ರದಲ್ಲಿ 70 ಸಾವಿರ ಮಂದಿ ಇದ್ದಾರೆ. ಆದ್ದರಿಂದ ಬ್ರಾಹ್ಮಣರು ಕಡಿಮೆ ಸಂಖ್ಯೆಯಲ್ಲಿದ್ದಾರೆ ಎಂದು ತಪ್ಪು ಮಾಹಿತಿ ನೀಡಿದ್ದಾರೆ. ಈ ಮೂಲಕ ಬ್ರಾಹ್ಮಣ ಸಮುದಾಯಕ್ಕೆ ವಿವಿಧ ರಂಗದಲ್ಲಿ ಅವಕಾಶ ತಪ್ಪಿಸುವ ತಂತ್ರವಾಗಿದೆ ಎಂದು ಕಿಡಿಕಾರಿದರು.

ಬೀದರ್‌ನಲ್ಲಿ ಸಿಇಟಿ ಬರೆಯಲು ತೆರಳಿದ್ದ ಬ್ರಾಹ್ಮಣ ವಿದ್ಯಾರ್ಥಿಯ ಜನಿವಾರ ತೆಗೆಸಲು ಪ್ರಯತ್ನಿಸಿ, ಪರೀಕ್ಷೆ ಬರೆಯದಂತೆ ಮಾಡಿರುವುದು ಖಂಡನೀಯ. ಕೂಡಲೇ ಆ ವಿದ್ಯಾರ್ಥಿಗೆ ಮರು ಪರೀಕ್ಷೆ ನಡೆಸಬೇಕು. ಸಂಬಂಧಿಸಿದ ಸಿಬ್ಬಂದಿಯ ವಜಾ ಮಾಡಬೇಕು ಎಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಮಹಾ ಸಭಾಧ್ಯಕ್ಷ ಆರ್.ಎಸ್. ಸತ್ಯನಾರಾಯಣ, ಕಾರ್ಯದರ್ಶಿ ಬಿ.ವಿ.ಗದಾಧರ, ಅಗಸ್ತ್ಯ ಕೋ-ಆಪರೇಟಿವ್ ಸೊಸೈಟಿ ನಿರ್ದೇಶಕ ಪಾರ್ಥಸಾರಥಿ, ಭೂಮಿಕಾ ಗೃಹ ನಿರ್ಮಾಣ ಸಹಕಾರ ಸಂಘದ ನಿರ್ದೇಶಕ ವಾಸುದೇವಮೂರ್ತಿ, ಬ್ರಾಹ್ಮಣ ಧರ್ಮಸಹಾಯ ಸಭಾ ಧರ್ಮಾಧಿಕಾರಿ ಜಗದೀಶ್, ಕೆ.ಆರ್. ಕೋ-ಆಪರೇಟಿವ್ ಬ್ಯಾಂಕಿನ ಎಚ್.ವಿ.ಭಾಸ್ಕರ್, ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಸಂಘಟನಾ ಕಾರ್ಯದರ್ಶಿ ಎಚ್.ಎಸ್.ನಾಗಶಯನ, ಪ್ರವೀಣ್‌ಕುಮಾರ್ ಉಪಸ್ಥಿತರಿದ್ದರು.

ಏ.23, ಕೋಮುವಾದ ಧಿಕ್ಕರಿಸಿ- ಸಂವಿಧಾನ ರಕ್ಷಿಸಿ ಜನಕ್ರಾಂತಿ ಸಮಾವೇಶ

ಮೈಸೂರು,ಏ.20(ಜಿಎ)-ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜನ್ಮ ದಿನದ ಅಂಗವಾಗಿ ಏ.23ರಂದು ಬೆಳಗ್ಗೆ 11 ಗಂಟೆಗೆ ಬೆಂಗಳೂರಿನ ವಸಂತ ನಗರದಲ್ಲಿರುವ ಡಾ.ಅಂಬೇಡ್ಕರ್ ಭವನದಲ್ಲಿ ಕೋಮುವಾದ ಧಿಕ್ಕರಿಸಿ- ಸಂವಿಧಾನ ರಕ್ಷಿಸಿ ಶೀರ್ಷಿಕೆಯ ದಲಿತರ ಅಭಿವೃದ್ಧಿಗಾಗಿ ಜನಕ್ರಾಂತಿ ಸಮಾವೇಶ ಆಯೋಜಿಸಲಾಗಿದೆ ಎಂದು ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿಸಿದ ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಮಿತಿ ಸಂಚಾಲಕ ಉಗ್ರಪ್ಪ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸಂಚಾಲಕರಾದ ಎಂ. ಗುರುಮೂರ್ತಿ ನೇತೃತ್ವ ವಹಿಸುವರು. ಈ ವೇಳೆ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಪರಿಶಿಷ್ಟ ಜಾತಿಯ ಎಲ್ಲ ಉಪ ಜಾತಿಗಳಿಗೆ ಒಳ ಮೀಸಲಾತಿಯನ್ನು ಎಲ್.ಜಿ. ಹಾವನೂರು ವರದಿ, ಎ.ಜೆ.ಸದಾಶಿವ ಆಯೋಗದ ವರದಿ, ಸಿ.ಜೆ.ಮಾಧುಸ್ವಾಮಿಯವರ ಶಿಫಾರಸುಗಳಲ್ಲಿ ಯಾವುದಾದರೂ ಒಂದನ್ನು ಆಧರಿಸಿ ಜಾರಿಗೆ ತರಬೇಕು ಹಾಗೂ ಇನ್ನಿತರ ಹಕ್ಕೊತ್ತಾಯಗಳ ಬೇಡಿಕೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದೆಂದರು. ಗೋಷ್ಠಿಯಲ್ಲಿ ಗೋಪಾಲಕೃಷ್ಣಸ್ವಾಮಿ, ಮಹೇಶ್, ರಾಚಪ್ಪ ಜಟ್ಟಿಹುಂಡಿ, ಎಂ.ಎಂ.ಮಲ್ಲೇಶ್ ಉಪಸ್ಥಿತರಿದ್ದರು.


ಇಂದು 'ಕರ್ಣ ಚರಿತಾಮೃತ ಅಥವಾ ಕರ್ಣ ಪುನರುತ್ಥಾನ' ಕೃತಿ ಲೋಕಾರ್ಪಣೆ

ಮೈಸೂರು, ಏ.20(ಜಿಎ)-ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ ಹಾಗೂ ಸಂವಹನ ಪ್ರಕಾಶನದಿಂದ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಸಭಾಂಗಣದಲ್ಲಿ ಏ.21ರಂದು ಸಂಜೆ 5ಕ್ಕೆ ಹೆಚ್.ಎಲ್. ಶಿವಬಸಪ್ಪ ಹೊರೆಯಾಲ ರಚನೆಯ 'ಕರ್ಣ ಚರಿತಾಮೃತ ಅಥವಾ ಕರ್ಣ ಪುನರುತ್ಥಾನ' ಕೃತಿ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಈ ವಿಷಯ ತಿಳಿಸಿ, ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸುವರು. ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್ ಅಧ್ಯಕ್ಷತೆ ವಹಿಸುವರು. ಸಿ.ನಾಗಣ್ಣ ಕೃತಿ ಬಿಡುಗಡೆಗೊಳಿಸಲಿದ್ದಾರೆ. ಹಿರಿಯ ಸಾಹಿತಿ ಪ್ರದೀಪ ಕುಮಾರ್ ಹೆಬ್ರಿ ಕೃತಿ ಕುರಿತು ಮಾತನಾಡುವರು. ಅತಿಥಿಗಳಾಗಿ ಕವಯಿತ್ರಿ ಲತಾ ರಾಜಶೇಖರ್, ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಲೇಖಕ ಜೆ.ಬಿ.ರಂಗಸ್ವಾಮಿ ಉಪಸ್ಥಿತರಿರುವರು ಎಂದರು.

ಸುದ್ದಿಗೋಷ್ಠಿಯಲ್ಲಿ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಪ್ರಕಾಶಕ ಡಿ.ಎನ್. ಲೋಕಪ್ಪ, ಸಾಹಿತಿ ಬೆಸೂರು ಮೋಹನ್ ಪಾಳೇಗಾರ್ ಉಪಸ್ಥಿತರಿದ್ದರು.

ಸೈಯದ್ ಸಜಾದ್ ಅಹ್ಮದ್ ಸಾಹೇಬ್ ನಿಧನ



ಮೈಸೂರು,ಏ.20- ಮೈಸೂರಿನ ರಾಜೀವ್‌ನಗರದ ನಿವಾಸಿ ಹಾಗೂ ಭೂ ದಾಖಲೆಗಳ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಸೈಯದ್ ಸಜಾದ್ ಅಹ್ಮದ್ ಸಾಹೇಬ್ (74) ಭಾನುವಾರ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ಪತ್ನಿ, ಪುತ್ರ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಸೋಮವಾರ (ಏ.21) ಮಧ್ಯಾಹ್ನ 1.30ಕ್ಕೆ ಸುಭಾಷ್‌ನಗರದ ಅಬೂಬಕರ್ ಮಸೀದಿ ಆವರಣದಲ್ಲಿ ಪಾರ್ಥಿವ ಶರೀರ ಇರಿಸಿ, ಪ್ರಾರ್ಥನೆ ಸಲ್ಲಿಸಿದ ನಂತರ ಕೇಂದ್ರ ಕಾರಾಗೃಹದ ಹಿಂಭಾಗದ ಮುಸಲ್ಮಾನ ಸಮುದಾಯದ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಬೆಲೆ ಏರಿಕೆ ಖಂಡಿಸಿ ಖಾಲಿ ಸಿಲಿಂಡರ್ ಹಿಡಿದು ವಾಟಾಳ್ ಪ್ರತಿಭಟನೆ

ಮರಗಳ ಹನನ ಖಂಡಿಸಿ ಮಹಾರಾಣಿ ಪ್ರತಿಭಟನೆ ನಡೆಸಬೇಕಿತ್ತು



ಬೆಲೆ ಏರಿಕೆ ಖಂಡಿಸಿ ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್ ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಖಾಲಿ ಸಿಲಿಂಡರ್‌ಗಳನ್ನು ಹಿಡಿದು ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು.

ಮೈಸೂರು, ಏ.20(ಜಿಎ)-ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್ ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಖಾಲಿ ಸಿಲಿಂಡರ್‌ಗಳನ್ನು ಹಿಡಿದು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಹಾಲು, ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಿ ಜನರಿಗೆ ಬರೆ ಎಳೆಯುತ್ತಿದೆ. ಇಷ್ಟಾದರೂ ನಮ್ಮ ರಾಜ್ಯದ ಜನ ಪ್ರತಿಭಟಿಸುತ್ತಿಲ್ಲ. ಎಷ್ಟೇ ಬೆಲೆ ಏರಿಕೆ ಮಾಡಿದರು ಸುಮ್ಮನಿರುತ್ತಾರೆ. ಸರ್ಕಾರಗಳ ವಿರುದ್ಧ ಸಾರ್ವಜನಿಕರು ಧ್ವನಿ ಎತ್ತಬೇಕು. ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ಭ್ರಷ್ಟರ ಪಕ್ಷಗಳು. ಭ್ರಷ್ಟಾಚಾರದ ಬಗ್ಗೆ ಭ್ರಷ್ಟರೆ ಹೋರಾಟ ನಡೆಸುತ್ತಿದ್ದಾರೆ. ಬೆಲೆ ಏರಿಕೆ ಮಾಡಿ ಜನಾಕ್ರೋಶ ಯಾತ್ರೆ ಬೇರೆ ಮಾಡುತ್ತಿದ್ದಾರೆ. ರಾಜಕಾರಣಿಗಳಿಗೆ ಬೆಲೆ ಏರಿಕೆ ಪರಿಣಾಮ ಬೀರುವುದಿಲ್ಲ. ಜನ ಸಾಮಾನ್ಯರು ಇದನ್ನು ಪ್ರಶ್ನಿಸಬೇಕು ಎಂದರು.

ಮಹಾರಾಣಿ ಪ್ರತಿಭಟನೆ: ಮೈಸೂರಿನಲ್ಲಿ 40 ಮರಗಳ ಹನನ ಖಂಡಿಸಿ ಮಾತನಾಡಿದ ಅವರು, ಇಂತಹ ನಗರದಲ್ಲಿ ದೊಡ್ಡವರು ಯಾರೂ ಇಲ್ಲವೇ?. ರಾಜಕಾರಣಿಗಳು ಏನೂ ಮಾಡುತ್ತಿದ್ದಾರೆ. ಮೈಸೂರು ಮಹಾರಾಣಿ ಏನು ಮಾಡುತ್ತಿದ್ದಾರೆ. ಮರಗಳ ಹನನ ಖಂಡಿಸಿ ಸ್ಥಳದಲ್ಲೇ ಮಹಾರಾಣಿ ಕೂರಬೇಕಿತ್ತು ಅದನ್ನ ಬಿಟ್ಟು ಚಾಮರಾಜನಗರದಲ್ಲಿ ಜಾಗ ಬೇಕು ಎಂದು ಹೋಗಿದ್ದಾರೆ. ಈ ಹಿಂದೆ ರಾಜರು ಕೊಟ್ಟಿರುವ ಜಾಗ. ಅದಕ್ಕೆ ತಾವೇ ಮುಂದೆ ನಿಂತು ಜಾಗದ ಹಕ್ಕು ಪತ್ರ ಕೊಡಲು ಹೇಳಬೇಕು. ಯಾರ್ ಯಾರು ಎಲ್ಲೆಲ್ಲಿ ಇದ್ದರೋ ಅವರದೇ ಜಾಗ. ಈ ವಿಷಯದಲ್ಲಿ ಮಹಾರಾಣಿಯವರು ಜನರಿಗೆ ಆ ಜಾಗಗಳನ್ನು ಬಿಟ್ಟು ಕೊಡಬೇಕು ಎಂದು ಆಗ್ರಹಿಸಿದರು.

ಗುಂಡ್ಲುಪೇಟೆಯಲ್ಲಿ ಶೀಘ್ರವೇ ಮಾಜಿ ಸ್ಪೀಕರ್ ನಾಗರತ್ನಮ್ಮನವರ ಪ್ರತಿಮೆ ನಿರ್ಮಾಣವಾಗಲಿದೆ. ಗುಂಡ್ಲುಪೇಟೆದಿಂದ ಗೆದ್ದು ಸ್ಪೀಕರ್ ಆಗಿ ಕೆಲಸ ನಿರ್ವಹಿಸಿದ್ದರು. ಹೀಗಾಗಿ ಕನ್ನಡ ಚಳುವಳಿ ವಾಟಾಳ್ ಪಕ್ಷದ ವತಿಯಿಂದ ಪ್ರತಿಮೆ ನಿರ್ಮಾಣ ಮಾಡುತ್ತೇವೆ. ಮುಂದಿನ ವಾರ ಗುಂಡ್ಲುಪೇಟೆಗೆ ತೆರಳಿ ಸ್ಥಳ ನಿಗದಿ ಪಡಿಸುತ್ತೇವೆ. ನಾಗರತ್ನಮ್ಮ ಅದೇ ಕ್ಷೇತ್ರದಿಂದ ಗೆದ್ದು ಸ್ಪೀಕರ್ ಆಗಿದ್ದಕ್ಕೆ ಅಲ್ಲೇ ಅವರ ಪ್ರತಿಮೆ ನಿರ್ಮಾಣ ಮಾಡುತ್ತೇವೆ ಎಂದರು. ಪ್ರತಿಭಟನೆಯಲ್ಲಿ ಶಿವಶಂಕರ್, ತೇಜೇಶ್ ಲೋಕೇಶ್ ಗೌಡ, ಮೂಗೂರು ನಂಜುಂಡಸ್ವಾಮಿ, ಪಾರ್ಥಸಾರಥಿ, ರಾಘವೇಂದ್ರ, ಮಧ್ವನ ಚಂದ್ರು, ಕೃಷ್ಣಪ್ಪ, ತಾಯೂರು ಗಣೇಶ್, ಶಿವರಾಮ್‌ಗೌಡ, ಹನುಮಂತಯ್ಯ, ನಾರಾಯಣ, ಗುರು, ಕುರ್ಮಾ, ತ್ಯಾಗರಾಜ್ ಮತ್ತಿತರರು ಪಾಲ್ಗೊಂಡಿದ್ದರು.

ಪಾರ್ವತಿ ಲೋಕೇಶ್‌ಗೆ ಹಾಸ್ಯರತ್ನ ಪ್ರಶಸ್ತಿ ಪ್ರದಾನ



ರಂಗಭೂಮಿ ಕಲಾವಿದರಾದ ಪಾರ್ವತಿ ಲೋಕೇಶ್ ಅವರಿಗೆ ಹಾಸ್ಯರತ್ನ ರತ್ನಾಕರ ಪ್ರಶಸ್ತಿ ನೀಡಿ, ಅಭಿನಂದಿಸಲಾಯಿತು.

ಮೈಸೂರು, ಏ.20(ಜಿಎ)-ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕರ್ನಾಟಕ ಕಾವಲು ಪಡೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕನ್ನಡ ಚಿತ್ರರಂಗದ ಹಿರಿಯ ಹಾಸ್ಯನಟ ದಿವಂಗತ ರತ್ನಾಕರ್ ಅವರನ್ನು ಸ್ಮರಿಸಿ, ರಂಗಭೂಮಿ ಕಲಾವಿದರಾದ ಪಾರ್ವತಿ ಲೋಕೇಶ್ ಅವರಿಗೆ ಹಾಸ್ಯರತ್ನ ರತ್ನಾಕರ ಪ್ರಶಸ್ತಿ ನೀಡಿ, ಅಭಿನಂದಿಸಲಾಯಿತು.

ಸಮಾಜ ಸೇವಕ ಡಾಕ್ಟರುರಾಂ ವಾಜಪೇಯಿ ಮಾತನಾಡಿ, ಹಾಸ್ಯನಟ ರತ್ನಾಕರ ಅವರು ಕಲೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟರು. ಕಲೆಯನ್ನು ತಪಸ್ಸಿನ ರೀತಿ ಆಚರಿಸಿದರು. ಅವರ ಅಭಿನಯ, ಸಾಹಿತ್ಯ ಮತ್ತು ಹಾಡುಗಾರಿಕೆ ವಿಸ್ಮಯಕಾರಿಯಾಗಿತ್ತು ರಂಗಭೂಮಿ, ಸಂಗೀತ, ಸಾಹಿತ್ಯ, ಸಿನಿಮಾ ಇತ್ಯಾದಿ ಕಲಾ ಪ್ರಕಾರಗಳು ಎಲ್ಲರಿಗೂ ಮನೋಲ್ಲಾಸ ಮತ್ತು ಚೈತನ್ಯವನ್ನು ನೀಡುತ್ತವೆ ಎಂದರು.

ಭರತನಾಟ್ಯ ಕಲಾವಿದ ಶ್ರೀಧರ್ ಜೈನ್ ಮಾತನಾಡಿದರು. ಕಲಾವಿದ ಎನ್.ವಿ. ರಮೇಶ್, ಕನ್ನಡ ಕಾವಲುಪಡೆ ರಾಜ್ಯಾಧ್ಯಕ್ಷ ಎಂ.ಮೋಹನ್‌ಕುಮಾರ್‌ಗೌಡ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಹಾಸ್ಯನಟ ರತ್ನಾಕರ್ ಅವರ ಪುತ್ರ ರಾಘವೇಂದ್ರ ರತ್ನಾಕರ್, ನಟರಾದ ಜೈ ಪ್ರಕಾಶ್, ನಾ.ನಾಗಚಂದ್ರ, ನಿರ್ಮಾಪಕ ಪಾರ್ಥಸಾರಥಿ ಇದ್ದರು.

ಮೋಹಿತ್‌ಗೆ ಉನ್ನತ ಶ್ರೇಣಿ



ಮೈಸೂರು: ದ್ವಿತೀಯ ಪಿಯು ಪರೀಕ್ಷೆಯಲ್ಲಿ ಮೈಸೂರಿನ ಕುವೆಂಪುನಗರದ ಎಂಎಎಸ್‌ವಿಎಸ್ ಗುರುಕುಲ ಪಿಯು ಕಾಲೇಜಿನ ವಿದ್ಯಾರ್ಥಿ ಎಂ.ಎಸ್.ಮೋಹಿತ್ 542(ಶೇ 90.33) ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕನ್ನಡದಲ್ಲಿ 99, ಇಂಗ್ಲಿಷ್-84, ಫಿಸಿಕ್ಸ್-86, ಕೆಮಿಸ್ಟ್ರಿ-91, ಬಯಾಲಜಿಯಲ್ಲಿ 91 ಗಳಿಸಿದ್ದಾರೆ. ಈತ ಆರ್.ಟಿ.ಸತೀಶ್ ಮತ್ತು ಎಂ.ಜೆ ಭಾಗ್ಯ ದಂಪತಿಗಳ ಪುತ್ರ.

ಉಚಿತ ಸಾಮೂಹಿಕ ಉಪನಯನ

ಮೈಸೂರು: ಮೈಸೂರಿನ ಚಿತ್ಕಲ ಟ್ರಸ್ಟ್‌ನಿಂದ ವಿಪ್ರ ವಟುಗಳಿಗೆ ಸಾಮೂಹಿಕ ಉಚಿತ ಉಪನಯನ (ಬ್ರಹ್ಮೋಪದೇಶ) ಕಾರ್ಯಕ್ರಮವನ್ನು ಹೊಯ್ಸಳ ಕರ್ನಾಟಕ ಸಂಘದಲ್ಲಿ ಏ.22ರಂದು ಏರ್ಪಡಿಸಲಾಗಿದೆ. ಆಸಕ್ತರು ಮೇ 1ರೊಳಗೆ ಟ್ರಸ್ಟ್‌ನ ಅಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿಗಳನ್ನು ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಬಹುದು. ಮಾಹಿತಿಗೆ ಮೊ. 9480484755, 9481529770, 9880004652.

'ಶರ್ಮಿಷ್ಠೆ' ಏಕವ್ಯಕ್ತಿ ನಾಟಕದಲ್ಲಿ ಉಮಾಶ್ರೀ ಅದ್ಭುತ ಅಭಿನಯ



ಮೈಸೂರು,ಏ.20(ಎಂಕೆ)- ಹೆಣ್ಣು ಜೀವನದಲ್ಲಿ ಎಷ್ಟೇ ಅವಮಾನ, ನೋವು ಅನುಭವಿಸಿದರೂ ಅಂತಿಮವಾಗಿ ಆಕೆ ಎಲ್ಲಾ ಸವಾಲನ್ನು ದಾಟಿ ಗೆಲುವು ಸಾಧಿಸುತ್ತಾಳೆ ಎಂಬುದನ್ನು ಅತ್ಯಾಕರ್ಷಕ ಅಭಿನಯದೊಂದಿಗೆ ಪ್ರೇಕ್ಷಕರ ಅಂತರಾಳಕ್ಕಿಳಿಸಿದ ಹಿರಿಯ ರಂಗಭೂಮಿ ಕಲಾವಿದೆ, ಚಿತ್ರನಟಿ, ಮಾಜಿ ಸಚಿವೆ ಉಮಾಶ್ರೀ, ತಮ್ಮ ಅಬಿನಯ ಪ್ರೌಢಿಮೆಯನ್ನು ಮೆರೆದರು.

ಮೈಸೂರಿನ ರಂಗಾಯಣ ಮತ್ತು ರಂಗಸಂಪದ ತಂಡದ ಸಹಯೋಗದಲ್ಲಿ ರಂಗಾಯಣದ ಭೂಮಿಗೀತದಲ್ಲಿ ಪ್ರದರ್ಶನಗೊಂಡ 'ಶರ್ಮಿಷ್ಠೆ' ಏಕವ್ಯಕ್ತಿ ನಾಟಕ ಪ್ರದರ್ಶನ ರಂಗಪ್ರಿಯರ ಮನಸೂರೆಗೊಂಡಿತು.

ತಮ್ಮ ಅಚ್ಚುಕಟ್ಟು ಅಭಿನಯದ ಮೂಲಕ ಇಡೀ ರಂಗ ಮಂಟಪವನ್ನು ತಮ್ಮತ್ತ ಸೆಳೆದಿದ್ದ ಹಿರಿಯ ಕಲಾವಿದೆ ಉಮಾಶ್ರೀ ಅವರು, ಅಪಾರ ಮೆಚ್ಚುಗೆಗೆ ಪಾತ್ರರಾದರು. ಬೇಲೂರು ರಘುನಂದನ್ ರಚನೆ, ಚಿದಂಬರ ರಾವ್ ಜಂಬೆ ಅವರ ವಿನ್ಯಾಸ ಮತ್ತು ನಿರ್ದೇಶನದಲ್ಲಿ ಪ್ರಸ್ತುತಗೊಂಡ ಸುಮಾರು ಒಂದೂವರೆ ಗಂಟೆಗಳ 'ಶರ್ಮಿಷ್ಠೆ' ನಾಟಕದಲ್ಲಿ ವಿವಿಧ ಪಾತ್ರಗಳ ಮೂಲಕ, ಸ್ಪಷ್ಟ ಸಂಭಾಷಣೆಗಳೊಂದಿಗೆ ನೋಡುಗರ ಮನ ಸೆಳೆದ ಉಮಾಶ್ರೀ, ಕಿಕ್ಕಿರಿದು ತುಂಬಿದ್ದ ಅಭಿಮಾನಿಗಳಿಗೆ ಹಾಸ್ಯ, ಗಂಭೀರ, ಅಂತರಾಳದ ಭಾವನೆಗಳ ಅಭಿವ್ಯಕ್ತವನ್ನು ತೆರೆದಿಟ್ಟರು.

ಮೈಸೂರು ಜೆಎಲ್‌ಬಿ ರಸ್ತೆ ಡಿವೈಡರ್ ಮಧ್ಯೆ ಸಸಿ ನೆಡುವೆ

ಲಯನ್ಸ್‌ನ ಸಾರ್ಥ ಸಮಾವೇಶದಲ್ಲಿ ಚಿತ್ರನಟ ಅನಿರುದ್ಧ ಜಟ್ಕರ್ ಘೋಷಣೆ



ಮೈಸೂರಿನ ಕರ್ನಾಟಕ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಲಯನ್ಸ್ ಇಂಟರ್‌ನ್ಯಾಷನಲ್ ಜಿಲ್ಲೆ 317ಜಿ ಸಾರ್ಥ ದ್ವಿತೀಯ ಜಿಲ್ಲಾ ಸಮಾವೇಶದಲ್ಲಿ ನಟ ಅನಿರುದ್ಧ್ ಜಟ್ಕರ್ ಮಾತನಾಡಿದರು.

ಮೈಸೂರು,ಏ.20(ಜಿಎ)-ಮೈಸೂರಿನ ಕರ್ನಾಟಕ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಲಯನ್ಸ್ ಇಂಟರ್ ನ್ಯಾಷನಲ್ ಜಿಲ್ಲೆ 317ಜಿ ವತಿಯಿಂದ ಸಾರ್ಥ ದ್ವಿತೀಯ ಜಿಲ್ಲಾ ಸಮಾವೇಶ ನಡೆಯಿತು.


ಸಮ್ಮೇಳನಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪದ್ಮಶ್ರೀ ಪುರಸ್ಕೃತರು ಹಾಗೂ ಕಿದ್ವಾಯಿ ಆಸ್ಪತ್ರೆಯ ನಿವೃತ್ತ ನಿರ್ದೇಶಕಿ ಡಾ.ವಿಜಯಲಕ್ಷ್ಮಿ ದೇಶಮಾನೆ, ಚಿತ್ರನಟ ಅನಿರುದ್ಧ್ ಜಟ್ಕರ್ ಅವರು ಸಮ್ಮೇಳನಕ್ಕೆ ಚಾಲನೆ ನೀಡಿದರು.

ನಂತರ ನಟ ಅನಿರುದ್ಧ್ ಜಟ್ಕರ್ ಮಾತನಾಡಿ, ಇಂದಿನ ಸಮಾವೇಶ ಶಿಸ್ತಿನಿಂದ ಕೂಡಿದ್ದು, ಅದ್ಭುತವಾಗಿ ಮಾಡಿದ್ದಾರೆ. ಸಾಮಾಜಿಕ, ಸೇವಾ ಕಾರ್ಯಕ್ರಮ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ವಿಭಿನ್ನತೆಯಿಂದ ಕೂಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ನನ್ನ ತಂದೆ ತಾಯಿ ಇಬ್ಬರೂ ಸಹ ರೋಟರಿ, ಲಯನ್ಸ್ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಅದರಂತೆ ನಾನು ಸಹ ರೋಟರಿ, ಲಯನ್ಸ್ ಸಂಸ್ಥೆಯ ಸದಸ್ಯನಾಗಿ ತೊಡಗಿಸಿಕೊಂಡಿದ್ದೇನೆ. ಆದ್ದರಿಂದ ಎರಡು ಸಂಸ್ಥೆಗಳ ಬಗ್ಗೆ ಸಾಕಷ್ಟು ತಿಳಿದುಕೊಂಡಿದ್ದೇನೆ. ಇಂದು ಲಯನ್ಸ್‌ನ ವರ್ಷದ ಸೇವಾ ಚಟುವಟಿಕೆ ಕೇಳಿದೆ. ಬಹಳ ಸ್ಫೂರ್ತಿದಾಯಕವಾಗಿತ್ತು ಎಂದ ಅವರು, ಮೈಸೂರಿಗೆ ಏನಾದರೂ ಮಾಡಬೇಕು ಎಂಬ ಆಸೆ ಬಹುದಿನದಿಂದ ಇದೆ. ಅದರಂತೆ ಜೆಎಲ್‌ಬಿ ರಸ್ತೆಯಲ್ಲಿರುವ ಕಿಂಗ್ಸ್ ಕೋರ್ಟ್ ಹೋಟೆಲ್ ಮುಂಭಾಗದಲ್ಲಿರುವ ಡಿವೈಡರ್ ಮಧ್ಯೆ ಸಸಿ ನೆಡುವ ಉದ್ದೇಶವಿದ್ದು, ಈ ಕುರಿತು ಪಾಲಿಕೆಯಿಂದ ಅನುಮತಿ ಸಿಕ್ಕಿದೆ. ಮಳೆಗಾಲಕ್ಕೂ ಮುನ್ನ ಲಯನ್ಸ್ ಜೊತೆ ಕೈ ಜೋಡಿಸಿ ಈ ಕೆಲಸ ಮಾಡುತ್ತೇನೆ ಎಂದರು.

ಜಿಲ್ಲಾ ರಾಜ್ಯಪಾಲ ಲಯನ್ ಎನ್.ಸುಬ್ರಹ್ಮಣ್ಯ ಮಾತನಾಡಿ, ದೂರದೃಷ್ಟಿ, ಪರಿಸರ ಸಂರಕ್ಷಣೆ, ಯುವ ಜನತೆಯಲ್ಲಿ ಜಾಗೃತಿ, ಮಕ್ಕಳ ಕ್ಯಾನ್ಸರ್ ನಿಯಂತ್ರಣ, ಮಧುಮೇಹ ನಿವಾರಣೆ ಹಾಗೂ ಹಸಿವು ಮುಕ್ತ ಸಮಾಜ ನಿರ್ಮಾಣ ಇದರ ಮೂಲ ಉದ್ದೇಶವಾಗಿದೆ. ಮಧುಮೇಹ ಒಂದು ಸಾಂಕ್ರಾಮಿಕ ರೋಗ, ಪ್ರತಿ ನೂರು ಜನರಲ್ಲಿ ಒಬ್ಬರಿಗೆ ಹರಡುತ್ತದೆ. ನಾವು ಮಧುಮೇಹಕ್ಕೂ ಅಷ್ಟೇ ಪ್ರಾಮುಖ್ಯತೆ ಕೊಡುತ್ತಿದ್ದೇವೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಮಲ್ಟಿಪಲ್ ಚೇರ್ ಪರ್ಸನ್ ಡಾ.ಎನ್.ಕೃಷ್ಣೇಗೌಡ, ಸಂಪುಟ ಸಲಹೆಗಾರ ಲಯನ್ ಕಿದೇವೆಗೌಡ, ಮೊದಲನೇ ಉಪ ಜಿಲ್ಲಾ ರಾಜ್ಯಪಾಲ ಲಯನ್ ಕೆ.ಎಲ್.ರಾಜಶೇಖರ್, ಎರಡನೇ ಉಪ ಜಿಲ್ಲಾ ರಾಜ್ಯಪಾಲ ಲಯನ್ ಎಸ್.ಮತಿ ದೇವ್‌ಕುಮಾರ್, ಜಿಲ್ಲಾ ಸಂಪುಟ ಕಾರ್ಯದರ್ಶಿ ಲಯನ್ ಸಿ.ಡಿ.ಕೃಷ್ಣ, ಖಜಾಂಚಿ ಲಯನ್ ಪುನೀತ್‌ಕುಮಾರ್, ಜಿಲ್ಲಾ ರಾಯಭಾರಿ ಲಯನ್ ವಿ.ವರ್ಷ, ಎಸ್. ನವೀನ್, ಎಂ.ಸಿದ್ದೇಗೌಡ, ಭರತೇಶ್, ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.04.2025 ಸೋಮವಾರ, ಮಳೆ ನಕ್ಷತ್ರ: ಅಶ್ವಿನಿ 13.04.2025 ರಿಂದ 26.04.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಉತ್ತರಾಷಾಢ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಯಕೃತ್ತಿನ ಸಮಸ್ಯೆಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಮತ್ತು ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಮಕ್ಕಳ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಚರ್ಮರೋಗ ಕುರಿತು ಚಿಕಿತ್ಸೆ ಹಾಗೂ ಪುನಶ್ಚೇತನ (ರೆಜುವಿನೇಷನ್) ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಆಸ್ಪತ್ರೆಯ ಶಾಲಾಕ್ಯತಂತ್ರ ಸ್ನಾತಕೋತ್ತರ ವಿಭಾಗದ ವತಿಯಿಂದ ನೇತ್ರ, ಕಿವಿ, ಮೂಗು, ಗಂಟಲು ಮತ್ತು ಶಿರೋರೋಗಗಳ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಕಾನೂನು ಮಹಾವಿದ್ಯಾಲಯ, ಕುವೆಂಪುನಗರ, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಮಹಿಳಾ ಕಾಲೇಜು (ಸ್ವಾಯತ್ತ), ಕನ್ನಡ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಮುಕ್ತ ಗಂಗೋತ್ರಿ:** ಪಂಪನ ಕಾವ್ಯಗಳು-ಪುನರಾವಲೋಕನ, ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ, ದಿವ್ಯ ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮಿಗಳು, ಅಧ್ಯಕ್ಷತೆ: ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಉದ್ಘಾಟನೆ: ಬಹುಮುಖಿ ಚಿಂತಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಸ್ಥಳ: ನವಜ್ಯೋತಿ ಸಭಾಂಗಣ, ಮುಕ್ತ ವಿವಿ, ಬೆಳಗ್ಗೆ 10.30ಕ್ಕೆ.

■ **ಅರಳಿಕಟ್ಟೆ ಶ್ರೀರಾಮ ದೇವಸ್ಥಾನ ಧಾರ್ಮಿಕ ಮತ್ತು ದಾನದತ್ತಿ:** ಶ್ರೀ ವಿಶ್ವವಸು ನಾಮ ಸಂವತ್ಸರದ ಶ್ರೀರಾಮ ನವಮಿ, ಬೆಳಗ್ಗೆ ಹನುಮೋತ್ಸವ, ಖಿಲ್ಲೆ ಮೊಹಲ್ಲಾದ ಶೇಷಗಿರಿ ಭಜನಾ ಮಂಡಳಿಯಿಂದ ಸಂಗೀತ ಕಾರ್ಯಕ್ರಮ, ಸ್ಥಳ: ಶ್ರೀರಾಮ ದೇವಸ್ಥಾನ, ಜಯಲಕ್ಷ್ಮೀ ವಿಲಾಸ ರಸ್ತೆ, ಚಾಮರಾಜಪುರಂ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್:** ಶ್ರೀ ವಿಶ್ವವಸು ನಾಮ ಸಂವತ್ಸರದ 135ನೇ ವರ್ಷದ ಶ್ರೀ ರಾಮೋತ್ಸವ ಬಳೆಗುಡಿ ಉತ್ಸವ, ಸಂಜೆ 6.30ರಿಂದ ಹರಿಕಥೆ, ಹರಿಕಥಾ ವಿ. ಸೀತಾರಾಂ ಮುನಿಕೋಟಿ ಅವರಿಂದ. ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮ ಪೇಟೆ.


■ **ನೃತ್ಯ ವರ್ಣ ಕಲಾ ಸೌರಭ, ಮೈಸೂರು :** ದೇಸಿ ಬೇಸಿಗೆ ಶಿಬಿರ-2025 ಸಮಾರೋಪ ಸಮಾರಂಭ, ಉದ್ಘಾಟನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಮೈಸೂರು ವಿಭಾಗ)ಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಮುಖ್ಯ ಅತಿಥಿ: ರಂಗ ಕಲಾವಿದ ದಿನೇಶ್ ಚಮ್ಮಾಳಿಗೆ, ರಂಗಭೂಮಿ ಕಲಾವಿದ ಶ್ರೀ ಜೆ.ಕೆ. ಮೈಸೂರು, ನೃತ್ಯ ವರ್ಣ ಕಲಾ ಸೌರಭದ ಸಂಸ್ಥಾಪಕ ನಿರ್ದೇಶಕಿ ಶ್ರೀಮತಿ ಕಲ್ಪಿತ ಪ್ರಶಾಂತ, ನಾಟಕ-ದೇವ ವೃದ್ಧರು, ಸ್ಥಳ: ಕಿರುರಂಗಮಂದಿರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10-ಚಿಂತನ, 6.15-ಗೀತಾರಾಧನ, 6.35 ಮತ್ತು ಸಂಜೆ 6.10: ಆಧಾರ ಶಿಲೆ, ಮೈಸೂರು ಸುತ್ತಲಿನ ಪ್ರಾಗೈತಿಹಾಸಿಕ ತಾಣಗಳ ಪರಿಚಯ ಮಾಲಿಕೆ. ಪ್ರಸ್ತುತಿ: ಡಾ.ರಾಮದಾಸ್ ರೆಡ್ಡಿ, 6.40-ಅರಿವಿನ ಶಿಖರ, ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ-ಎ.ಎನ್.ಶೀಲಾ, ಪಿ.ಸುರಭೀ ವ್ಯಾಖ್ಯಾನ-ಕೆ.ಎಲ್.ಪದ್ಮಿನಿ ಹೆಗಡೆ, 6.50-ರೈತರಿಗೆ ಸಲಹೆ, 7.15-ಭರವಸೆ ಹೊನಲು, ವೈದ್ಯರ ಕಿವಿಮಾತು, ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು -ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30-ಯೋಗ ಕುರಿತ ವಿಶೇಷ ಸರಣಿ, ಮಹಾಯೋಗ, ವಿಷಯ: ಭಾಗವಹಿಸುತ್ತಾರೆ, ನಿರ್ಮಾಣ-ನಂದನ್ ಕುಮಾರ್ ಎಲ್.ಒ., 8.35-ಕನ್ನಡ ಚಿತ್ರಗೀತೆಗಳು, 9.00-ನೆನಪಿನಂಗಳ (ಧ್ವನಿ ಭಂಡಾರದಿಂದ) 10.00-ಕರ್ನಾಟಕ ಶಾಸ್ತ್ರೀಯ ಸಂಗೀತ :ಎಸ್. ಗಾಯತ್ರಿ - ಹಾಡುಗಾರಿಕೆ, 11.00-ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ, ಗೇಮ್ ಶೋ, ಪ್ರಸ್ತುತಿ: ಕೀರ್ತನಾ. ವಿ ಮತ್ತುಚಿನ್ಮಯಿ. ಕೆ. ಎಸ್, 12.05 ವನಿತಾ ವಿಹಾರ, 12.35 ದೇವರನಾಮ-ಪುರಂದರದಾಸರ ರಚನೆಗಳು, 12.45 ನಮ್ಮ ಆರೋಗ್ಯ-1.00 ಪ್ರಗತಿ ಪಥ-ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ,1.20 ಭಾವಗೀತೆಗಳು-ಕೆ.ಎಸ್.ಸುರೇಖ, 2.40-ಚಿತ್ರಗೀತೆಗಳು, 3.00-ಕರ್ನಾಟಕ ಶಾಸ್ತ್ರೀಯ ಸಂಗೀತ :ಎಂ.ಎಲ್.ವಸಂತಕುಮಾರಿ-ಹಾಡುಗಾರಿಕೆ, 4.00 ಮಹಿಳಾರಂಗ-ನಾನು ನನ್ನ ಕಂಪನಿ, ಬೀಟೆ ಮರ ಬಳಸಿ ಕರಕುಶಲ ವಸ್ತುಗಳನ್ನು ತಯಾರಿಸುವ ಜ್ಯೋತಿ ಅವರೊಂದಿಗೆ ಮಾತುಕತೆ, 4.45-ಹಿಂದಿ ಪಾಠ, 5.05-ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50-ಕೃಷಿರಂಗ : ಜೈವಿಕ ಗೊಬ್ಬರದ ಮಹತ್ವ ಈ ಕುರಿತು ಮಂಡ್ಯದ ವಿ.ಸಿ. ಫಾರಂ ಕೃಷಿ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ.ಎನ್. ಎನ್.ಆಶಾ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ -ಮೈಸೂರು ವಿಶ್ವವಿದ್ಯಾಲಯದ 105ನೇ ಘಟಿಕೋತ್ಸವದಲ್ಲಿ ಎಂ. ಕಾಂ ವಿಷಯದಲ್ಲಿ ಪ್ರಥಮ rankನೊಂದಿಗೆ 3 ಚಿನ್ನದ ಪದಕ ಹಾಗೂ ನಗದು ಪುರಸ್ಕಾರ ಗಳಿಸಿದ ಸಂಜನಾ ಪ್ರಭು. ಎಸ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ-ಬೇದ್ರೆ ಮಂಜುನಾಥ್, 9.30-ಕರ್ನಾಟಕ ಶಾಸ್ತ್ರೀಯ ಸಂಗೀತ: ಮೈಸೂರು. ಎಂ.ನಾಗರಾಜ್ ಮತ್ತು ಡಾ.ಮೈಸೂರು. ಎಂ.ಮಂಜುನಾಥ್-ಯುಗಳ ವಯೋಲಿನ್ ವಾದನ, 10.00 ರೂಪಕ - ಹರಿಯನ್ನರಸಿದ ವನಿತೆಯರು, ರಚನೆ ಮತ್ತು ಪ್ರಸ್ತುತಿ: ಡಾ.ಸುಕನ್ಯಾ ಪ್ರಭಾಕರ್, 10.30-ಸವಿನೆನಪು, ಹಳೆಯ ಕನ್ನಡ ಚಿತ್ರಗೀತೆಗಳು.

ಅಭಿಮಾನಿಗಳ ರೋಮಾಂಚನಗೊಳಿಸಿದ ಕುಸ್ತಿ ಪಟುಗಳು


'ಗರಡಿ ಗಮ್ಮತ್ತು' ಕೃತಿಯನ್ನು ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘದ ಗೌರವಾಧ್ಯಕ್ಷ ಪೈ.ಎಸ್.ಮಹದೇವ್ ಲೋಕಾರ್ಪಣೆಗೊಳಿಸಿದರು. ಶಾಸಕ ಕೆ.ಹರೀಶ್‌ಗೌಡ, ಹಿರಿಯ ಪತ್ರಕರ್ತ ರವೀಂದ್ರ ಭಟ್ಟ, ಹಿರಿಯ ವಕೀಲ ಓ.ಶಾಮ್ ಭಟ್ ಮತ್ತಿತರರು ಚಿತ್ರದಲ್ಲಿದ್ದಾರೆ.

ಮೈಸೂರು, ಏ.20(ಎಂಕೆ)– ಮೈಸೂರಿನ ದೊಡ್ಡಕೆರೆ ಮೈದಾನದ ಸಾಹುಕಾರ್ ಶ್ರೀ ಎಸ್.ಚನ್ನಯ್ಯ ಕ್ರೀಡಾಂಗಣದ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಕುಸ್ತಿ ಅಖಾಡದಲ್ಲಿ ತೊಡೆತಟ್ಟಿ ಗೆಲುವಿಗಾಗಿ ಸೆಣಸಾಡಿದ ಕುಸ್ತಿ ಪಟುಗಳು, ಎದುರಾಳಿಗಳಿಗೆ ಮಣ್ಣು ಮುಕ್ಕಿಸಿ ಗೆದ್ದು ಬೀಗಿದರಲ್ಲದೆ ನೆರೆದಿದ್ದ ಕುಸ್ತಿ ಅಭಿಮಾನಿಗಳಿಗೆ ಮನರಂಜನೆ ನೀಡಿದರು.

ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘದ ವತಿಯಿಂದ ಭಾನುವಾರ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ 40 ಜೋಡಿ ನಾಡಕುಸ್ತಿ ಪಂದ್ಯಾವಳಿಯಲ್ಲಿ ದೂಳೆಬ್ಬಿಸಿದ ಕುಸ್ತಿ ಕಲಿಗಳು, ಪಟ್ಟುಗೆ ಪ್ರತಿ ಪಟ್ಟು ಹಾಕಿ ಗೆಲುವಿನ ಹೋರಾಟ ನಡೆಸಿದರು.

ಕನಕಪುರ ಪೈ.ಪವನ್ ವಿರುದ್ಧ ಪೈ.ಹರ್ಷವರ್ಧನ್, ಕ್ಯಾತಮಾರನಹಳ್ಳಿ ಪೈ.ಮಿಥುನ್ ವಿರುದ್ಧ ಆಲನಹಳ್ಳಿ ಪೈ.ಕೌಸ್ತುಭ್, ನಜರ್‌ಬಾದ್ ಪೈ.ನಿತಿನ್ ವಿರುದ್ಧ ಮಂಡ್ಯ ಪೈ.ಸಿ.ಎ.ಹೇಮಂತ್, ಪೈ.ವರುಣ್ ವಿರುದ್ಧ ಪೈ.ಪೃಥ್ವಿಕ್, ಪೈ.ಶಶಾಂಕ್‌ಗೌಡ ವಿರುದ್ಧ ಪೈ.ಪುನೀತ್, ಪೈ.ಹೇಮಂತ ವಿರುದ್ಧ ಟಿ.ನರಸೀಪುರ ಪೈ.ಸೂರ್ಯ, ಪೈ.ಮನೋಹರ್ ವಿರುದ್ಧ ಪೈ.ಚಿರಂಜೀವಿ ಗೆಲುವು ಸಾಧಿಸಿದರು. ಉಳಿದ ಪಂದ್ಯಗಳು ಸಮಬಲದೊಂದಿಗೆ ಅಂತ್ಯಕಂಡವು. ಪಂದ್ಯದ ಬಳಿಕ ಕುಸ್ತಿ ಪಟುಗಳಿಗೆ ಪ್ರೋತ್ಸಾಹ ಧನ ನೀಡಿ ಅಭಿನಂದಿಸಲಾಯಿತು.

ಇದಕ್ಕೂ ಮುನ್ನ ಕ್ರೀಡಾ ಜ್ಯೋತಿಯನ್ನು ತಂದು ಅಂಬಾತಾಯಿ(ಮಟ್ಟಿ ಅಖಾಡಕ್ಕೆ)ಗೆ ಪೂಜೆ ಸಲ್ಲಿಸಿದ ಹಿರಿಯ ಕುಸ್ತಿ ಪಟುಗಳು, ಕುಸ್ತಿ ಪಂದ್ಯಾವಳಿ ಯಶಸ್ವಿಗೆ ಪ್ರಾರ್ಥನೆ ಸಲ್ಲಿಸಿದರು. ಪಂದ್ಯಾವಳಿ ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಕೆ.ಹರೀಶ್‌ಗೌಡ, ಕುಸ್ತಿ ಪಟುಗಳ ಭುಜ ತಟ್ಟಿ ನಾಡಕುಸ್ತಿಗೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ವಿಶ್ವ ವಿಖ್ಯಾತ ಮೈಸೂರು ದಸರಾ ಮತ್ತು ಕುಸ್ತಿಗೂ ಅವಿನಾಭಾವ ಸಂಬಂಧವಿದೆ. ಕುಸ್ತಿ ಎಂದರೆ ಕುಸ್ತಿಪಟುಗಳಿಗೆ ಏನೋ ಸಂಭ್ರಮ. ದೇಶದ ಮೂಲೆ ಮೂಲೆಗಳಿಂದ ಸಾಂಸ್ಕೃತಿಕ ನಗರಿಗೆ ಆಗಮಿಸುವ ಪೈಲ್ವಾನರು, ಮೈಸೂರಿನ ಕುಸ್ತಿ ಅಖಾಡದಲ್ಲಿ ಹಣಾಹಣಿ ನಡೆಸುವುದೇ ಅವರಿಗೆ ಪ್ರತಿಷ್ಠೆಯ ವಿಚಾರ. ಹಾಗಾಗಿ ಮೈಸೂರಿನಲ್ಲಿ ಕುಸ್ತಿ ಪಂದ್ಯಾವಳಿ ಮುಂದುವರಿಯಬೇಕು. ಕುಸ್ತಿ ಕಲೆಗೆ ನಿರಂತರ ಪ್ರೋತ್ಸಾಹ ದೊರೆಯಬೇಕು ಎಂದರು.

ಗರಡಿ ಗಮ್ಮತ್ತು ಕೃತಿ ಬಿಡುಗಡೆ: ಇದೇ ವೇಳೆ ಕ್ರೀಡಾ ವರದಿಗಾರ ಗಿರೀಶ್ ದೊಡ್ಡಮನಿ ರಚಿತ 'ಗರಡಿ ಗಮ್ಮತ್ತು' ಕೃತಿಯನ್ನು ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘದ ಗೌರವಾಧ್ಯಕ್ಷರೂ ಆದ ಹಿರಿಯ ಪೈ.ಎಸ್.ಮಹದೇವ್ ಲೋಕಾರ್ಪಣೆಗೊಳಿಸಿದರು. ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷ ಎಸ್.ಚಂದ್ರಶೇಖರ್, ಹಿರಿಯ ವಕೀಲ ಓ.ಶಾಮ್ ಭಟ್, ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘದ ಅಧ್ಯಕ್ಷ ಪಿ.ನಾಗೇಂದ್ರ, ಕಾರ್ಯಾಧ್ಯಕ್ಷ ಸಿ.ಬಸವರಾಜ್, ಸಮಾಜ ಸೇವಕ ಜಿ.ಎನ್.ಅನಂತವರ್ಧನ್, ಪೈ.ಎಂ.ಪ್ರವೀಣ್ ಕುಮಾರ್, ಪೈ.ಎಂ.ಸುಪುತ್ರ, ಕ್ಯಾತಮಾರನಹಳ್ಳಿ ರವಿ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಕುಸ್ತಿ ಪಟುಗಳ ಪ್ಯಾರಡೈಸ್(ಸ್ವರ್ಗ)...!

ಮೈಸೂರಿನ ಗರಡಿ ಮನೆಗಳ ಬಗ್ಗೆ ಬರೆದಿರುವ 'ಗರಡಿ ಗಮ್ಮತ್ತು' ಪುಸ್ತಕ ಬಿಡುಗಡೆಯಾಗಿದೆ. ಈ ಪುಸ್ತಕವನ್ನು ಮೈಸೂರು ಗರಡಿ ಮನೆಗಳ ವಿಶ್ವಕೋಶ ಎಂದರೂ ತಪ್ಪಾಗಲಾರದು. ಈ ಪುಸ್ತಕ ಓದಿದರೆ ಮೈಸೂರಿಗೆ ಸಾಂಸ್ಕೃತಿಕ ನಗರಿ ಜೊತೆಗೆ ಪೈಲ್ವಾನರ ಪ್ಯಾರಡೈಸ್(ಸ್ವರ್ಗ) ಎನ್ನಬಹುದು.
- ರವೀಂದ್ರ ಭಟ್ಟ, ಹಿರಿಯ ಪತ್ರಕರ್ತ


ನಾಡಕುಸ್ತಿ ಪಂದ್ಯಾವಳಿಯಲ್ಲಿ ಗೆಲುವಿಗಾಗಿ ಸೆಣಸುತ್ತಿರುವ ದೃಶ್ಯವನ್ನು ಕಾಣಬಹುದು

ಜಾತಿ ಜನಗಣತಿ ವಿವಾದ: ಕಾಂಗ್ರೆಸ್ ಹೈ ಕಮಾಂಡ್ ಅಂಗಳಕ್ಕೆ

ಬೆಂಗಳೂರು, ಏ.20– ಜಾತಿ ಗಣತಿ ವರದಿ ರಾಜ್ಯದಲ್ಲಿ ಭಾರೀ ಚರ್ಚೆ ಹಾಗೂ ವಿರೋಧಕ್ಕೆ ಕಾರಣವಾಗಿದೆ. ಸರ್ಕಾರದ ಸಚಿವ ಸಂಪುಟದಲ್ಲೇ ವರದಿಗೆ ಇದಕ್ಕೆ ಅಪಸ್ವರ ವ್ಯಕ್ತವಾಗಿದೆ. ಸಂಪುಟದಲ್ಲಿರುವ ಒಕ್ಕಲಿಗ, ಲಿಂಗಾಯತ ನಾಯಕರು ವರದಿ ಮರುಪರಿಶೀಲಿಸಬೇಕೆಂದು ಆಗ್ರಹಿಸಿದ್ದಾರೆ. ಹೀಗಾಗಿ ವಿಪಕ್ಷಗಳು ಇದನ್ನೇ ತಮ್ಮ ಅಸ್ತ್ರವಾಗಿಸಿಕೊಂಡು ಸರ್ಕಾರ ಕಾಲೆಳೆಯುವ ಪ್ರಯತ್ನ ಮಾಡುತ್ತಿವೆ. ಈ ಎಲ್ಲಾ ಬೆಳವಣಿಗೆ ನಡುವಲ್ಲೇ ವರದಿಯು ಇದೀಗ ಕಾಂಗ್ರೆಸ್ ಹೈಕಮಾಂಡ್ ಅಂಗಳ ತಲುಪಿದೆ.


ಸಂಪುಟ ಸಭೆಯಲ್ಲಿ ನಡೆದ ಬೆಳವಣಿಗೆಗಳ ಕುರಿತು ರಾಹುಲ್ ಗಾಂಧಿಯವರಿಗೆ ಮಾಹಿತಿ ನೀಡಲು ನಿರ್ಧರಿಸಿದ್ದಾರೆಂದು ತಿಳಿದುಬಂದಿದೆ. ಕೆಲ ಸಚಿವರು ವರದಿಗೆ ವಿರೋಧ ವ್ಯಕ್ತಪಡಿಸಿದ್ದು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಇತರ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ದೂರು ನೀಡುವ ಸಾಧ್ಯತೆಗಳಿವೆ ಎನ್ನಲಾಗಿದೆ. ಹೀಗಾಗಿ ಇದನ್ನು ತಡೆಯಲು ಮುಖ್ಯಮಂತ್ರಿಗಳು ಸಚಿವ ಅಭಿಪ್ರಾಯಗಳನ್ನು ಸಂಗ್ರಹಿಸಿ ಹೈಕಮಾಂಡ್‌ಗೆ ಕಳುಹಿಸಲು ನಿರ್ಧರಿಸಿದ್ದಾರೆಂದು ಮೂಲಗಳು ತಿಳಿಸಿವೆ.

ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯದ ಸಚಿವರುಗಳು ಜಾತಿ ಗಣತಿಗೆ ಆಕ್ಷೇಪಿಸಿ ಸಂಪುಟದಲ್ಲಿ ಧ್ವನಿ ಎತ್ತಿದ್ದರು. ಹಿಂದುಳಿದ, ಅಲ್ಪಸಂಖ್ಯಾತ, ದಲಿತ ಸಮಾಜದಿಂದ ಬಂದಿರುವ ಸಚಿವರುಗಳು ವರದಿ ಪರ ಮಾತನಾಡಿದ್ದರು. ತಟಸ್ಥ ನಿಲುವು ತಳೆದವರೂ ಇದ್ದರು. ಈ ಎಲ್ಲ ಅಂಶಗಳ ಬಗ್ಗೆಯೂ ಹೈಕಮಾಂಡ್‌ಗೆ ವಿಸ್ತೃತವಾದ ಮಾಹಿತಿ ನೀಡಲಿದ್ದಾರೆಂದು ತಿಳಿದುಬಂದಿದೆ.

ಜಾತಿ ಗಣತಿ ಬಗ್ಗೆ ನಮ್ಮ ಪಕ್ಷದ ಪ್ರಣಾಳಿಕೆಯಲ್ಲೇ ಪ್ರಸ್ತಾಪಿಸಲಾಗಿದೆ. ಹಾಗಾಗಿ ನುಡಿದಂತೆ ನಡೆದುಕೊಳ್ಳಬೇಕು. ಸಾಮಾಜಿಕ ನ್ಯಾಯ ಪರಿಪಾಲನೆಗೆ ಕೊಟ್ಟಿರುವ ಈ ಭರವಸೆ ಈಡೇರಿಸದಿದ್ದರೆ ತಪ್ಪಾಗುತ್ತದೆ ಎಂದು ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿಯವರು ಕಿವಿಮಾತು ಹೇಳಿದರು ಎಂದು ವರದಿಯಾಗಿದೆ.

ಸಂಪುಟ ಸಭೆಯಲ್ಲಿ ಚರ್ಚೆಯ ವೇಳೆಯೇ ಸಿದ್ದರಾಮಯ್ಯ ಅವರು, ರಾಜ್ಯದ 20–30 ಕ್ಷೇತ್ರಗಳನ್ನು ಹೊರತುಪಡಿಸಿ, ಉಳಿದ ಸ್ಥಾನಗಳು ಅಹಿಂದ ಮತಗಳಿಂದ ನಿರ್ಧರಿಸಲ್ಪಡುತ್ತವೆ ಎಂಬುದನ್ನು ಸಾಬೀತುಪಡಿಸಲು ಪ್ರತಿಯೊಂದು ವಿಧಾನಸಭಾ ಕ್ಷೇತ್ರದ ಜಾತಿ ಜನಗಣತಿ ವರದಿ ಪಡೆಯಲು ಮುಂದಾಗಿದ್ದಾರೆಂದು ಮೂಲಗಳು ತಿಳಿಸಿವೆ.

ಮಾಜಿ ಸಿಎಂ ಯಡಿಯೂರಪ್ಪ ವಿರುದ್ಧದ ಭ್ರಷ್ಟಾಚಾರ ಪ್ರಕರಣ: ಇಂದು ಸುಪ್ರೀಂ ಕೋರ್ಟ್ ತೀರ್ಪು



ನವದೆಹಲಿ, ಏ.20– ಕರ್ನಾಟಕದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ವಿರುದ್ಧದ ಡಿನೋಟಿಫಿಕೇಷನ್ ಪ್ರಕರಣದಲ್ಲಿ ಸಲ್ಲಿಕೆಯಾಗಿದ್ದ ವಿವಿಧ ಅರ್ಜಿಗಳ ವಿಚಾರಣೆ ನಡೆಸಿರುವ ಸುಪ್ರೀಂ ಕೋರ್ಟ್, ಈ ಕುರಿತ ತೀರ್ಪನ್ನು ಸೋಮವಾರ ಪ್ರಕಟಿಸಲಿದೆ.

ಭ್ರಷ್ಟಾಚಾರ ಪ್ರಕರಣದಡಿ ಸಾರ್ವಜನಿಕ ಸೇವೆಯ ವ್ಯಕ್ತಿ ವಿರುದ್ಧ ತನಿಖೆಗೆ ಅನುಮತಿ ನೀಡುವುದಕ್ಕೆ ಈ ಅರ್ಜಿಗಳು ಪ್ರಾಥಮಿಕವಾಗಿ ಸಂಬಂಧಿಸಿವೆ. ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದಿವಾಲಾ, ಮನೋಜ್ ಮಿಶ್ರಾ ಅವರಿದ್ದ ಪೀಠ ಏ. 21ರಂದು ತೀರ್ಪು ಪ್ರಕಟಿಸಲಿದೆ.

ಯಡಿಯೂರಪ್ಪ ಪರ ವಕಾಲತ್ತು ವಹಿಸಿರುವ ಹಿರಿಯ ವಕೀಲ ಸಿದ್ಧಾರ್ಥ ಲುಥಾರಾ ಅವರು, ಯಡಿಯೂರಪ್ಪ ವಿರುದ್ಧ ತನಿಖೆಗೆ ಕೋರಿದ್ದ ಅರ್ಜಿಯನ್ನು ಹೈಕೋರ್ಟ್ ಹಿಂದೆ ವಜಾ ಮಾಡಿತ್ತು. ಆದರೆ, ಅದನ್ನು ಪ್ರಶ್ನಿಸಲಾಗಿಲ್ಲ. ಇದೇ ಸ್ವರೂಪದ ಮತ್ತೊಂದು ದೂರನ್ನು ಕೆಳ ಹಂತದ ಕೋರ್ಟ್ ತಳ್ಳಿಹಾಕಿತ್ತು. ಆದರೆ, ಈ ಆದೇಶವನ್ನು ಹೈಕೋರ್ಟ್ ತಡೆಹಿಡಿದಿದೆ ಎಂದು ತಿಳಿಸಿದರು.

ಭ್ರಷ್ಟಾಚಾರ ಆರೋಪದ ಪ್ರಕರಣದಲ್ಲಿ ಸಾರ್ವಜನಿಕ ಸೇವೆಯಲ್ಲಿರುವ ವ್ಯಕ್ತಿಯ ವಿರುದ್ಧ ತನಿಖೆಗೆ ಭ್ರಷ್ಟಾಚಾರ ನಿಗ್ರಹ ಕಾಯ್ದೆಯ ಸೆಕ್ಷನ್ 17ಎ ಅನ್ವಯ ಪೂರ್ವಾನುಮತಿ ಅಗತ್ಯ ಎಂಬುದಕ್ಕೆ ಸಂಬಂಧಿಸಿದ ಪ್ರಕರಣ ಇದಾಗಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಸರ್ಕಾರ ಬಂದ್ಮೇಲೆ ಜನಿವಾರ, ಶಿವದಾರ, ಉಡುದಾರಕ್ಕೂ ಕತ್ತರಿ ಬೀಳ್ತಿದೆ

ವಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ



ಬೆಂಗಳೂರು, ಏ.20– ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಜನಿವಾರ, ಶಿವದಾರ, ಉಡುದಾರ ಎಲ್ಲದಕ್ಕೂ ಕತ್ತರಿ ಬೀಳುತ್ತಿದೆ. ತಾಳಿಗೆ ಭಾಗ್ಯ ಇಲ್ಲ, ಹಿಜಬ್‌ಗೆ ಬಹುಪರಾಕ್ ನಡೆಯುತ್ತಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ ನಡೆಸಿದರು.

ಹೈಕಮಾಂಡ್ ಸೂಚನೆ ಮೇರೆಗೆ ನ್ಯಾಷನಲ್ ಹೆರಾಲ್ಡ್ ಪ್ರಕರಣ ಸಂಬಂಧ ವಿಧಾನಸೌಧದಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಲ್ಲಿ ಅಂಬೇಡ್ಕರ್ ಸಂವಿಧಾನದ ಸರ್ಕಾರ ಇಲ್ಲ. ಧಾರವಾಡದಲ್ಲಿಯೂ ಜನಿವಾರ ಪ್ರಕರಣ ನಡೆದಿದೆ ನಂದನ್ ಎಂಬ ವಿದ್ಯಾರ್ಥಿಗೆ ಜನಿವಾರ ಕತ್ತರಿಸಿ ಪರೀಕ್ಷೆ ಬರೆಸಿದ್ದಾರೆ. ಪರೀಕ್ಷೆ ಅಂದರೆ ಎಲ್ಲ ವಿದ್ಯಾರ್ಥಿಗಳಲ್ಲೂ ಉದ್ವೇಗ ಇರುತ್ತದೆ ಆದರೆ ಜನಿವಾರ ತೆಗೆಯಲು ತಿಳಿಸಿ ಆ ಭಾವನೆಯನ್ನು ಘಾಸಿ ಮಾಡುತ್ತೀರಾ. ಈ ಮೊದಲು ಮುಸ್ಲೀಮರಿಗೆ ಹಿಜಬ್ ತೆಗೆದಿದ್ದಕ್ಕೆ ಬಾಯಿ ಬಾಯಿ ಬಡಿದುಕೊಂಡಿದ್ದರು. ಜನಿವಾರ ಒಂದು ದಾರ ಅಷ್ಟೇ, ಅದು ಹಿಜಬ್ ಥರ ಬಟ್ಟೆ ಅಲ್ಲ. ಜನಿವಾರದಲ್ಲಿ ಕಾಪಿ ಮಾಡೋಕ್ಕಾಗುತ್ತಾ? ಶಿವದಾರವನ್ನೂ ತೆಗೆಸಿದ್ದಾರೆ, ಕತ್ತರಿ ಹಾಕಿದ್ದಾರೆ, ಒಕ್ಕಲಿಗರ ಉಡುದಾರ ಕಟ್, ತಾಳಿಗೂ ಭಾಗ್ಯ ಇಲ್ಲ. ಇದು ಮನೆಹಾಳ ಸರ್ಕಾರ, ದುರುಳ ಕಾಂಗ್ರೆಸ್, ಹೆಣ್ಣಿನ ತಾಳಿಗೆ ಕೈ ಹಾಕಿದವರು ಸರ್ವನಾಶವಾಗುತ್ತಾರೆ, ಓಲೆಯನ್ನೂ ತೆಗೆಸಿದ್ದಾರೆ. ಕಾಂಗ್ರೆಸ್ ಸತ್ತು ಹೋಗುತ್ತದೆ ಎಂದು ತಾಳಿ, ಓಲೆ ತೆಗೆಸಿದ ಫೋಟೋ ತೋರಿಸಿ ಆರೋಪಿಸಿದರು.

ಕಾಂಗ್ರೆಸ್ ಸರ್ಕಾರ ಹಿಂದೂಗಳನ್ನು ದಮನ ಮಾಡುತ್ತಿದೆ, ಅವಮಾನ ಮಾಡುತ್ತಿದೆ. ಸರ್ಕಾರ ಹಿಂದೂಗಳನ್ನು ಅವಮಾನ ಮಾಡಿ ವಿಕೃತ ಸಂತೋಷ ಪಡುತ್ತದೆ. ಕೇಂದ್ರದ ಮಾನವ ಹಕ್ಕು ಆಯೋಗ, ರಾಜ್ಯ ಮಾನವ ಹಕ್ಕುಗಳ ಆಯೋಗಗಳು ಕೂಡಲೇ ಸರ್ಕಾರದ ಮೇಲೆ ಕ್ರಮ ಕೈಗೊಳ್ಳಲಿ. ಹೆಣ್ಣುಮಕ್ಕಳ ತಾಳಿ, ಓಲೆ ತೆಗೆಸಿದ ಪ್ರಕರಣ ಸಂಬಂಧ ನಾನು ಕೇಂದ್ರದ ಮಹಿಳಾ ಆಯೋಗಕ್ಕೆ ಪತ್ರ ಬರೆಯುತ್ತೇನೆ ಎಂದರು.


ಇನ್ನೂ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ವಿರುದ್ಧ ಚಾರ್ಜ್ ಶೀಟ್ ಸಲ್ಲಿಕೆ ವಿಚಾರವಾಗಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ದೇಶ ಲೂಟಿ ಮಾಡುವ ಪಕ್ಷ, ಮನಮೋಹನ್ ಸಿಂಗ್ ಕಾಲದಲ್ಲಿ ಹಗರಣಗಳ ಸರಮಾಲೆ ನಡೆದಿತ್ತು. ಈಗ ಪತ್ರಿಕೆಯನ್ನೇ ಲೂಟಿ ಮಾಡಿದ್ದಾರೆ. ಹಿಂದೆ 1937ರಲ್ಲಿ ಶುರುವಾದ ನ್ಯಾಷನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಈಗ ಲೂಟಿ ಮಾಡಿದ್ದಾರೆ. 2008ರಲ್ಲಿ ನ್ಯಾಷನಲ್ ಹೆರಾಲ್ಡ್ ಪತ್ರಿಕೆ ನಷ್ಟದ ಕಾರಣ ನೀಡಿ ಮುಚ್ಚಲಾಗಿತ್ತು. ನಂತರ ಅದರ 3,000 ಕೋಟಿ ರೂ. ಆಸ್ತಿ ಮೇಲೆ ರಾಹುಲ್, ಸೋನಿಯಾ ಗಾಂಧಿ ಕಣ್ಣು ಬಿದ್ದಿತ್ತು. ನಂತರ ಯಂಗ್ ಇಂಡಿಯನ್ ಕಂಪನಿ ಎಂಬ ಚಾರಿಟೆಬಲ್ ಕಂಪನಿ ಮಾಡಿ ಅದರ ಆಸ್ತಿ ಲೂಟಿ ಮಾಡಿದ್ದಾರೆ. 50 ಲಕ್ಷ ರೂ. ಕೊಟ್ಟು ನ್ಯಾಷನಲ್ ಹೆರಾಲ್ಡ್‌ನ ಎರಡು ಸಾವಿರ ಕೋಟಿ ತೆಗೆದುಕೊಂಡರು. ನ್ಯಾಷನಲ್ ಹೆರಾಲ್ಡ್‌ನ ಆಸ್ತಿಗಳಿಂದ ಬಂದ ನೂರಾರು ಕೋಟಿ ಬಾಡಿಗೆ ಹಣದ ಲೆಕ್ಕವೂ ಕೊಡಲಿಲ್ಲ. ಇದು ಕಾಂಗ್ರೆಸ್‌ನ ಪತ್ರಿಕೆ ಅಲ್ಲ, ಸ್ವಾತಂತ್ರ್ಯ ಹೋರಾಟಗಾರರು ಆರಂಭಿಸಿದ್ದ ಪತ್ರಿಕೆ ಎಂದು ಆಕ್ರೋಶ ಹೊರಹಾಕಿದರು.

ಇಂದು ಹಜ್ ಯಾತ್ರಾರ್ಥಿಗಳಿಗೆ ಲಸಿಕೆ

ಮೈಸೂರು, ಏ.20(ಎಂಕೆ)– ಮೈಸೂರಿನ ಉದಯಗಿರಿಯಲ್ಲಿರುವ ಆರ್.ಕೆ.ಪ್ಯಾಲೇಸ್ ಫಂಕ್ಷನ್ ಹಾಲ್‌ನಲ್ಲಿ ನಾಳೆ(ಏ.21) ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ 2025ನೇ ಸಾಲಿನ ಹಜ್ ಯಾತ್ರೆಗೆ ತೆರಳಿರುವ ಯಾತ್ರಾರ್ಥಿಗಳಿಗೆ ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕರ್ನಾಟಕ ರಾಜ್ಯ ಹಜ್ ಕಮಿಟಿ ವೇಳಾಪಟ್ಟಿ ಅನ್ವಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ ವತಿಯಿಂದ ಮುಂಜಾಗ್ರತಾ ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬೆಂಗಳೂರು ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಇಂಡಿಗೋ ವಿಮಾನಕ್ಕೆ ಮಿನಿ ಬಸ್ ಡಿಕ್ಕಿ



ಬೆಂಗಳೂರು, ಏ.20– ಇಲ್ಲಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಿಂತಿದ್ದ ಇಂಡಿಗೋ ವಿಮಾನಕ್ಕೆ ಮಿನಿ ಬಸ್ ಡಿಕ್ಕಿ ಹೊಡೆದಿದೆ ಎಂದು ವಿಮಾನ ನಿಲ್ದಾಣದ ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

ನಿಲ್ದಾಣದಲ್ಲಿ ನಿಂತಿದ್ದ ವಿಮಾನದ ಕೆಳ ಭಾಗಕ್ಕೆ (ಅಂಡರ್‌ಕ್ಯಾರೇಜ್) ಡಿಕ್ಕಿ ಹೊಡೆದಿದೆ. ಆದರೆ, ಘಟನೆಯಲ್ಲಿ ಯಾವುದೇ ಗಾಯಗಳಾಗಿಲ್ಲ ಎಂದು ವಿಮಾನ ನಿಲ್ದಾಣದ ವಕ್ತಾರರು ತಿಳಿಸಿದ್ದಾರೆ. ಶನಿವಾರ ಮಧ್ಯಾಹ್ನ 12:15ರ ಸುಮಾರಿನಲ್ಲಿ ಪಾರ್ಕಿಂಗ್ ಬೇ (71 ಆಲ್ಫಾ) ಬಳಿ ಈ ಘಟನೆ ಸಂಭವಿಸಿದೆ.

2022 ರಿಂದ ಇಂಜಿನ್ ಸಮಸ್ಯೆಗಳಿಂದಾಗಿ ಇಂಡಿಗೊ A320 ವಿಮಾನವನ್ನು ಪಾರ್ಕಿಂಗ್ ಬೇ ನಲ್ಲಿ ನಿಲ್ಲಿಸಲಾಗಿತ್ತು. ಗ್ರೌಂಡ್ ನಿರ್ವಹಣೆಯ ಕಂಪನಿಯಿಂದ ನಿಯೋಜಿಸಲಾಗಿದ್ದ ಮಿನಿ ಬಸ್ ಚಾಲಕ ನಿದ್ರೆಯ ಮಂಪರಿನಲ್ಲಿದಾಗ ಇಂಡಿಗೋ ವಿಮಾನದ ಅಂಡರ್ ಕ್ಯಾರೇಜ್‌ಗೆ ಡಿಕ್ಕಿ ಹೊಡೆದಿರುವುದಾಗಿ ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

ಆಕಾಶ್ ಏರ್ ಸಿಬ್ಬಂದಿಗಾಗಿ ಆ ಮಿನಿ ಬಸ್‌ನ್ನು ಬಳಸಲಾಗುತ್ತಿತ್ತು. ಅದೃಷ್ಟವಶಾತ್, ಆ ಸಂದರ್ಭದಲ್ಲಿ ಚಾಲಕ ಮಾತ್ರ ಮಿನಿ ಬಸ್‌ನಲ್ಲಿದ್ದರು ಎನ್ನಲಾಗಿದೆ. ಈ ಸಂಬಂಧ ನಾಗರಿಕ ವಿಮಾನಯಾನ ನಿರ್ದೇಶನಾಲಯಕ್ಕೆ ತಿಳಿಸಿದ್ದು, ತನಿಖೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ. ಪ್ರಯಾಣಿಕರು, ವಿಮಾನಯಾನ ಪಾಲುದಾರರು ಮತ್ತು ವಿಮಾನ ನಿಲ್ದಾಣದ ಸಿಬ್ಬಂದಿಗಳ ಸುರಕ್ಷತೆ ಮತ್ತು ಭದ್ರತೆಯು ನಮ್ಮ ಹೆಚ್ಚಿನ ಆದ್ಯತೆಯಾಗಿದೆ ಎಂದು ಬಿಐಎಎಲ್ ವಕ್ತಾರರು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಘಟನೆಯ ಕುರಿತು ಪ್ರತಿಕ್ರಿಯಿಸಿರುವ ಇಂಡಿಗೋ ವಕ್ತಾರರು, ಘಟನೆ ಸಂಬಂಧ ತನಿಖೆ ನಡೆಯುತ್ತಿದ್ದು, ಅಗತ್ಯ ವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಇಂದು ವೃತ್ತಿ ಮಾರ್ಗದರ್ಶನ ಕಾರ್ಯಕ್ರಮ

ಮೈಸೂರು,ಏ.20(ಪಿಎಂ)– ಕರ್ನಾಟಕ ಸ್ಟೇಟ್ ಗೌರ್ನಮೆಂಟ್ ಮುಸ್ಲಿಂ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ಮೈಸೂರು ಹಾಗೂ ಯುನಿಕ್ ಯೂತ್ ಫೌಂಡೇಶನ್ ಜಂಟಿ ಆಶ್ರಯದಲ್ಲಿ ಏ.21ರಂದು ಪಿಯುಸಿ ವಿದ್ಯಾರ್ಥಿಗಳಿಗಾಗಿ ವೃತ್ತಿ ಮಾರ್ಗದರ್ಶನ ಮತ್ತು ವೃತ್ತಿ ಸಮಾಲೋಚನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮೈಸೂರಿನ ಉದಯಗಿರಿಯ ಮೆಜೆಸ್ಟಿಕ್ ಶಾಲೆಯಲ್ಲಿ ನಡೆಯುವ ಕಾರ್ಯಕ್ರಮವನ್ನು ಅಂದು ಬೆಳಗ್ಗೆ 9ಕ್ಕೆ ನಿವೃತ್ತ ಐಎಎಸ್ ಅಧಿಕಾರಿ ಜನಾಬ್ ಇಬ್ರಾಹಿಂ ಉದ್ಘಾಟಿಸಲಿದ್ದಾರೆ. ಅಸೋಸಿಯೇಷನ್ ಅಧ್ಯಕ್ಷ ಜನಾಬ್ ಸೈಯದ್ ಮುದಾಸಿರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಕೆಎಸ್‌ಪಿಎಸ್‌ನ ನಿವೃತ್ತ ಡಿವೈಎಸ್‌ಪಿ ಜನಾಬ್ ಸುಹೇಲ್ ಅಹಮ್ಮದ್, ಮೆಜೆಸ್ಟಿಕ್ ಶಾಲೆಯ ಅಧ್ಯಕ್ಷ ಜನಾಬ್ ಆರಿಫ್ ಎ.ಮೆಹ್‌ಕ್ರಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

ವೃತ್ತಿ ಮಾರ್ಗದರ್ಶನ ಕುರಿತು ಚೀಫ್ ಲರ್ನಿಂಗ್ ಕನ್ಸಲ್ಟೆಂಟ್ ಡಾ.ಮೊಹಮ್ಮದ್ ಜೀಶನ್, ಕೆಇಎ ಬೆಂಗಳೂರು ಮಾಜಿ ಪಿಆರ್‌ಓ ಡಾ.ಎ.ಎಸ್.ರವಿ, ಕೆಎಸ್‌ಸಿಎಸ್‌ಟಿ ಪ್ರಾಜೆಕ್ಟ್ ಇಂಜಿನಿಯರ್ ಡಾ.ಸೈಯದ್ ಸಮೀರ್, ಕೆಆರ್ ಆಸ್ಪತ್ರೆ ಆರ್‌ಎಂಓ ಡಾ.ನಯಾಜ್ ಪಾಷ ಮಾರ್ಗದರ್ಶನ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಶಾಲೆಗಳಲ್ಲಿ ಬಿಸಿಯೂಟ ತಯಾರಿ; ಗುಣಮಟ್ಟದ ಖಾತರಿಗೆ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ

ಮುಖ್ಯಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು, ಶಾಲಾ ಮಕ್ಕಳ ಪೋಷಕರ ಸಮಿತಿ ರಚನೆಗೂ ಸಲಹೆ


ಸಾಂದರ್ಭಿಕ ಚಿತ್ರ

ಮೈಸೂರು, ಏ.20(ಎಸ್‌ಪಿಎನ್)– ಶಾಲಾ ಅಡುಗೆ ಮನೆಯಲ್ಲಿ ಪ್ರತಿನಿತ್ಯ ಸ್ವಚ್ಛತೆ, ನೈರ್ಮಲ್ಯ, ಆಹಾರ ಗುಣಮಟ್ಟ ಪರಿಶೀಲಿಸಲು ಮುಖ್ಯ ಶಿಕ್ಷರು, ಎಸ್‌ಡಿಎಂಸಿ ಸದಸ್ಯರು ಹಾಗೂ ಶಾಲಾ ಮಕ್ಕಳ ಪೋಷಕರ (ತಾಯಂದಿರ ಸಮಿತಿ) ಸಮಿತಿ ರಚಿಸಿ ಪಿಎಂ ಪೋಷಣ್(ಮಧ್ಯಾಹ್ನ ಉಪಹಾರ ಯೋಜನೆ) ಕಾರ್ಯಕ್ರಮದಲ್ಲಿ ಗುಣಮಟ್ಟ ಕಾಪಾಡುವಂತೆ ಶಾಲಾ ಶಿಕ್ಷಣ ಇಲಾಖೆ, ಸಂಬಂಧಪಟ್ಟ ಜಿಲ್ಲಾ ಹಂತದ ಶಿಕ್ಷಣಾಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದೆ.

2023–24ನೇ ಸಾಲಿನ ಸಾಮಾಜಿಕ ಪರಿಶೋಧನೆ ವರದಿಯಲ್ಲಿ ಕಂಡು ಬಂದಿರುವ 12 ಅಂಶಗಳ ನ್ಯೂನತೆ ಬಗ್ಗೆ ಗಮನಹರಿಸಿ ಕೂಡಲೇ ಸರಿಪಡಿಸುವಂತೆ ಏ.1ರಂದು ಕೇಂದ್ರ ಸರ್ಕಾರದ ಶಿಕ್ಷಣ ಮಂತ್ರಾಲಯದಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ಪಿಎಂ ಪೋಷಣ್ ವಿಭಾಗದಿಂದ ಏರ್ಪಡಿಸಿದ್ದ ಗೂಗಲ್ ಮೀಟಿಂಗ್‌ನಲ್ಲಿ ನಿರ್ಣಯವಾದ ಅಂಶಗಳನ್ನು ಪಾಲಿಸುವಂತೆ ಜಿಲ್ಲಾ ಹಂತದ ಎಲ್ಲಾ ಅಧಿಕಾರಿಗಳಿಗೂ ಸೂಚನೆ ನೀಡಿದೆ.

2023–24ನೇ ಸಾಲಿನಲ್ಲಿ ರಾಜ್ಯದಲ್ಲಿ ಪಿಎಂ ಪೋಷಣ್ (ಮಧ್ಯಾಹ್ನ ಉಪಹಾರ ಯೋಜನೆ) ಕಾರ್ಯಕ್ರಮದ ಅನುಷ್ಠಾನ ಪ್ರಕ್ರಿಯೆ, ಪರಿಣಾಮಗಳು ಹಾಗೂ ಪ್ರಭಾವಗಳ ಕುರಿತಂತೆ, ಶಾಲೆಗಳಿಗೆ ಭೇಟಿ ನೀಡಿ, ಮೌಲ್ಯಮಾಪನ ಕೈಗೊಂಡು ರಾಜ್ಯ ಕಚೇರಿ ಮೂಲಕ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿತ್ತು. ಕೆಳಕಂಡ ಅಂಶಗಳ ಬಗ್ಗೆ ಉಲ್ಲೇಖಿತ ಸಭೆಯಲ್ಲಿ ಚರ್ಚೆ ನಡೆಸಲಾಗಿದ್ದು, ಸದರಿ ನ್ಯೂನತೆಗಳನ್ನು ಹಾಗೂ ತಪ್ಪು ಆಚರಣೆಗಳನ್ನು ಸರಿಪಡಿಸುವಂತೆ ಇಲಾಖೆಗೆ ನಿರ್ದೇಶನ ನೀಡಲಾಗಿದೆ.

12 ಅಂಶಗಳ ಲೋಪದೋಷಗಳ ಬಗ್ಗೆ ಶಾಲಾ ಶಿಕ್ಷಣ ಇಲಾಖೆಯು ಗಂಭೀರವಾಗಿ ಪರಿಗಣಿಸಿದ್ದು, ಸಂಬಂಧಿಸಿದ ಜಿಲ್ಲೆಗಳ ಅನುಷ್ಠಾನಾಧಿಕಾರಿಗಳು ಹಾಗೂ ಮೇಲ್ವಿಚಾರಣಾಧಿಕಾರಿಗಳು ತಮ್ಮ ಆಡಳಿತ ವ್ಯಾಪ್ತಿಯಲ್ಲಿರುವ ಶಾಲೆಯಲ್ಲಿ ಮುಖ್ಯಶಿಕ್ಷಕರು ಮತ್ತು ಎಸ್‌ಡಿಎಂಸಿ, ತಾಯಂದಿರ ಸಮಿತಿ ಸದಸ್ಯರು, ಪ್ರತಿನಿತ್ಯ ಇಲಾಖೆ ಸೂಚಿತ ಆಹಾರ ಮೆನುವಿನಂತೆ ಆಯಾ ದಿನದಂದು ಆಹಾರ ಸಿದ್ದಪಡಿಸಿ ನಿಗದಿತ ಪ್ರಮಾಣದಲ್ಲಿ ವಿತರಣೆ ಕುರಿತು ಖಚಿತಪಡಿಸಿಕೊಳ್ಳುವುದು.

ಶುಚಿ–ರುಚಿ ವಹಿಯಲ್ಲಿ ದಾಖಲು ಕಡ್ಡಾಯ: ಶಾಲಾ ಅಡುಗೆ ಕೇಂದ್ರದಲ್ಲಿ ಬಿಸಿಯೂಟ ಸಿದ್ದಪಡಿಸಿ ಮಕ್ಕಳಿಗೆ ವಿತರಿಸುವ ಪೂರ್ವದಲ್ಲಿ ಕಡ್ಡಾಯವಾಗಿ ಶಾಲೆಯ ಮುಖ್ಯ ಶಿಕ್ಷಕರು, ಇತರೆ ಶಿಕ್ಷಕರು ಆಹಾರದ ಶುಚಿ–ರುಚಿಯನ್ನು ಪರಿಶೀಲಿಸಿ ಗುಣಮಟ್ಟದ ಬಗ್ಗೆ ಶುಚಿ–ರುಚಿ ವಹಿಯಲ್ಲಿ ನಮೂದಿಸುವುದು ಕಡ್ಡಾಯ. ಇಲ್ಲವೇ ಸ್ವಯಂ ಸೇವಾ ಸಂಸ್ಥೆಗಳು ಶಾಲೆಗಳಿಗೆ ಬಿಸಿಯೂಟ ಸರಬರಾಜು ಮಾಡಿದಾಗ ಶಾಲಾ ಮಕ್ಕಳಿಗೆ ವಿತರಿಸುವ ಪೂರ್ವದಲ್ಲಿ ಶಾಲಾ ಮುಖ್ಯಶಿಕ್ಷಕರು ಹಾಗೂ ಅಡುಗೆ ಸಿಬ್ಬಂದಿ ಆಹಾರ ಪರೀಕ್ಷಿಸಿ ಶುಚಿ–ರುಚಿ ವಹಿಯಲ್ಲಿ ಆಹಾರ ಸರಬರಾಜು ಮಾಡಿ ಶಾಲೆಗೆ ತಲುಪಿಸಿದ ಸಮಯ, ತಾಪಮಾನ, ಆಹಾರ ಪ್ರಮಾಣ ಹಾಗೂ ಆಯಾ ದಿನದ ಮೆನುವಿನಂತೆ ಸರಬರಾಜು ಮಾಡಿರುವ ಆಹಾರದ ವಿವರ, ಆಹಾರದ ಗುಣಮಟ್ಟ ಮತ್ತು ಸುರಕ್ಷತೆಯ ಬಗ್ಗೆ ಅಭಿಪ್ರಾಯಗಳನ್ನು ಕಡ್ಡಾಯವಾಗಿ ಆಯಾಯ ದಿನದಂದೇ ದಾಖಲಿಸಿ, ನಿರ್ವಹಿಸಬೇಕು ಎಂದಿದ್ದಾರೆ.

ಎಲ್ಲಾ ಹಂತದ ಅಧಿಕಾರಿಗಳು ಜವಾಬ್ದಾರರು: ಪ್ರತಿಶಾಲೆಯಲ್ಲಿ ಪಿಎಂ ಪೋಷಣ್, ಕ್ಷೀರಭಾಗ್ಯ ಯೋಜನೆ ಮತ್ತು ಪೂರಕ ಪೌಷ್ಠಿಕ ಆಹಾರ ವಿತರಣೆಯ ಕಾರ್ಯಕ್ರಮ ಅನುಷ್ಠಾನ ಮತ್ತು ನಿರ್ವಹಣೆಯ ಪ್ರಗತಿ ಕುರಿತು ಎಸ್‌ಡಿಎಂಸಿ ಸದಸ್ಯರು, ಇತರೆ ಸಿಬ್ಬಂದಿಯೊಂದಿಗೆ ಚರ್ಚಿಸಿ, ಅಭಿಪ್ರಾಯಗಳನ್ನು ಪುಸ್ತಕದಲ್ಲಿ ದಾಖಲಿಸುವಂತೆ ಅನುದಾನಿತ ಶಾಲಾ ಆಡಳಿತ ಮಂಡಳಿಗೆ, ಸರ್ಕಾರಿ ಶಾಲಾ ಮುಖ್ಯಶಿಕ್ಷಕರಿಗೆ ಸೂಚಿಸಿದೆ.

ಜಿಲ್ಲೆ, ತಾಲೂಕು ಮತ್ತು ಕ್ಲಸ್ಟರ್ ಮಟ್ಟದ ಇಲಾಖೆಯ ಮೇಲ್ವಿಚಾರಣಾಧಿಕಾರಿಗಳಾದ ಉಪ ನಿರ್ದೇಶಕರು(ಆಡಳಿತ), ಉಪ ನಿರ್ದೇಶಕರು (ಅಭಿವೃದ್ಧಿ), ಹಿರಿಯ ಉಪನ್ಯಾಸಕರು, ಉಪನ್ಯಾಸಕರು, ಶಿಕ್ಷಣಾಧಿಕಾರಿ ಪಿಎಂ ಪೋಷಣ್ ಶಿಕ್ಷಣಾಧಿಕಾರಿಗಳು, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ, ಡಿವೈಪಿಸಿ, ಕ್ಷೇತ್ರ ಶಿಕ್ಷಣಾಧಿಕಾರಿ, ಸಹಾಯಕ ಶಿಕ್ಷಣಾಧಿಕಾರಿ, ಇಸಿಓ, ಬಿಆರ್‌ಪಿ, ಸಿಆರ್‌ಪಿಗಳು, ಆಗಾಗ್ಗೆ ಶಾಲೆಗಳಿಗೆ ಭೇಟಿ ನೀಡಿ, ಸದರಿ ಶಾಲಾ ಸಭೆಗಳಿಗೆ ಕಡ್ಡಾಯವಾಗಿ ಹಾಜರಾಗಿ ಮಾರ್ಗದರ್ಶನ ನೀಡುವಂತೆ ತಿಳಿಸಿದ್ದಾರೆ.

ಶಿಕ್ಷಕರೂ ಬಿಸಿಯೂಟ ಸೇವನೆ ಕಡ್ಡಾಯ: ಶಾಲೆಯಲ್ಲಿ ಸಿದ್ದಪಡಿಸಿ ಮಕ್ಕಳಿಗೆ ವಿತರಿಸುವ ಬಿಸಿಯೂಟವನ್ನು ಶಾಲಾ ತರಗತಿ ಶಿಕ್ಷಕರು, ಮುಖ್ಯಶಿಕ್ಷಕರು ಪ್ರತಿನಿತ್ಯ ವಿತರಿಸುವ ಪೂರ್ವದಲ್ಲಿ ಶುಚಿರುಚಿ ಪರೀಕ್ಷೆ ನಂತರ ಮಕ್ಕಳೊಂದಿಗೆ ಸಾಮೂಹಿಕವಾಗಿ ಒಟ್ಟಿಗೆ ಕುಳಿತು ಬಿಸಿಯೂಟ ಸ್ವೀಕರಿಸುವ ಪರಿಪಾಠ ಮಾಡಿದ್ದಲ್ಲಿ, ಖಂಡಿತವಾಗಿ ಶಾಲಾ ಮಕ್ಕಳು ಸಹ ಬಿಸಿಯೂಟವನ್ನು ಸ್ವೀಕರಿಸುವಲ್ಲಿ ಹಿಂಜರಿಯುವುದಿಲ್ಲ. ಇದರಿಂದಾಗಿ, ಮಕ್ಕಳಲ್ಲಿ ಪೋಷಕರಲ್ಲಿ ಆತ್ಮವಿಶ್ವಾಸ ದೃಢನಂಬಿಕೆ ಬೆಳೆದು ಬಿಸಿಯೂಟದ ಬಗ್ಗೆ ಧನಾತ್ಮಕ ಭಾವನೆ ಬರುತ್ತದೆ. ಈ ಕಾರಣಕ್ಕಾಗಿ ಶಾಲಾ ಶಿಕ್ಷಕರು, ಕಾರ್ಯಕ್ರಮದ ಹಿತದೃಷ್ಟಿಯಿಂದ ಶಾಲಾ ಮಕ್ಕಳ ಹಿತದೃಷ್ಟಿಯಿಂದ ಶಾಲೆಯಲ್ಲಿಯೇ ಸಿದ್ದಪಡಿಸಿರುವ ಬಿಸಿಯೂಟವನ್ನು ಸ್ವೀಕರಿಸುವಂತೆ ಹಾಗೂ ಮಕ್ಕಳಿಗೂ ಪ್ರೋತ್ಸಾಹಿಸುವಂತೆ ಸೂಚಿಸಿದೆ.

'ತಾಯಂದಿರ ಸಮಿತಿ' ರಚನೆ ಕಡ್ಡಾಯ: ಶಾಲಾ ಅಡುಗೆ ಕೇಂದ್ರದಲ್ಲಿ ಪ್ರತಿನಿತ್ಯ ಸ್ವಚ್ಛತೆ, ನೈರ್ಮಲ್ಯ, ಆಹಾರ ಗುಣಮಟ್ಟದ ಸುರಕ್ಷತೆಯ ಕ್ರಮಗಳ ಬಗ್ಗೆ ಅನುಪಾಲನೆಯಾಗುತ್ತಿರುವ ಕುರಿತಂತೆ ಮುಖ್ಯ ಶಿಕ್ಷಕರು, ಎಸ್‌ಡಿಎಂಸಿ ಮತ್ತು ತಾಯಂದಿರ ಸಮಿತಿ ರಚಿಸಿ, ಇವರ ಮೇಲ್ವಿಚಾರಣೆ, ಪ್ರತಿನಿತ್ಯ ಭೇಟಿ ಮತ್ತು ತಪಾಸಣೆ, ಆಹಾರ ಶುಚಿ–ರುಚಿ ಪರಿಶೀಲನೆ, ಆಹಾರ ಉಗ್ರಾಣ ಸ್ವಚ್ಛತೆ, ಎಫ್‌ಐಎಫ್‌ಓ, ಎಫ್‌ಇಎಫ್‌ಓ ಪದ್ಧತಿ ಅನುಸರಣೆ, ಉತ್ತಮ ಗುಣಮಟ್ಟದ ಆಹಾರ ಪದಾರ್ಥಗಳ ಬಳಕೆ ಬಗ್ಗೆ ಪರಿಶೀಲಿಸಿ ಖಾತ್ರಿಪಡಿಸಿಕೊಳ್ಳುವ ಕ್ರಮಗಳನ್ನು ಶಾಲೆಯ ಅಡುಗೆ ಕೇಂದ್ರದಲ್ಲಿ ನಿರಂತರ ಕೈಗೊಳ್ಳಬೇಕು. ಈ ಕ್ರಮಗಳ ಕುರಿತು ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು, ಎಸ್‌ಡಿಎಂಸಿ ಮತ್ತು ಮೇಲ್ವಿಚಾರಣಾಧಿಕಾರಿಗಳು, ತಪ್ಪದೇ ನಿರ್ವಹಿಸುವಂತೆ ಶಾಲಾ ಶಿಕ್ಷಣ ಇಲಾಖೆ ಆಯುಕ್ತ ಡಾ.ಕೆ.ವಿ.ತ್ರಿಲೋಕ ಚಂದ್ರ ಆದೇಶಿಸಿದ್ದಾರೆ.

ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ಸಾರಿಗೆ ನೌಕರ ದುರ್ಮರಣ

ಹಾಸನ, ಏ.20– ಗಾಳಿ ಮಳೆಗೆ ತುಂಡಾಗಿ ಬಿದ್ದಿದ್ದ ಹೈಟೆನ್ಷನ್ ವಿದ್ಯುತ್ ತಂತಿಯನ್ನು ತುಳಿದು ಕೆಎಸ್‌ಆರ್‌ಟಿಸಿ ನೌಕರರೊಬ್ಬರು ಸಾವಿಗೀಡಾದ ಘಟನೆ ನಗರದ ಬಿಟಿ ಕೊಪ್ಪಲಿನಲ್ಲಿ ನಡೆದಿದೆ.

ಮೃತರನ್ನು ನಂದೀಶ್ (41) ಎಂದು ಗುರುತಿಸಲಾಗಿದೆ. ಅವರು ವಾಕಿಂಗ್ ಹೋಗಿದ್ದ ವೇಳೆ ಈ ಅವಘಡ ಸಂಭವಿಸಿದೆ. ಈ ಮೂಲಕ ಜಿಲ್ಲೆಯಲ್ಲಿ ಮಳೆಗೆ ಮೊದಲ ಬಲಿಯಾದಂತಾಗಿದೆ. ಶನಿವಾರ ರಾತ್ರಿ ಸುರಿದ ಬಾರಿ ಮಳೆ ಗಾಳಿಗೆ 11 ಕೆವಿ ವಿದ್ಯುತ್ ತಂತಿ ತುಂಡಾಗಿ ಬಿದ್ದಿತ್ತು. ಮುಂಜಾನೆ ವಾಕಿಂಗ್ ಮಾಡುವಾಗ, ನಂದೀಶ್ ತಂತಿ ತುಳಿದಿದ್ದಾರೆ. ಪರಿಣಾಮ ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಡಾವಣೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದ್ದು, ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಸಿಟಿ ಹುಡುಗಿ ಮದುವೆಯಾಗಿ ಹಳ್ಳಿಗೆ ಬಂದಿದ್ಲು

ಅತ್ತೆ : ಹೋಗವ್ಮಾ ಎಮ್ಮೆಗೆ ಹುಲ್ಲು ಹಾಕಿ ಬಾ

ಸೊಸೆ ಹುಲ್ಲು ಹಾಕಲು ಹೋದಾಗ ಎಮ್ಮೆ ಬಾಯಲ್ಲಿ ನೊರೆ ಬರುವುದನ್ನು ನೋಡಿ ಹುಲ್ಲು ತಗೊಂಡು ಅತ್ತೆ ಬಳಿ ಬಂದ್ಲು.

ಅತ್ತೆ : ಯಾಕವ್ಮ ಏನಾಯ್ತು?

ಸೊಸೆ : ಅತ್ತೆ ಎಮ್ಮೆ ಈವಾಗ ಎದ್ದು ಹಲ್ಲು ಉಜ್ಜುತ್ತಿದೆ. ಆಮೇಲೆ ಹಾಕ್ತೀನಿ.

ಮೈಸೂರು ಮಿತ್ರ

ಸೋಮವಾರ, 21 ಏಪ್ರಿಲ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಕಾಣಬಾರದು ಅಂತ ಕಣ್ಣು ಮುಚ್ಚಿಕೊಳ್ಳಬಹುದು. ಆದರೆ ನೆನಪು ಆಗಬಾರದು ಅಂತ ಮನಸ್ಸು ಮುಚ್ಚಿಕೊಳ್ಳೋಕೆ ಸಾಧ್ಯನಾ!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅನ್ನ ಇಕ್ಕಿ ಸಾಕು ಅನ್ನಿಸಬಹುದು, ದುಡ್ಡು ಕೊಟ್ಟು ಸಾಕು ಅನ್ನಿಸೋಕಾಗಲ್ಲ...

ನಿಮ್ಮ ಪತ್ರಗಳು

ಜಾತಿ ಗಣತಿ! ಕೇಳಲೂ ಅಸಹ್ಯವಲ್ಲವೆ?

ಮಾನ್ಯರೆ,

ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಇನ್ನೂ ಜಾತಿ ಲೆಕ್ಕಕ್ಕೆ ಜೋತು ಬೀಳುತ್ತಿರುವ ಸರ್ಕಾರದ ಉದ್ದೇಶವಾದರೂ ಏನಿದ್ದೀತು ಎಂಬುವುದನ್ನು ಗ್ರಹಿಸುವುದೂ ಅಷ್ಟು ಕಷ್ಟವಲ್ಲ. ಸಮಾಜ ಅಂದ ಮೇಲೆ, ವಿಭಿನ್ನ ರೀತಿಯ ಜನರು ಇದ್ದೇ ಇರುತ್ತಾರೆ. ಅವರೆಲ್ಲರ ಆಚಾರ, ವಿಚಾರ, ಆಹಾರ, ಆಚರಣೆ ಇತ್ಯಾದಿಗಳೂ ಭಿನ್ನ ಭಿನ್ನ. ಇದು ಸಹಜ. ಆದರೆ ನಮ್ಮನ್ನಾಳುವವರು ಇದನ್ನೇ ಅಸ್ತ್ರವನ್ನಾಗಿಸಿಕೊಂಡು, ಜನರ ಮಧ್ಯೆಯೇ ಒಡಕು, ಭಿನ್ನಾಭಿಪ್ರಾಯ ಬರುವಂತೆ ಮಾಡಿ, ತಮಗೇನು ಬೇಕೋ ಅದನ್ನು ಸಾಧಿಸಿಕೊಳ್ಳುತ್ತಿರುವುದನ್ನು ನೋಡುತ್ತಲೇ ಬಂದಿದ್ದೇವೆ. ಇದು ಸಮಾಜದಲ್ಲಿ ಎಷ್ಟೊಂದು ಗೊಂದಲ ಸೃಷ್ಟಿಸುತ್ತಿದೆ ಎಂಬುದೂ ತಿಳಿದಿರುವಾಗ, ಮತ್ತದೇ ಜಾತಿ ಆಧಾರಿತ ಗಣತಿಗೆ ಸರ್ಕಾರ ಮುಂದಾಗಿರುವುದನ್ನು ಹಲವು ಪ್ರಮುಖ ಜಾತಿಗಳೇ ವಿರೋಧಿಸುತ್ತಿವೆ. ಅಷ್ಟಕ್ಕೂ, ಈ ಜಾತಿ ಗಣತಿಯಾದರೂ ವೈಜ್ಞಾನಿಕ, ಪಾರದರ್ಶಕ ಹಾಗೂ ಪೂರ್ಣ ಪ್ರಮಾಣದಲ್ಲಿ ನಡೆಯುತ್ತಿದೆಯೋ ಅದೂ ಇಲ್ಲ. ಹಿಂದೆಂದೋ 'ಅಲ್ಪಸಂಖ್ಯಾತರು' ಎಂಬ ಹಣೆ ಪಟ್ಟಿ ಹೊತ್ತವರು ಇಂದು ಅದರಿಂದ ಹೊರಬಂದರೂ ಇನ್ನೂ ಅಲ್ಪಸಂಖ್ಯಾತರೆಂದು ಗುರುತಿಸಿಕೊಳ್ಳುವುದು ಜಾತಿ ಗಣತಿಯ ಅಣಕು ಅಂದರೂ ತಪ್ಪಾಗಲಾರದು.

ರಾಜ್ಯದಲ್ಲಿ ಪ್ರಮುಖವಾಗಿ ಕಾಣುವುದು ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯ. ಲಿಂಗಾಯತರಲ್ಲೂ ಒಮ್ಮತವಿಲ್ಲ. ವೀರಶೈವ, ಪಂಚಮಸಾಲಿ ಎಂಬ ಭೇದ. ಇವರೇ ಈ ಜಾತಿಗಣತಿ ವಿರುದ್ಧ ಸಿಡಿದೆದ್ದಿದ್ದಾರೆ. ಇದು ವಿವಾದಾತ್ಮಕ ಗಣತಿ ಎಂಬುದು ಅವರ ವಾದ. ಒಂದೆಡೆ ರಾಜ್ಯ ಒಕ್ಕಲಿಗ ಸಂಘದ ಅಧ್ಯಕ್ಷ ಕೆಂಚಪ್ಪಗೌಡ, ಒಂದು ವೇಳೆ ಈ ವರದಿ ಜಾರಿಯಾದಲ್ಲಿ ಸರ್ಕಾರ ಉಳಿಯುವುದಿಲ್ಲ ಎಂದಿದ್ದಾರೆ. ಅತ್ತ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಹಾಗೂ ಹಿರಿಯ ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ, ಈ ವರದಿ ಜಾರಿಯಾದರೆ ಒಕ್ಕಲಿಗ, ವೀರಶೈವ ಲಿಂಗಾಯತ ಒಟ್ಟಿಗೆ ಸೇರಿ ಹೋರಾಟಕ್ಕೆ ಇಳಿಯಬೇಕಾದೀತು ಎಂಬ ಎಚ್ಚರಿಕೆ ನೀಡಿದ್ದಾರೆ. ಇಲ್ಲಿ ಇನ್ನೂ ಒಂದು ತೊಡಕು ಕಾಣುತ್ತಿದೆ.

ಮಾಡಿದ ಸಮೀಕ್ಷೆ ಹತ್ತು ವರ್ಷದ ಹಿಂದಿನದು ಎಂಬಲ್ಲಿ, ಈ ಹತ್ತು ವರ್ಷಗಳಲ್ಲಿ ಅದೆಷ್ಟು ಬದಲಾವಣೆಗಳೂ ಆಗಿರಲಿಕ್ಕಿಲ್ಲ. ಆದರೆ ಅವಾವುದನ್ನೂ ಪರಿಗಣಿಸದೆ, ಜಾತಿ ಗಣತಿ ವರದಿ ಅನುಷ್ಠಾನಕ್ಕೆ ಹೊರಟ ಸರ್ಕಾರದ ನಡೆ ಸ್ವೀಕೃತವಾದೀತೆ? ಇಷ್ಟೆಲ್ಲ ಇದ್ದರೂ, ರಾಜ್ಯ ಕಾಂಗ್ರೆಸ್ ಸರ್ಕಾರ ಮಾತ್ರ ಇದನ್ನು ಪ್ರತಿಷ್ಠೆಯ ಸಂಕೇತವಾಗಿ ತೆಗೆದುಕೊಳ್ಳುತ್ತಿರುವುದು ರಾಜ್ಯದ ಜನರ ಹಿತದೃಷ್ಟಿಯಿಂದ ಒಪ್ಪಿಗೆ ಆಗಲಾರದು. ಒಂದೊಮ್ಮೆ ಜಿದ್ದಿಗೆ ಬಿದ್ದು, ಸಿದ್ದರಾಮಯ್ಯ ಸರ್ಕಾರ ಜಾರಿ ಮಾಡಲು ಮುಂದಾದರೆ, ಆಗಬಹುದಾದ ಎಲ್ಲ ಅಹಿತಕರ ಘಟನೆಗಳಿಗೆ ಅವರೇ ಜವಾಬ್ದಾರರು. **–ಶಂಕರನಾರಾಯಣ ಭಟ್, ಜಯಲಕ್ಷ್ಮೀಪುರಂ, ಮೈಸೂರು.**

ಬಾಲ್ಯದ ನೆನಪು ಕಸಿದ ಮರಗಳ ಹನನ

ಮಾನ್ಯರೆ,

ಮೈಸೂರಿನ ಎಸ್.ಪಿ ಕಚೇರಿಯಿಂದ ಕಾಳಿಕಾಂಬ ದೇವಸ್ಥಾನದವರೆಗೆ ಅಭಿವೃದ್ಧಿ ಹೆಸರಿನಲ್ಲಿ ಮರಗಳನ್ನು ಕಡಿದಿರುವುದು ನೋವಿನ ಸಂಗತಿ. ಯಾರೇ ಆದರೂ ಪ್ರಕೃತಿಯ ವಿಕೃತ ಮಾಡಬಾರದು. ಅಭಿವೃದ್ಧಿ ಮಾಡಬೇಕೆಂದರೆ ಪ್ರಕೃತಿಗೆ ಧಕ್ಕೆ ಬಾರದ ಬೇರೆ ಪರ್ಯಾಯ ಮಾರ್ಗದಲ್ಲಿ ಅಭಿವೃದ್ಧಿ ಮಾಡಲಿ. ಅದನ್ನು ಬಿಟ್ಟು ಸಾಲು ಸಾಲಾಗಿ 40 ಮರಗಳ ಹನನ ಮಾಡಿರುವುದು ಸರಿಯೇ?

ಈ ಮರಗಳ ಹನನ ಹಲವರ ಬಾಲ್ಯದ ನೆನಪುಗಳನ್ನು ಕೂಡ ಕಸಿದಿದೆ. ಶಾಲೆಗೆ ಹೋಗುವಾಗ ಮರಗಳ ಸುತ್ತುತ್ತಾ ಆಟವಾಡಿದ ನೆನಪು. ನಿತ್ಯ ರಸ್ತೆಯಲ್ಲಿ ಓಡಾಡುವಾಗ ನೆನಪುಗಳನ್ನು ನೆನಪಿಸುತ್ತಿತ್ತು. ಬೇಸಿಗೆ ರಜೆಯಲ್ಲಿ ಮರಗಳ ಹತ್ತಿರ ಕಾಲ ಕಳೆದಂತ ನೆನಪುಗಳು ಕೂಡ ಮಾಯ. ಈ ಮರಗಳ ಹನನ ಜೊತೆಗೆ ಹಲವರ ಬಾಲ್ಯದ ನೆನಪು ಕೂಡ ಹನನವಾಗಿದೆ.

–ಪಿ.ಸಿ.ಕಂಗಾಣಿ ಸೋಮು, ಕ್ಯಾತಮಾರನಹಳ್ಳಿ, ಮೈಸೂರು.

ಮನೆಗಳಿಗೆ ನುಡಿಮುತ್ತುಗಳ ಬರೆಸಿ

ಮಾನ್ಯರೆ,

ಯಾವುದೊ ಆಟೋ ಮೇಲೆ ಬರೆದಿರುವ, ಯಾವುದೊ ಗೋಡೆಯ ಮೇಲೆ ಗೀಚಿರುವ, ಯಾವುದೊ ಕಲ್ಲಿನ ಮೇಲೆ ಕೆತ್ತಿರುವ ಹೀಗೆ ಎಲ್ಲಿಯೋ ಕಣ್ಣಿಗೆ ಬೀಳುವ ನುಡಿಮುತ್ತುಗಳು ಎಲ್ಲಿ, ಯಾವಾಗ, ಯಾರ ಜೀವನವನ್ನು ಹೇಗೆ ಬದಲಾವಣೆ ಮಾಡುತ್ತದೋ ಗೊತ್ತಾಗುವುದಿಲ್ಲ. ಆದುದರಿಂದ, ಮನೆಗಳಿಗೆ ಮನೆ ಸಂಖ್ಯೆ ಇರುವಂತೆ ಕರ್ನಾಟಕದ ಪ್ರತೀ ಮನೆಗೂ ಪಂಡಿತರ, ಪಾಮರರ, ದಾರ್ಶನಿಕರ, ಇತಿಹಾಸ ಪುರುಷರ, ಸಾಧು–ಸಂತರ, ನಾಟಕಕಾರರ, ಕವಿ–ಸಾಹಿತಿಗಳ ವಚನ, ನೀತಿ, ತತ್ವ, ಸುಭಾಷಿತ ಹೀಗೆ ಹಲವಾರು ಹೆಸರುಗಳಿಂದ ಕರೆಯಲ್ಪಡುವ ಹಿತನುಡಿಗಳನ್ನು ಬರೆಯಿಸಿ ಮನೆ ಮುಂದೆ ಹಾಕುವಂತಾದರೆ ಅದನ್ನು ಪ್ರತಿಯೊಬ್ಬರು ನೋಡುವಂತಾಗಿ ಅದರಲ್ಲಿನ ವಿನಯ ವಿವೇಕದ ಗುಣ ಶ್ರೇಷ್ಠತೆಯ ವಿಚಾರ ಧಾರೆಗಳನ್ನು ಅವರೂ ಸಹ ಅಳವಡಿಸಿಕೊಂಡರೆ ಸಮಾಜದಲ್ಲಿ ಶಾಂತಿ ಸೌಹಾರ್ದತೆ ನೆಲೆಸುವುದಕ್ಕೆ ಸಹಕಾರಿಯಾಗುತ್ತದೆ. ಆದ ಕಾರಣ ಇದು ಸಾಕಾರಗೊಳ್ಳಬೇಕಾದರೆ ಮುಖಂಡರಿಂದ ಹಿಡಿದು ಮುಖ್ಯಮಂತ್ರಿಗಳವರೆಗೆ ಜನಪ್ರತಿನಿಧಿಗಳೆಲ್ಲರು ಸಹ ಉತ್ಸುಕರಾಗಿ ಈ ಭಾಗ್ಯ ಶೀಘ್ರವಾಗಿ ಜಾರಿಗೆ ಬರುವಂತೆ ಯೋಜನೆ ರೂಪಿಸಬೇಕೆಂದು ವಿನಮ್ರವಾಗಿ ವಿನಂತಿಸುತ್ತೇನೆ. **–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.**

ನಿರಾಶ್ರಿತನನ್ನು ಸ್ಥಳಾಂತರಿಸಿ

ಮಾನ್ಯರೆ,

ಕಳೆದ ಕೆಲವು ದಿನಗಳಿಂದ ಮೈಸೂರಿನ ಜೆ.ಪಿ.ನಗರದ ಗೊಬ್ಬಳಿ ಮರ ತಂಗುದಾಣವನ್ನು ನಿರಾಶ್ರಿತ ವೃದ್ಧ ವ್ಯಕ್ತಿಯೊಬ್ಬರು ತಮ್ಮ ವಾಸಸ್ಥಾನವನ್ನಾಗಿ ಮಾಡಿಕೊಂಡಿದ್ದಾರೆ. ತಂಗುದಾಣದಲ್ಲಿಯೇ ಮಲ, ಮೂತ್ರ ವಿಸರ್ಜಿಸುತ್ತಿದ್ದಾನೆ. ಈ ಕಲುಷಿತ ವಾತಾವರಣದಿಂದಾಗಿ ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆಗಳಿವೆ ಮತ್ತು ಪ್ರಯಾಣಿಕರು ತಂಗುದಾಣದ ಒಳಗೆ ಕೂರಲು ಸಾಧ್ಯವಾಗದೆ ಬಸ್ಸು ಬರುವ ತನಕ ರಸ್ತೆಯಲ್ಲಿಯೇ ನಿಲ್ಲುವಂತಾಗಿದೆ. ಈ ವ್ಯಕ್ತಿ ಬಸ್ಸಿಗಾಗಿ ಕಾಯುವ ಪ್ರಯಾಣಿಕರನ್ನು ಹಣಕ್ಕಾಗಿ ಒತ್ತಾಯಿಸುತ್ತಾನೆ. ಸಂಬಂಧಪಟ್ಟವರು ಇತ್ತ ಗಮನಹರಿಸಿ ಸದರಿ ವ್ಯಕ್ತಿಯನ್ನು ಇಲ್ಲಿಂದ ಸ್ಥಳಾಂತರಿಸಲು ಕ್ರಮ ಕೈಗೊಳ್ಳಬೇಕೆಂದು ಕಳಕಳಿಯ ಮನವಿ.

– ಸರೋಜಮ್ಮ, ನಿವೃತ್ತ ಶಿಕ್ಷಕರು, ಜೆ.ಪಿ. ನಗರ, ಮೈಸೂರು.



ಡಾ. ವಿ. ರಂಗನಾಥ್

ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು

ಮೊ: 94482 08746/ 97421 79000

ಚಿಂತನೆ

ಬದುಕು ಅರ್ಥಪೂರ್ಣವಾಗಬೇಕು...!

> ❝ ನಮ್ಮ ಜೀವನ ಹೇಗಿರಬೇಕು ಎಂಬುದನ್ನು ನಾವೇ ನಿರ್ಧರಿಸಬೇಕು. ಮನಸ್ಸು ಆದಷ್ಟೂ ಧನಾತ್ಮಕವಾದ ಚಿಂತನೆಯಲ್ಲಿ ಇರುವಂತೆ ನೋಡಿಕೊಳ್ಳಬೇಕು. ಜನರೊಡನೆ ಬೆರೆಯಬೇಕು. ಬೇರೆಯವರ ಕಷ್ಟಗಳಲ್ಲಿ ಭಾಗಿಯಾಗಬೇಕು. ಇಂತಹ ಮನೋಭಾವ ನಮಗೆ ಬರಬೇಕು.

ಮನುಷ್ಯ ಹುಟ್ಟಿದ ಮೇಲೆ ಸಾವು ಅನಿವಾರ್ಯ. ನಮಗೆ ನಮ್ಮ ಹುಟ್ಟಿದ ದಿನ ಗೊತ್ತು. ಆದರೆ ಯಾವಾಗ ಸಾವು ಎಂಬುದು ಯಾರಿಗೂ ತಿಳಿಯದು. ಕೆಲವೊಮ್ಮೆ ತೀವ್ರ ಖಾಯಿಲೆಯಿಂದ ಆಸ್ಪತ್ರೆ ಸೇರಿದವರು ಇನ್ನು ಉಳಿಯುವುದಿಲ್ಲ ಎಂದು ಭಾವಿಸಿದಂತಹ ಸಂದರ್ಭದಲ್ಲಿ ಅವರು ಮತ್ತೆ ಬದುಕಿ ಬರುವುದು, ಬದುಕಿ ಮತ್ತೆ ಹತ್ತಾರು ವರ್ಷ ಜೀವಿಸಿದ ಉದಾಹರಣೆ ನಮ್ಮ ಮುಂದಿದೆ. ಹಾಗೆಯೇ ಗುಂಡು ಕಲ್ಲಿನಂತಿದ್ದವರು ಅನಿರೀಕ್ಷಿತವಾಗಿ ಸಾಯುವುದನ್ನೂ ನಾವು ಕೇಳಿದ್ದೇವೆ. ಕೆಲವೊಮ್ಮೆ ದುರ್ಘಟನೆಗಳು ಅತ್ಯಂತ ಸಬಲರಾಗಿದ್ದವರ ಪ್ರಾಣವನ್ನು ಅಪಹರಿಸಿದ್ದೂ ನಮಗೆ ಗೊತ್ತಿದೆ. ಈಗಂತೂ ಅಪಘಾತಗಳಲ್ಲಿ ತೀವ್ರವಾಗಿ ಗಾಯಗೊಂಡವರು ಬಹು ಅಂಗಾಂಗಗಳ ವೈಫಲ್ಯಕ್ಕೆ ತುತ್ತಾಗಿ ಕೆಲವೇ ದಿನಗಳಲ್ಲಿ ಮರಣ ಹೊಂದುವುದನ್ನೂ ನಾವು ಕೇಳಿದ್ದೇವೆ ಹಾಗೂ ನೋಡಿದ್ದೇವೆ. ಇತ್ತೀಚೆಗೆ ಹೀಗೆ ಬಹು ಅಂಗಾಂಗದ ವೈಫಲ್ಯದ ಪ್ರಕರಣಗಳಲ್ಲಿ ಅವರಿಗೆ ಸಂಬಂಧಿಸಿದವರು ಅವರ ಅಂಗಾಂಗಗಳನ್ನು ದಾನ ಮಾಡುವುದನ್ನೂ ನಾವು ಕೇಳಿದ್ದೇವೆ. ಇಂತಹ ಪ್ರಕರಣದಲ್ಲಿ ಮಾನವೀಯತೆ ದೊಡ್ಡ ಪಾತ್ರ ವಹಿಸುತ್ತದೆ.

ಹೇಗಿದ್ದರೂ ತಮ್ಮವರು ಬದುಕುವುದಿಲ್ಲ. ಅವರ ಅಂಗಾಂಗಗಳನ್ನು ದಾನ ಮಾಡುವುದರಿಂದ ಅವುಗಳಾದರೂ ಯಾರಿಗಾದರೂ ಉಪಯೋಗಕ್ಕೆ ಬರಲಿ ಎಂದು ಭಾವಿಸಿ ಒಪ್ಪಿಗೆ ನೀಡುವ ಅವರ ಸಂಬಂಧಿಕರು ನಿಜವಾಗಿಯೂ ಸಾರ್ಥಕ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಬಹುದು. ಅದೇ ರೀತಿ ಇತ್ತೀಚೆಗೆ ನೇತ್ರದಾನ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿರುವುದು ಶ್ಲಾಘನೀಯ ವಿಚಾರವಾಗಿದೆ.

ಮತ್ತಷ್ಟು ಜನರು ತಾವು ಬದುಕಿರುವಾಗಲೇ, ತಾವು ಸತ್ತ ನಂತರ ತಮ್ಮ ದೇಹವನ್ನು ಮಣ್ಣು ಮಾಡದೆ ಅಥವಾ ಸುಡದೆ ಅದನ್ನು ವೈದ್ಯಕೀಯ ಕಾಲೇಜುಗಳಿಗೆ ದಾನ ಮಾಡಲು ಉಯಿಲು ಬರೆಯುತ್ತಿರುವುದೂ ಶ್ಲಾಘನೀಯ ನಿರ್ಧಾರ ಎನಿಸುತ್ತದೆ. ನಾವು ಜೀವನದಲ್ಲಿ ಏನೂ ಸಾಧಿಸದಿದ್ದರೂ, ಸಾವಿನ ಸಮಯದಲ್ಲಿ ತೆಗೆದುಕೊಳ್ಳುವ ಇಂತಹ ನಿರ್ಧಾರ ಅತ್ಯಂತ ಮಹತ್ವದ್ದಾಗಿ ಕಂಡುಬರುತ್ತದೆ. ಸಾವಿನವರೆಗೆ ಮನುಷ್ಯನ ಆರ್ಭಟ ತೀವ್ರವಾಗಿರುತ್ತದೆ. ಆದರೆ ಆತ ಸತ್ತ ತಕ್ಷಣವೇ ಜನರು ಅದನ್ನು ಬಾಡಿ ಎಂದು ಕರೆಯುತ್ತಾರೆ. ಸತ್ತವರನ್ನು ನೋಡುವಾಗ ಅತ್ಯಂತ ದುಃಖವಾಗುತ್ತದೆ ನಿಜ. ಆದರೆ ಕೆಲವೇ ಸಮಯದಲ್ಲಿ ಜನರು ಆಡುವ ಮಾತು ಶವಸಂಸ್ಕಾರ ಯಾವಾಗ? ಎಂದೇ ಆಗಿರುತ್ತದೆ.

ಹೇಗಿದ್ದರೂ ಸತ್ತವರು ಮತ್ತೆ ಬದುಕಿ ಮೇಲೇಳುವುದಿಲ್ಲ. ಹಾಗಿರುವಾಗ ಸತ್ತ ದೇಹವನ್ನು ಆದಷ್ಟೂ ಶೀಘ್ರವಾಗಿ ಮಣ್ಣು ಮಾಡುವತ್ತ ಎಲ್ಲರ ಚಿತ್ತ ನೆಟ್ಟಿರುತ್ತದೆ. ದೇಹಕ್ಕೆ ಅಂತಿಮ ಸಂಸ್ಕಾರವಾದ ನಂತರ ಕ್ರಮೇಣ ಆ ವ್ಯಕ್ತಿಯನ್ನು ಮರೆಯಲಾಗುತ್ತದೆ. ತುಂಬಾ ಎಂದರೆ ವರ್ಷಕ್ಕೆ ಒಮ್ಮೆ, ಅವರು ಸತ್ತ ದಿನವನ್ನು ನೆನಪಿಸಿಕೊಳ್ಳಲಾಗುತ್ತದೆ. ಇವೆಲ್ಲಾ ಇತ್ತೀಚೆಗೆ ಯಾಂತ್ರಿಕವಾಗಿ ನಡೆಯುತ್ತಿದೆ. ಒಟ್ಟಿನಲ್ಲಿ ವ್ಯಕ್ತಿ ಸತ್ತ ನಂತರ ಆ ದೇಹ ಯಾರಿಗೂ ಬೇಡ. ಅದನ್ನು ಹೆಚ್ಚು ಸಮಯ ಇಟುಕೊಳ್ಳಲೂ ಸಾಧ್ಯವಾಗುವುದಿಲ್ಲ. ಅದು ಕೊಳೆಯಲು ಆರಂಭವಾಗುತ್ತದೆ. ಹಾಗಿರುವಾಗ ಅಂತಹ ದೇಹದ ಭಾಗಗಳನ್ನು ದಾನ ಮಾಡುವುದು ಶ್ಲಾಘನೀಯ ಎನಿಸುತ್ತದೆ.

ಇವೆಲ್ಲಾ ವಿಷಯಗಳು ಎಲ್ಲರಿಗೂ ತಿಳಿದಿರುವಂತಹುದೇ. ಸಾವನ್ನು ಕೆಲ ಕಾಲ ಮುಂದೂಡಬಹುದೇ ಹೊರತು ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದು ಗೊತ್ತಿರುವ ವಿಷಯವೇ. ಆದರೂ ಬಹುತೇಕರ ತಾವು ಶಾಶ್ವತವಾಗಿಯೇ ಉಳಿಯುತ್ತೇವೆ ಎಂಬಂತೆ ಭಾವಿಸಿ ಆರ್ಭಟಿಸುತ್ತಾರೆ. ಜನರೊಂದಿಗೆ ಕೆಟ್ಟದಾಗಿ ನಡೆದುಕೊಂಡವರು ಸತ್ತಾಗ ಜನರು ಒಂದು ರೀತಿಯ ನೆಮ್ಮದಿಯ ಉಸಿರಾಡುತ್ತಾರೆ. ಅದನ್ನೂ ನಾವು ನೋಡುತ್ತೇವೆ. ಆದರೂ ನಮ್ಮ ಸ್ವಭಾವವನ್ನು ತಿದ್ದಿಕೊಳ್ಳದಿರುವುದು ಆಶ್ಚರ್ಯ ಮೂಡಿಸುತ್ತದೆ.

ನಾನು, ನನ್ನ ಮಕ್ಕಳು ಎಂದು ಒದ್ದಾಡುವ ಮನೋಭಾವ ಮೋಜು ಎನಿಸುತ್ತದೆ. ಇತ್ತೀಚೆಗೆ ಕೇಳಿದ ಒಂದು ಪ್ರಸಂಗದಲ್ಲಿ ಒಬ್ಬ ತಂದೆಯ ಇಬ್ಬರು ಮಕ್ಕಳು ವಿದೇಶದಲ್ಲಿ ವಾಸಿಸುತ್ತಾರೆ. ಇಬ್ಬರೂ ಕೈತುಂಬಾ ಸಂಪಾದನೆ ಮಾಡುತ್ತಾರೆ. ಮಕ್ಕಳು ಚೆನ್ನಾಗಿರಲಿ ಎಂಬ ತಂದೆ–ತಾಯಿ ಇಲ್ಲಿ ಕಷ್ಟದಿಂದ ಜೀವನ ನಡೆಸುತ್ತಿರುತ್ತಾರೆ. ಹೊರದೇಶಕ್ಕೆ ಹೋದ ಮಕ್ಕಳು ಆರಂಭದಲ್ಲಿ ವರ್ಷಕ್ಕೆರಡು ಬಾರಿ ಬಂದು ತಂದೆ–ತಾಯಿಯರನ್ನು ನೋಡುತ್ತಿದ್ದವರು, ಕ್ರಮೇಣ ಬರುವ ಅವಧಿಯನ್ನು ಕಡಿತ ಮಾಡುತ್ತಾ ಹೋಗುತ್ತಾರೆ.

ವರ್ಷಕ್ಕೆ ಒಮ್ಮೆ ಇದ್ದದ್ದು, ನಂತರ ಎರಡು ವರ್ಷಕ್ಕೆ, ಐದು ವರ್ಷಕ್ಕೆ ಎಂದು ಬದಲಾಗುತ್ತದೆ. ತಂದೆತಾಯಿಯರ ಮೇಲಿನ ವ್ಯಾಮೋಹ ಕ್ರಮೇಣ ಕಡಿಮೆಯಾಗುತ್ತದೆ. ಒಮ್ಮೆ ತಾಯಿ ಸತ್ತಾಗ, ಆಕೆಯ ಅಂತ್ಯ ಸಂಸ್ಕಾರಕ್ಕೆ ಬರಬೇಕು ಎಂಬ ಸಂದೇಶವನ್ನು ಮಕ್ಕಳಿಗೆ ತಿಳಿಸಲಾಗುತ್ತದೆ. ಕಿರಿಯವನು ಹಾಗೂ ಹೀಗೂ ಸಮಯ ಹೊಂದಿಸಿಕೊಂಡು ಊರಿಗೆ ಬರುತ್ತಾನೆ.

ಹಿರಿಯವ ತನಗೆ ಕೆಲಸ, ರಜೆ ಇಲ್ಲ ಎಂದು ಬರುವುದಿಲ್ಲ. ಊರಿಗೆ ಬಂದ ಕಿರಿಯವ ಅಮ್ಮನನ್ನು ಕೊನೆಯದಾಗಿ ನೋಡಲು ಬರುವಂತೆ ಕರೆ ಮಾಡುತ್ತಾನೆ. ಅಪ್ಪ ಪಕ್ಕದಲ್ಲಿಯೇ ನಿಂತಿರುತ್ತಾನೆ. ಹಿರಿಯವ ಹೇಳುತ್ತಾನೆ, ನನಗೆ ಈಗ ಬಿಡುವಿಲ್ಲ. ನೀನೇ ಅಂತ್ಯ ಸಂಸ್ಕಾರ ಮಾಡಿಬಿಡು. ಅಪ್ಪ ಸತ್ತಾಗ ನಾನು ಬರುತ್ತೇನೆ ಎನ್ನುತ್ತಾನೆ. ಈ ಮಾತನ್ನು ಕೇಳಿದ ಅಪ್ಪನಿಗೆ ಆಘಾತವಾಗುತ್ತದೆ.

ನನ್ನ ಅಂತಿಮ ವಿಧಿಗಳ ಬಗ್ಗೆ ನಾನೇ ವ್ಯವಸ್ಥೆ ಮಾಡಿಕೊಳ್ಳುತ್ತೇನೆ. ಯಾರೂ ಬರಬೇಕಾಗಿಲ್ಲ ಎಂದು ಹತಾಶನಾಗಿ ತಿಳಿಸುತ್ತಾನೆ. ಇದು ಎಲ್ಲೆಡೆ ಕಂಡುಬರುವ ಪ್ರಸಂಗ. ಕೊನೆಗೆ ಶವವನ್ನು, ಶವ ಸಂಸ್ಕಾರವನ್ನು ಆನ್‌ಲೈನ್‌ನಲ್ಲಿ ನೋಡುವ ಮಕ್ಕಳೂ ಇಂದು ಇದ್ದಾರೆ. ಇಲ್ಲಿ ಬರುವ ಪ್ರಶ್ನೆ ಎಂದರೆ ಇಂತಹ ಮಕ್ಕಳಿಗಾಗಿ ನಾವು ಹಲವರ ವಿರೋಧ ಕಟ್ಟಿಕೊಂಡು ಬೆಳೆಸುವ ಬಗ್ಗೆ. ನಮ್ಮ ಬಗ್ಗೆ ಕಿಂಚಿತ್ತೂ ವ್ಯಾಮೋಹವಿಲ್ಲದ ಇಂತಹ ಮಕ್ಕಳಿಗಾಗಿ ತಮ್ಮ ಜೀವಮಾನವಿಡೀ ದುಡಿದ ಬಗ್ಗೆ ಕೊನೆಗೆ ನಿರಾಶೆ ಮೂಡುತ್ತದೆ. ಇದರ ಬದಲು ಯಾರಾದರೂ ಅನಾಥರನ್ನು ಸಾಕಿದ್ದರೆ ಹೀಗಾಗುತ್ತಿರಲಿಲ್ಲ ಎಂಬ ಉದ್ಗಾರ ಬರುತ್ತದೆ.

ಅಂದರೆ ನಾವು ನಮಗೆ ಬೇಕಾದಂತೆ ಬದುಕಲಾಗುತ್ತಿಲ್ಲ. ಯಾರನ್ನೋ ನಂಬಿ, ಯಾರನ್ನೋ ದೂರ ಮಾಡಿಕೊಳ್ಳುತ್ತಿರುವ ಪ್ರಸಂಗಗಳಲ್ಲಿ, ಕೊನೆಗಾಲದಲ್ಲಿ ತಾನು ಮಾಡಿದ್ದು ತಪ್ಪು ಎಂದುಕೊಂಡರೆ ಯಾವುದೇ ಪ್ರಯೋಜನವಾಗುವುದಿಲ್ಲ. ಇಂದು ನಾವು ಹೇಗೆ ಬದುಕಬೇಕು ಎಂಬ ಬಗ್ಗೆ ಆತ್ಮವಿಮರ್ಶೆ ಮಾಡಿಕೊಳ್ಳುವುದು ಸರಿ ಎನಿಸುತ್ತದೆ. ಇಂದು ನಮ್ಮ ಹೆಂಡತಿ, ಮಕ್ಕಳೂ ಕೊನೆಗಾಲದಲ್ಲಿ ನಮ್ಮನ್ನು ತಿರಸ್ಕಾರದಿಂದ ನೋಡುತ್ತಾರೆ ಎಂಬ ಬಗ್ಗೆ ಅರಿವನ್ನು ತಂದುಕೊಂಡು ಒಂದು ಆದರ್ಶ ಜೀವನ ಮಾಡುವ ಬಗ್ಗೆ ಆಲೋಚಿಸುವುದು ಸೂಕ್ತ ಎನಿಸುತ್ತದೆ. ಮೊದಲನೆಯದಾಗಿ ನಾನು ಹೇಗೆ ಬದುಕಬೇಕು ಎಂಬ ಬಗ್ಗೆ ಯೋಚಿಸಬೇಕು. ನಾನು ಅನಾರೋಗ್ಯಕ್ಕೆ ತುತ್ತಾದರೆ ಅದರ ಬವಣೆಯನ್ನು ನಾನೇ ಅನುಭವಿಸಬೇಕು.

ಹಾಗಿರುವಾಗ ನಾನು ಅನಾರೋಗ್ಯಕ್ಕೆ ತುತ್ತಾಗದಂತೆ ಹೇಗಿರಬೇಕು ಎಂಬ ಬಗ್ಗೆ ಯೋಚಿಸಬೇಕು. ಸುಮ್ಮನೆ ಖರ್ಚು ಮಾಡುವುದು ಬೇಡ ಎಂದು ಆರೋಗ್ಯಕರವಲ್ಲದ ಪದಾರ್ಥಗಳನ್ನು ಸೇವಿಸುವ ಬದಲು ಒಳ್ಳೆಯ ಆಹಾರಕ್ಕಾಗಿ ಹಾಗೂ ತನಗಾಗಿ ಖರ್ಚು ಮಾಡುವ ಬಗ್ಗೆ ಯೋಚಿಸಬೇಕು. ಇತ್ತೀಚೆಗೆ ನಮಗೆ ಆರೋಗ್ಯದ ಬಗ್ಗೆ ಹೆದರಿಕೆ ಆರಂಭವಾಗಿದೆ. ಆದರೆ ಎಚ್ಚೆತ್ತುಕೊಳ್ಳುತ್ತಿಲ್ಲ.

ಇತ್ತೀಚೆಗೆ ಪರಿಚಿತರ ಮನೆಯಲ್ಲಿ ನಡೆದ ಒಂದು ಘಟನೆ ಹೀಗಿತ್ತು. ಒಬ್ಬ ಸಹೋದರಿಯ ಅಣ್ಣ ಇದ್ದ. ಆತನ ಪತ್ನಿ ಮುಂಚೆಯೇ ನಿಧನಳಾಗಿದ್ದಳು. ಮಕ್ಕಳು ವಿದೇಶದಲ್ಲಿದ್ದರು. ಈತ ಆರೋಗ್ಯವಾಗಿದ್ದ. ಆದರೆ ಯಾರೊಡನೆಯೂ ಬೆರೆಯುತ್ತಿರಲಿಲ್ಲ. ತನ್ನ ಹಣ, ತನ್ನಿಚ್ಛೆ ಎಂಬ ಮನೋಭಾವ. ನೆಂಟರನ್ನೂ ಹತ್ತಿರ ಸೇರಿಸುತ್ತಿರಲಿಲ್ಲ. ಒಮ್ಮೆ ಆತ ಬೆಳಗಿನ ವಾಕಿಂಗ್ ಹೋಗಿದ್ದರು. ಯಾವುದೋ ವಾಹನದಿಂದ ಅವರಿಗೆ ಆಕ್ಸಿಡೆಂಟ್ ಆಯಿತು. ಬೆಳಗಿನ ಸಮಯವಾದ್ದರಿಂದ ಯಾವ ವಾಹನ ಎಂದು ಗೊತ್ತಾಗಲಿಲ್ಲ. ಬೆನ್ನು ಮೂಳೆಗೆ ದೊಡ್ಡಮಟ್ಟದ ಪೆಟ್ಟಾಗಿತ್ತು. ಯಾರೋ ಕರೆದುಕೊಂಡು ಹೋಗಿ ಆಸ್ಪತ್ರೆಗೆ ದಾಖಲಿಸಿದರು. ನಂತರ ಆತನ ಸಹೋದರಿಗೆ ವಿಷಯ ಗೊತ್ತಾಯಿತು. ಸಹೋದರಿಯನ್ನು ಸಹಾ ಆತ ಹೆಚ್ಚಾಗಿ ಹಚ್ಚಿಕೊಂಡಿರಲಿಲ್ಲ. ಆದರೆ ಮಾನವೀಯತೆ, ಆಕೆ ಆಸ್ಪತ್ರೆಗೆ ಹೋದರು. ಆಸ್ಪತ್ರೆಯಲ್ಲಿ ತಿಂಗಳುಗಟ್ಟಲೇ ಇರಬೇಕಾಯಿತು. ವಯಸ್ಸೂ ಆದ ಕಾರಣ ಗುಣಮುಖನಾಗುವ ಅವಕಾಶ ಕಡಿಮೆ ಇತ್ತು. ಇದೀಗ ನಡೆಯಲಾರದ ಸ್ಥಿತಿ. ಎಲ್ಲದಕ್ಕೂ ಯಾರನ್ನಾದರೂ ಆಶ್ರಯಿಸಬೇಕಾದ ಅನಿವಾರ್ಯತೆ. ಈಗ ಆತ ಪಶ್ಚಾತ್ತಾಪ ಪಡುತ್ತಾರೆ. ನನ್ನ ಬಗ್ಗೆ ಕಾಳಜಿ ಇರುವ ಯಾರೂ ಇಲ್ಲ ಎಂಬ ನೋವನ್ನು ಅನುಭವಿಸುತ್ತಿದ್ದಾರೆ. ಅವರಿಗೆ ಈಗ ತಮ್ಮ ಬಗ್ಗೆಯೇ ಜಿಗುಪ್ಸೆ ಬಂದಿದೆ. ಆದರೆ ಕಾಲ ಹಿಂದಕ್ಕೆ ಹೋಗುವುದಿಲ್ಲ. ಈಗ ಅವರು ಸಾವನ್ನು ಕರೆಯುತ್ತಿದ್ದಾರೆ. ಆದರೆ ಸಾವಿಗೂ ಈತನ ಬಗ್ಗೆ ವ್ಯಾಮೋಹವಿಲ್ಲ. ಎಷ್ಟು ಸಾಧ್ಯವೋ ಅಷ್ಟು ನೋವು ಅನುಭವಿಸುತ್ತಿದ್ದಾರೆ.

ಹೀಗೆ ಆಗಬಾರದು ಎಂದರೆ ನಾವು ಮೊದಲಿನಿಂದಲೂ ನಮ್ಮವರು ಎನಿಸಿಕೊಂಡವರ ಬಗ್ಗೆ ಉತ್ತಮ ಸಂಬಂಧ ಇಟ್ಟುಕೊಳ್ಳಬೇಕು. ಅದು ಸ್ನೇಹಿತರೂ ಆಗಬಹುದು. ಅವರ ಕಷ್ಟಸುಖದಲ್ಲಿ ಭಾಗಿಯಾಗುತ್ತಿರಬೇಕು. ಹಾಗಾದಾಗ ನಮಗೆ ಏನಾದರೂ ತೊಂದರೆಯಾದರೆ ಅವರು ನಮಗಾಗಿ ಮರುಗುತ್ತಾರೆ, ಸಹಾಯ ಮಾಡುತ್ತಾರೆ. ಎಷ್ಟೊ ಸಮಯ ಕೋಟಿ ಹಣವಿದ್ದರೂ ಆಸ್ಪತ್ರೆಯಲ್ಲಿ ಏಕಾಂಗಿಯಾಗಿರುವವರನ್ನು ನಾವು ಕಾಣಬಹುದು. ಅವರ ಹಣಕ್ಕೆ ಅಲ್ಲಿ ಯಾವ ಬೆಲೆಯೂ ಇರುವುದಿಲ್ಲ.

ನಾವು ನಮ್ಮ ಮಕ್ಕಳನ್ನು ಸರಿದಾರಿಯಲ್ಲಿ ಬೆಳೆಸಬೇಕು. ಮುಂದೆ ಅವರೊಡನೆ ಸುಮಧುರ ಬಾಂಧವ್ಯ ಇರುವಂತೆ ನೋಡಿಕೊಳ್ಳಬೇಕು. ಮಕ್ಕಳ ಮನಸ್ಸಿನಲ್ಲಿ ತಾನು ಹುಟ್ಟಿರುವುದೇ ಹಣ ಸಂಪಾದನೆಗೆ ಎಂಬಂತಹ ಭಾವನೆ ಬೆಳೆಯದಂತೆ ನೋಡಿಕೊಳ್ಳಬೇಕು. ಕೇವಲ ಹಣ ಎಲ್ಲವನ್ನೂ ತಂದುಕೊಡುವುದಿಲ್ಲ ಎಂದು ಮಕ್ಕಳಿಗೆ ಕಲಿಸಬೇಕು. ಅಂತಹ ವಾತಾವರಣ ನಿರ್ಮಾಣ ಮಾಡುವ ಜವಾಬ್ದಾರಿ ಪೋಷಕರದ್ದೇ ಆಗಿರುತ್ತದೆ. ಮಕ್ಕಳಲ್ಲಿ ಮಾನವೀಯತೆ ತರುವಂತಹ ವಾತಾವರಣ ನಿರ್ಮಾಣ ಮಾಡಬೇಕು.

ನಮಗೆ ನಮ್ಮ ಆರೋಗ್ಯದ ಬಗ್ಗೆ ಕಾಳಜಿ ಇರಬೇಕು. ಉತ್ತಮವಾದ ಆಹಾರ ಸೇವಿಸುವುದು ಹಣ ಉಳಿಸಿ ವೈದ್ಯರಿಗೆ ನೀಡುವುದಕ್ಕಿಂತ ಉತ್ತಮ ಮಾರ್ಗ ಎಂಬುದ ಅರಿವಾಗಬೇಕು. ಆರೋಗ್ಯ ಕೆಟ್ಟ ನಂತರ ಆರೋಗ್ಯದ ಬಗ್ಗೆ ಗಮನ ಕೊಡುವುದಲ್ಲ. ಆರೋಗ್ಯ ಕೆಡದಂತೆ ನೋಡಿಕೊಳ್ಳುವುದೂ ಬುದ್ದಿವಂತಿಕೆಯೇ. ಇಂದು ಆರೋಗ್ಯದ ವಿಷಯದಲ್ಲಿ ನಮ್ಮ ನಿರಾಸಕ್ತಿ ಕಂಡುಬರುತ್ತಿದೆ. ತಲೆ ನೋವು ಎಂದರೆ ಮಾತ್ರೆ ತೆಗೆದುಕೊಂಡರಾಯಿತು ಎಂಬ ಮನೋಭಾವ ಸೂಕ್ತವಲ್ಲ. ತಲೆ ನೋವು ಯಾಕೆ ಬರುತ್ತದೆ ಎಂಬ ಬಗ್ಗೆ ನಮಗೆ ಗೊತ್ತಿರಬೇಕು. ದೇಹದಲ್ಲಿ ಎಲ್ಲಾದರೂ ನೋವಾದರೆ ಯಾವುದಾದರೂ ಸ್ಪ್ರೇ ಹಾಕಿಕೊಂಡರಾಯಿತು ಎಂಬ ಮನೋಭಾವ ಮುಂದೆ ಸ್ಪ್ರೇಗೂ ಬಗ್ಗುವುದಿಲ್ಲ. ಇಂದು ಖಾಯಿಲೆ ಎಂದರೆ ವೈದ್ಯರು ಅದನ್ನು ಸರಿಪಡಿಸುವುದಕ್ಕಿಂತ ಅದು ತೀವ್ರವಾಗದಂತೆ ನೋಡಿಕೊಳ್ಳಿ ಎಂದು ಹೇಳುತ್ತಾರೆಯೇ ಹೊರತು ಆ ಖಾಯಿಲೆಯನ್ನು ನಾನು ವಾಸಿ ಮಾಡುತ್ತೇನೆ ಎಂದು ಹೇಳುವುದಿಲ್ಲ. ಈಗ ಐದು ಎಂ.ಜಿ. ಮಾತ್ರೆ ಇದ್ದದ್ದು ಮುಂದೆ ಐದು ನೂರು ಎಂಜಿಗೆ ಹೋದರೂ ಖಾಯಿಲೆ ಉಲ್ಬಣಿಸುವುದೇ ವಿನಃ ಅದು ನಮ್ಮಿಂದ ದೂರವಾಗುವುದಿಲ್ಲ. ನಮಗೆ ನಮ್ಮವರು, ನಮ್ಮ ಬಗ್ಗೆ ಕಾಳಜಿ ಇದ್ದವರಿಂದಲೇ ಖಾಯಿಲೆ ಗುಣವಾಗುವುದು. ಮಾತ್ರೆಗಳು ತಾತ್ಕಾಲಿಕವಾಗಿ ನೋವು ಇಲ್ಲದಂತೆ ಮಾಡುವುದೇ ವಿನಃ ಖಾಯಿಲೆ ಹೋಗಲಾಗಿಸದು. ಔಷಧಕ್ಕಿಂತ ಉತ್ತಮ ಸಂಬಂಧ ಹಾಗೂ ಮಾನಸಿಕ ನೆಮ್ಮದಿ ನಮಗೆ ಆರೋಗ್ಯ ತಂದುಕೊಡುತ್ತದೆ. ಇದು ನಮಗೆ ಅರಿವಾಗಬೇಕು.

ನಮ್ಮ ಜೀವನ ಹೇಗಿರಬೇಕು ಎಂಬುದನ್ನು ನಾವೇ ನಿರ್ಧರಿಸಬೇಕು. ಮನಸ್ಸು ಆದಷ್ಟೂ ಧನಾತ್ಮಕವಾದ ಚಿಂತನೆಯಲ್ಲಿ ಇರುವಂತೆ ನೋಡಿಕೊಳ್ಳಬೇಕು. ಜನರೊಡನೆ ಬೆರೆಯಬೇಕು. ಬೇರೆಯವರ ಕಷ್ಟಗಳಲ್ಲಿ ಭಾಗಿಯಾಗಬೇಕು, ಇಂತಹ ಮನೋಭಾವ ನಮಗೆ ಬರಬೇಕು.

ಸಿದ್ದರಾಮನಹುಂಡಿ ಡೇರಿ ಅಧ್ಯಕ್ಷರಾಗಿ ಸಿದ್ದರಾಮ, ಉಪಾಧ್ಯಕ್ಷರಾಗಿ ಶಿವಚಂದ್ರ ಅವಿರೋಧ ಆಯ್ಕೆ



ಸಿದ್ದರಾಮನಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಸಿದ್ದರಾಮ, ಉಪಾಧ್ಯಕ್ಷರಾಗಿ ಶಿವಚಂದ್ರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಂಘದ ಕಾರ್ಯದರ್ಶಿ ರಮೇಶ್, ಪ್ರವೀಣ್, ಸಂಘದ ನಿರ್ದೇಶಕರಾದ ಮಹದೇವ, ನಾಗೇಶ್, ರಮೇಶ್, ಸುರೇಶ್, ದೊಳ್ಳಯ್ಯ, ಶಿವಕುಮಾರ್, ಮಾದೇಶ್, ಲತಾ ಕರಿಗೌಡ, ಭಾರತಿ ಮಹೇಶ್, ಮುಖಂಡರಾದ ಎಪಿಎಂಸಿ ಸದಸ್ಯ ಬಸವರಾಜು, ನಾಗರಾಜು, ಪುಟ್ಟಣ್ಣ, ಚಂದ್ರಶೇಖರ್, ರಾಮು, ಶೇಖರ, ಕುಮಾರ, ರಾಮು, ರಾಮಣ್ಣ, ಸಿದ್ದರಾಮ, ಮಹೇಶ್, ರೂಪೇಶ್, ರಘು, ಕೃಷ್ಣ, ಕರಗಗೌಡ, ಕೆಂಪು ರಾಮ, ಮಹದೇವ್, ರವಿ, ರಾಮಣ್ಣ, ರಾಜಣ್ಣ, ನಾಗೇಶ್, ಉದಯ, ಜೈರಾಮ್ ಮತ್ತಿತರರು ಉಪಸ್ಥಿತರಿದ್ದರು.

ವೇದಾವತಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಏ.20– ಮೈಸೂರಿನ ಕುವೆಂಪುನಗರದ ಬಿಜಿಎಸ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಎಲ್.ಕೆ. ವೇದಾವತಿ ಅವರು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 483 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಕೆ.ಜಿ.ಕೊಪ್ಪಲು ನಿವಾಸಿಗಳಾದ ಕುಮಾರ ಮತ್ತು ಲೀಲಾ ದಂಪತಿ ಪುತ್ರಿ.

ಕೋಟಿಗಾನಹಳ್ಳಿ ರಾಮಯ್ಯ ರಚಿತ 'ದರ್ಗಾ ಮಾಳದ ಚಿತ್ರಗಳು' ಕೃತಿ ಬಿಡುಗಡೆ

ಮೈಸೂರು, ಏ.20(ಎಂಕೆ)–ದಲಿತ ಕವಿ, ನಾಟಕಕಾರ ಕೋಟಿಗಾನಹಳ್ಳಿ ರಾಮಯ್ಯ ರಚಿತ 'ದರ್ಗಾ ಮಾಳದ ಚಿತ್ರಗಳು' ಕೃತಿಯನ್ನು ಬಿಡುಗಡೆ ಮಾಡಲಾಯಿತು.

ಮೈಸೂರು ರಂಗಾಯಣದ ಬಿ.ವಿ. ಕಾರಂತ ರಂಗಚಾವಡಿಯಲ್ಲಿ ಆಕೃತಿ ಪುಸ್ತಕ, ಜಂಗಮ ಕಲೆಕ್ಟಿವ್, ಬೀ ಕಲ್ಚರ್, ಬಿವಿಎಸ್, ಬಯಲು ಬಳಗ, ತಮಟೆ ಮೀಡಿಯಾ ಸಹಯೋಗದೊಂದಿಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪತ್ರಕರ್ತ ಡಾ.ಸ್ವಾಮಿ ಆನಂದ್ ಪುಸ್ತಕ ಬಿಡುಗಡೆ ಮಾಡಿದರು.

ಪುಸ್ತಕ ಕುರಿತು ಸಮಾಜಶಾಸ್ತ್ರಜ್ಞ ಸಿ.ಜೆ.ಲಕ್ಷ್ಮೀಪತಿ ಮಾತನಾಡಿ, ಪ್ರಸ್ತುತ ಶಿಕ್ಷಣ ವ್ಯವಸ್ಥೆಯು ವಿದ್ಯಾರ್ಥಿಗಳನ್ನು ಸಾಂಸ್ಕೃತಿಕ ಮೌನಕ್ಕೆ ದೂಡಿದ್ದು, ಅವರಲ್ಲಿ ಪ್ರಶ್ನೆಗಳು ಸೃಷ್ಟಿಸಲು ಅವಕಾಶವೇ ಇಲ್ಲದಂತೆ ಮಾಡಲಾಗಿದೆ. ಮಕ್ಕಳ ಮಿದುಳಿನಲ್ಲಿ ಅವರಿಗೆ ತಿಳಿಯದಂತೆಯೇ ವಿಷವನ್ನು ಬಿತ್ತಲಾಗುತ್ತಿದ್ದು, ಇಂತಹ ಸೂಕ್ಷ್ಮಗಳನ್ನು ಅರಿಯಲು 'ದರ್ಗಾ ಮಾಳದ ಚಿತ್ರಗಳು' ಕೃತಿ ಸಹಾಯಕವಾಗಿದೆ ಎಂದರು.

1992ರ ಬಾಬ್ರಿ ಮಸೀದಿ ಧ್ವಂಸ ಪ್ರಕರಣ, ಬ್ರಾಹ್ಮಣವಾದದ ಹೇರಿಕೆಯ ಕಾಲಘಟ್ಟದಲ್ಲಿ ಕೋಟಿಗಾನಹಳ್ಳಿ ರಾಮಯ್ಯ ಅವರು, ಕೋಲಾರದಲ್ಲಿ ಸ್ಥಾಪಿಸಿದ ಆದಿಮ ಸಂಸ್ಥೆಯು ದಲಿತ ಚಳವಳಿಯ ಸಾಂಸ್ಕೃತಿಕ ಚಲನಶೀಲತೆಯನ್ನು ಮುಂದುವರಿಸಿತು. ಪರ್ಯಾಯ ಶಿಕ್ಷಣ ವ್ಯವಸ್ಥೆಗೆ ಪ್ರಯತ್ನಿಸಿತು ಎಂದು ಸ್ಮರಿಸಿದರು.

ದರ್ಗಾ ಮಾಳದ ಚಿತ್ರಗಳು ಪುಸ್ತಕವು ಒಂದು ಕುಲಶಾಸ್ತ್ರೀಯ ಅಧ್ಯಯನವಾಗಿ ಕಾಣುತ್ತದೆ. ಆದಿಮ ಸುತ್ತಮುತ್ತಲಿನ ಹಳ್ಳಿಗಳಲ್ಲಿ ನಡೆಯುವ ಘಟನೆಗಳನ್ನು ಹೊಸ ದೃಷ್ಟಿಕೋನದೊಂದಿಗೆ ನೀಡುತ್ತದೆ. ಕೃತಿಯಲ್ಲಿನ ಪಾತ್ರಗಳು ಪರಸ್ಪರ ಸಂವಾದದಲ್ಲಿ ತೊಡಗಿ ಪ್ರಶ್ನೆಗಳನ್ನು ಸೃಷ್ಟಿಸುತ್ತವೆ. ನಮ್ಮಲ್ಲಿ ಸಂವೇದನಾಶೀಲತೆಯನ್ನು ಮೂಡಿಸುತ್ತದೆ. ಇಲ್ಲಿ ಕೃತಿಕಾರ ಮತ್ತು ಕೃತಿಯಲ್ಲಿನ ಪಾತ್ರಗಳ ನಡುವೆ ಸಂಬಂಧ ಇದೆ. ಸಾಮಾಜಿಕ ಮನಃಶಾಸ್ತ್ರೀಯ ಮಹತ್ವವನ್ನು ಕೃತಿ ಹೊಂದಿದೆ. ಆದಿಮದ ಪ್ರಯೋಗಳು ಈ ನೆಲದ ಪಾಠವಾಗಿ ಮಾಡಬೇಕು. ಉತ್ತಮ ತಾತ್ವಿಕ ಮತ್ತು ಸೈದ್ಧಾಂತಿಕ ಮಹತ್ವದ ವಿಷಯ ಹೊರತರಲು ಆದ್ಯತೆ ನೀಡಬೇಕು ಎಂದರು.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರೊ.ವಿಜಯಕುಮಾರಿ ಕರಿಕಲ್ ಮಾತನಾಡಿ, ದ್ವೇಷದ ವಾತಾವರಣದಲ್ಲಿ ಪ್ರೀತಿ ಹಂಚುವ ಕೆಲಸ ಹೆಚ್ಚಾಗಬೇಕಿದೆ. ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ತುಂಬ ಬೇಕಿದೆ. 'ದರ್ಗಾ ಮಾಳದ ಚಿತ್ರಗಳು' ಕೃತಿ ಕೋಟಗಾನಹಳ್ಳಿ ರಾಮಯ್ಯ ಅವರಲ್ಲಿನ ತಾಯ್ತನವನ್ನು ಪರಿಚಯಿಸುತ್ತದೆ ಎಂದು ಮೆಚ್ಚಗೆ ವ್ಯಕ್ತಪಡಿಸಿದರು.

ಕವಯತ್ರಿ ಪಿ.ಭಾರತೀದೇವಿ ಮಾತನಾಡಿ, ಕೌಶಲಗಳ ಹೆಸರಿನಲ್ಲಿ ಕುಲ ಕಸುಬನ್ನು ಉತ್ತೇಜಿಸುವ ತಾರತಮ್ಯದ ಶಿಕ್ಷಣ ನೀತಿ ರೂಪಿಸಲಾಗುತ್ತಿದೆ. ಈ ಬಗ್ಗೆ ಅವಲೋಕನ ನಡೆಯಬೇಕು ಎಂದು ಅಭಿಪ್ರಾಯಿಸಿದರು. ರಂಗ ಕಲಾವಿದ ಕೆ.ಪಿ. ಲಕ್ಷ್ಮಣ್, ಮೈಸೂರು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಪ್ರಕಾಶಕ ಡಿ.ಎನ್.ಗುರುಪ್ರಸಾದ್ ಮತ್ತಿತರರಿದ್ದರು.



ಕೋಟಿಗಾನಹಳ್ಳಿ ರಾಮಯ್ಯ ರಚಿತ 'ದರ್ಗಾ ಮಾಳದ ಚಿತ್ರಗಳು' ಕೃತಿಯನ್ನು ಡಾ.ಸ್ವಾಮಿ ಆನಂದ್ ಬಿಡುಗಡೆ ಮಾಡಿದರು.

ಸಮುದಾಯ, ಭಾಷೆ ಉಳಿವು ಅಗತ್ಯ... ❞

ಸಮುದಾಯ ಮತ್ತು ಭಾಷೆ ಸಾಯುತ್ತಿರುವ ಹೊತ್ತಿನಲ್ಲಿ ಅವುಗಳನ್ನು ಮುಂದಿನ ತಲೆಮಾರಿಗೆ ತಲುಪಿಸುವ ಕೆಲಸ ತುರ್ತಾಗಿ ಆಗಬೇಕಿದೆ. ಕನ್ನಡ ಭಾಷೆಯಲ್ಲಿ ಹಲವು ಕನ್ನಡಗಳಿದ್ದು, ಅವುಗಳನ್ನು ಬೆರೆಸುವ ಪ್ರಯೋಗದಲ್ಲಿ ತೊಡಗಿದ್ದೇನೆ. ಮುಂದಿನ ಪೀಳಿಗೆಗೆ ಬಿಡುಗಡೆಯ ಆಯ್ಕೆಗಳು ಬೇಕಾಗುತ್ತದೆ. ಆದಿಮ ಅಂಥ ಆಯ್ಕೆಗಳನ್ನು ಶೋಧಿಸುವ ಸ್ಥಳ. ಇಲ್ಲಿನ ಲೇಖನಗಳು ಅದೇ ಉದ್ದೇಶವನ್ನು ಹೇಳುತ್ತದೆ. **– ಕೋಟಿಗಾನಹಳ್ಳಿ ರಾಮಯ್ಯ, ದಲಿತ ಕವಿ, ನಾಟಕಕಾರ.**

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಹಾಸನ ಮಿತ್ರ

ಹಾಸನ: ರಾಜ್ಯ ಸರ್ಕಾರದಿಂದ 21.84 ಕೋಟಿ ಬಿಡುಗಡೆ


ರೈಲ್ವೆ ಮೇಲ್ಸೇತುವೆ ಕಾಮಗಾರಿಯನ್ನು ಶ್ರೇಯಸ್ ಪಟೇಲ್ ಪರಿಶೀಲಿಸಿದರು.

ಹಾಸನ,ಏ.20–ನಗರದ ಚನ್ನಪಟ್ಟಣ ಬಸ್ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರೈಲ್ವೆ ಮೇಲ್ಸೇತುವೆ ಮತ್ತೊಂದು ಬದಿಯ ಕಾಮಗಾರಿ ಭರದಿಂದ ನಡೆಯುತ್ತಿದ್ದು, 2026ರ ಮಾರ್ಚ್ ವೇಳೆಗೆ ಪೂರ್ಣಗೊಳ್ಳಲಿದೆ ಎಂದು ಸಂಸದ ಶ್ರೇಯಸ್ ಪಟೇಲ್ ಹೇಳಿದರು.

ನಗರದ ಎನ್.ಆರ್. ವೃತ್ತದಿಂದ ಚನ್ನಪಟ್ಟಣ ಬಸ್‌ನಿಲ್ದಾಣದವರೆಗೆ ನಿರ್ಮಾಣವಾಗುತ್ತಿರುವ ಮೇಲ್ಸೇತುವೆ ಕಾಮಗಾರಿಯನ್ನು ಶನಿವಾರ ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಈ ಕಾಮಗಾರಿಗೆ ಒಟ್ಟು 49 ಕೋಟಿ ವೆಚ್ಚವಾಗಲಿದ್ದು, ರಾಜ್ಯ ಸರ್ಕಾರ 21.84 ಕೋಟಿ ಈಗಾಗಲೇ ಬಿಡುಗಡೆ ಮಾಡಿದೆ. ಎಚ್‌ಆರ್‌ಎಂಡಿಸಿ ಮೂಲಕ 18 ಕೋಟಿ ಬಿಡುಗಡೆಯಾಗಲಿದೆ ಎಂದರು.

ರೈಲ್ವೆ ಅಧಿಕಾರಿಗಳು ಹಾಗೂ ಏಜೆನ್ಸಿ ಅಧಿಕಾರಿಗಳ ನೇತೃತ್ವದಲ್ಲಿ ಕಾಮಗಾರಿ ಪ್ರಗತಿ ವೀಕ್ಷಣೆ ಮಾಡಲಾಗಿದೆ. ಸೇತುವೆ ಜೋಡಿಸುವ ಕಬ್ಬಿಣದ ಕಮಾನನ್ನು ಹೈದರಾಬಾದ್‌ನಲ್ಲಿ ನಿರ್ಮಾಣ ಮಾಡಬೇಕಾಗಿದೆ. ಇದಕ್ಕೆ ಎಂಟು ತಿಂಗಳು ಬೇಕಾಗಬಹುದು. ಹಾಗಾಗಿ 2026ರ ಫೆಬ್ರುವರಿ ಅಂತ್ಯಕ್ಕೆ ಅಥವಾ ಮಾರ್ಚ್ ವೇಳೆಗೆ ಕಾಮಗಾರಿ ಪೂರ್ಣಗೊಳಿಸುವ ಕುರಿತು ಅಧಿಕಾರಿಗಳು ಭರವಸೆ ನೀಡಿದ್ದಾರೆ ಎಂದು ಹೇಳಿದರು.

ಆನೆ ಧಾಮಕ್ಕೆ ಕ್ರಮ: ಜಿಲ್ಲೆಯಲ್ಲಿ ಆನೆ ಉಪಟಳ ತಹಬದಿಗೆ ತರುವ ನಿಟ್ಟಿನಲ್ಲಿ ಆನೆ ಧಾಮ ನಿರ್ಮಾಣ ಸಂಬಂಧ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಲಿದೆ. ಡಿಸಿಎಫ್ ನೇತೃತ್ವದಲ್ಲಿ ವರದಿ ತಯಾರಿಸಲು ಸೂಚನೆ ನೀಡಲಾಗಿದೆ. ಈ ವರದಿಯನ್ನು ಕೇಂದ್ರ ಅರಣ್ಯ ಸಚಿವರ ಗಮನಕ್ಕೆ ತಂದು, ಆನೆ ಧಾಮ ನಿರ್ಮಾಣಕ್ಕೆ ಕಾಂಪಾ ಅನುದಾನ ಬಿಡುಗಡೆಗೂ ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು.

ಉಪಟಳ ನೀಡುತ್ತಿರುವ ಆನೆಗಳನ್ನು ಗುರುತಿಸಲಾಗುತ್ತಿದ್ದು, ಅಗತ್ಯವಿದ್ದರೆ ಆನೆ ಸ್ಥಳಾಂತರ ಹಾಗೂ ರೇಡಿಯೋ ಕಾಲರ್ ಅಳವಡಿಕೆ ಕಾರ್ಯಾಚರಣೆ ಆರಂಭಿಸಲಾಗುವುದು. ಈ ಸಂಬಂಧ ರಾಜ್ಯ ಅರಣ್ಯ ಸಚಿವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ ಎಂದರು.

ಬೇಲೂರು ಪುರಸಭೆ ಅಧ್ಯಕ್ಷರ ವಿರುದ್ಧ ಬಿ.ಶಿವರಾಂ ಸೇರಿದಂತೆ ಕಾಂಗ್ರೆಸ್ ನಾಯಕರ ನಡುವಿನ ಭಿನ್ನಾಭಿಪ್ರಾಯದ ಕುರಿತು ಮಾತನಾಡಿದ ಅವರು, ಈ ಕುರಿತು ಬಿ.ಶಿವರಾಂ ಅವರೊಂದಿಗೆ ಸಭೆ ಸೇರಿ ಒಳ್ಳೆಯ ರೀತಿಯಲ್ಲಿ ಸಮಸ್ಯೆ ಬಗೆಹರಿಸಲಾಗುವುದು ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜನಿವಾರ ನಿರ್ಬಂಧ ಸರಿಯಲ್ಲ: ಪರೀಕ್ಷೆ ಬರೆಯುವ ವೇಳೆ ಜನಿವಾರ ಹಾಕದಂತೆ ನಿರ್ಬಂಧ ಸರಿಯಲ್ಲ. ಇದನ್ನು ಬಲವಾಗಿ ಖಂಡಿಸುವುದಾಗಿ ಶ್ರೇಯಸ್ ಪಟೇಲ್ ಹೇಳಿದರು. ಆಯಾ ಸಮುದಾಯಗಳಿಗೆ ಅವರ ಧಾರ್ಮಿಕ ಆಚರಣೆ ಸ್ವಾತಂತ್ರ್ಯ ಇದೆ. ಅದನ್ನು ಹತ್ತಿಕ್ಕುವ ಕೆಲಸ ಮಾಡಬಾರದು. ಈ ಸಂಬಂಧ ಸಚಿವರು ಸಹ ಪ್ರತಿಕ್ರಿಯೆ ನೀಡಿದ್ದು, ಈ ಕ್ರಮವನ್ನು ಖಂಡಿಸುತ್ತೇನೆ ಎಂದರು. ಕಾಂಗ್ರೆಸ್ ಜಿಲ್ಲಾ ವಕ್ತಾರ ದೇವರಾಜೇಗೌಡ, ಅಧಿಕಾರಿಗಳು ಹಾಜರಿದ್ದರು.

ಕಾರಿನಲ್ಲಿ ಗ್ರಾಪಂ ಸಹಾಯಕ ಲೆಕ್ಕಾಧಿಕಾರಿ ಶವ ಪತ್ತೆ

ಚನ್ನರಾಯಪಟ್ಟಣ, ಏ.20– ಜಿಲ್ಲೆಯ ಚನ್ನರಾಯಪಟ್ಟಣದ ರಾಮೇಶ್ವರ ಬಡಾವಣೆಯಲ್ಲಿ ರಸ್ತೆ ಬದಿ ನಿಂತಿದ್ದ ಕಾರಿನೊಳಗೆ ದಿಡಗ ಗ್ರಾಮ ಪಂಚಾಯಿತಿ ಸಹಾಯಕ ಲೆಕ್ಕಾಧಿಕಾರಿ ಶಿವಪ್ರಸಾದ್ (32) ಶವ ಪತ್ತೆಯಾಗಿದೆ.

ಆಲೂರು ತಾಲೂಕಿನ ಸಿದ್ದಾಪುರ ಗ್ರಾಮದ ನಿವಾಸಿಯಾಗಿದ್ದ ಶಿವಪ್ರಸಾದ್, ಅತಿಯಾಗಿ ಮದ್ಯ ಸೇವಿಸುವ ಚಟ ಹೊಂದಿದ್ದರು ಎನ್ನಲಾಗಿದೆ. ಶುಕ್ರವಾರ ತಡರಾತ್ರಿ ಮದ್ಯ ಸೇವಿಸಿ, ತಮ್ಮ ಕಾರಿನೊಳಗೆ ಮಲಗಿದ್ದ ಅವರು, ಅಲ್ಲಿಯೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ಶಂಕಿಸಿದ್ದಾರೆ.

ಕಾರಿನ ಕೀ ಒಳಗೆ ಇರುವುದು ಹಾಗೂ ಕಾರು ನಿಂತ ಸ್ಥಿತಿಯಲ್ಲಿಯೇ ಇರುವುದನ್ನು ಗಮನಿಸಿದ ಸ್ಥಳೀಯರು, ಚನ್ನರಾಯಪಟ್ಟಣ ನಗರ ಠಾಣೆಗೆ ಮಾಹಿತಿ ನೀಡಿದ್ದಾರೆ. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಮೆಕ್ಯಾನಿಕ್ ಸಹಾಯದಿಂದ ಕಾರಿನ ಬಾಗಿಲು ತೆಗೆದು ಪರಿಶೀಲಿಸಿದಾಗ, ಶಿವಪ್ರಸಾದ್ ಕಾರಿನೊಳಗೆ ವಿಷ ಸೇವಿಸಿ ಮೃತಪಟ್ಟಿರುವುದು ಪ್ರಾಥಮಿಕ ಹಂತದ ತನಿಖೆಯಲ್ಲಿ ದೃಢಪಟ್ಟಿದೆ. ಚನ್ನರಾಯಪಟ್ಟಣ ನಗರ ಠಾಣೆಯ ಇನ್‌ಸ್ಪೆಕ್ಟರ್ ರಘುಪತಿ, ಸಿಬ್ಬಂದಿ ಕಿರಣ್ ಎಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಮರಣೋತ್ತರ ಪರೀಕ್ಷೆಗಾಗಿ ಶವವನ್ನು ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ.

ಕರಿಯಮ್ಮ, ಮಲ್ಲಿಗೆಮ್ಮ ಜಾತ್ರೆ: ಮಡಿಲು ಅಕ್ಕಿ ತುಂಬಿ ಸಂಭ್ರಮ



ಕರಿಯಮ್ಮ ಮತ್ತು ಮಲ್ಲಿಗೆಮ್ಮನವರ 56ನೇ ಜಾತ್ರಾ ಮಹೋತ್ಸವಕ್ಕೆ ಭಕ್ತಾದಿಗಳಿಂದ ಮಡಿಲು ಅಕ್ಕಿ ಸ್ವೀಕಾರಕ್ಕೆ ಚಾಲನೆ ನೀಡಲಾಯಿತು.

ಅರಸೀಕೆರೆ: ನಗರದ ಗ್ರಾಮದೇವತೆಗಳಾದ ಕರಿಯಮ್ಮ ಮತ್ತು ಮಲ್ಲಿಗೆಮ್ಮನವರ 56ನೇ ಜಾತ್ರಾ ಮಹೋತ್ಸವಕ್ಕೆ ಭಕ್ತಾದಿಗಳಿಂದ ಮಡಿಲು ಅಕ್ಕಿ ಸ್ವೀಕಾರಕ್ಕೆ ಚಾಲನೆ ನೀಡಲಾಯಿತು.

ಪ್ರತಿ ವರ್ಷವೂ ಜಾತ್ರಾ ಮಹೋತ್ಸವದಲ್ಲಿ ಶ್ರೀದೇವಿಯವರು ಪ್ರತಿ ಮನೆ ಮನೆಗೆ ತೆರಳಿ ಆಸೀನರಾಗುವುದರ ಮೂಲಕ ಮಡಿಲು ಅಕ್ಕಿ ಪಡೆಯುವುದು ವಾಡಿಕೆ. ಈ ವರ್ಷವೂ ನಗರದ ಹಲವಾರು ಬಡಾವಣೆಗಳ ಮನೆಗಳಿಗೆ ತೆರಳಿದ ಕರಿಯಮ್ಮ ದೇವಿ ಮೂರ್ತಿಯನ್ನು ಸಡಗರ ಸಂಭ್ರಮದಿಂದ ಮನೆಯೊಳಗೆ ಬರಮಾಡಿಕೊಂಡ ಮರದ ಬಾಗಿನದಲ್ಲಿ ಮಂಗಳ ದ್ರವ್ಯಗಳೊಂದಿಗೆ, ಅಕ್ಕಿ, ಅರಸಿನ, ಕುಂಕುಮದೊಂದಿಗೆ ಕಾಣಿಕೆ ಅರ್ಪಿಸಿ ಪ್ರಾರ್ಥಿಸಿ ಪುನೀತರಾದರು.

ಗ್ರಾಮ ದೇವತೆಗಳೆಂದರೆ ಮಹಿಳೆಯರಿಗೆ ಎಲ್ಲಿಲ್ಲದ ಸಂಭ್ರಮ, ಪ್ರಾತಃಕಾಲದಲ್ಲಿಯೇ ಎದ್ದು, ಮನೆ ಮುಂದೆ ಸಾರಿಸಿ, ತಳಿರು ತೋರಣಗಳಿಂದ ಶೃಂಗರಿಸಿ ಸಾಂಪ್ರದಾಯಿಕ ಉಡುಗೆ ತೊಡುಗೆಗಳನ್ನು ಧರಿಸಿ ಅಮ್ಮನವರನ್ನು ಬರಮಾಡಿಕೊಳ್ಳುವುದೇ ಒಂದು ಉತ್ಸವ.

ಗ್ರಾಮೀಣ ಸೋಗಡಿನ ವಾದ್ಯ ಮೇಳದೊಂದಿಗೆ ವಿವಿಧ ಹೂವುಗಳಿಂದ ಶೃಂಗರಿಸಿಕೊಂಡು ಸಾಗುವ ಅಮ್ಮನವರು ಭಕ್ತರ ಮನೆಯಲ್ಲಿ ಕೆಲ ಕಾಲ ಆಸೀನರಾಗುತ್ತಾರೆ. ಇಷ್ಟಾನುಸಾರ ಪೂಜೆ ಕೈಂಕರ್ಯಗಳನ್ನು ಅರ್ಪಿಸುವ ಭಕ್ತರು ಪ್ರಸಾದ ವಿತರಿಸಿ ಪುನೀತರಾಗುತ್ತಾರೆ. ದೇವಸ್ಥಾನ ಅಭಿವೃದ್ಧಿ ಸೇವಾ ಸಮಿತಿ ಪದಾಧಿಕಾರಿಗಳ ನೇತೃತ್ವದಲ್ಲಿ ಪ್ರಾರಂಭವಾದ ಮಡಿಲು ಅಕ್ಕಿ ಅರ್ಪಿಸುವ ಕಾರ್ಯಕ್ರಮವು ಜಾತ್ರಾ ಮಹೋತ್ಸವ ದವರೆಗೂ ದೇವಸ್ಥಾನದಲ್ಲಿ ಮುಂದುವರೆದು ಭಕ್ತಾದಿಗಳಿಂದ ಮಡಿಲು ಅಕ್ಕಿ ಸ್ವೀಕರಿಸಲಾಗುತ್ತದೆ. ದೇವಸ್ಥಾನ ಸಮಿತಿ ಕಾರ್ಯದರ್ಶಿ ಕಿರಣ್‌ಕುಮಾರ್, ರಮೇಶ್, ಗುರುಮೂರ್ತಿ, ದಿವಾಕರ್, ಪ್ರಸನ್ನ, ಯಶವಂತ, ನಿರಂಜನ್‌ಕುಮಾರ್, ಮಧು, ಲೋಕೇಶ್, ಮಂಜುನಾಥ್, ನವೀನ್‌ಕುಮಾರ್, ಪೂಜಾರ್ ರಮೇಶ್, ಮುರಳೀಧರ ಇತರರು ಭಾಗವಹಿಸಿದ್ದರು.

ವಿದೇಶಿ ನೇರ ಹೂಡಿಕೆಯಿಂದ ದೇಶಕ್ಕೆ, ದೇಶದ ಜನರಿಗೇನು ಪ್ರಯೋಜನವಿಲ್ಲ

● ಆರ್ಥಿಕ ತಜ್ಞ ಪ್ರೊ.ಬಿ.ಎಂ.ಕುಮಾರಸ್ವಾಮಿ ವಿವರಣೆ ● ಎಫ್‌ಡಿಐನಿಂದ ದೇಶದ ಯುವಕರಿಗೆ ಉದ್ಯೋಗವೂ ಇಲ್ಲ

ಮೈಸೂರು,ಏ.20(ಎಸ್‌ಪಿಎನ್)–ಭಾರತದ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿಯಲ್ಲಿ ವಿದೇಶಿ ನೇರ ಹೂಡಿಕೆ(ಎಫ್‌ಡಿಐ)ಯ ಪಾಲು ಅಧಿಕವಾಗಿದೆ. ಇದರಲ್ಲಿ ಭಾರತೀಯರಿಗೆ, ಭಾರತೀಯ ಕಂಪನಿಗಳಿಗೆ ಏನು ಲಾಭ ಎಂದು ಆರ್ಥಿಕ ತಜ್ಞ ಪ್ರೊ.ಬಿ.ಎಂ.ಕುಮಾರಸ್ವಾಮಿ ಪ್ರಶ್ನಿಸಿದರು.

ಮೈಸೂರು ಜೆಎಲ್‌ಬಿ ರಸ್ತೆಯ ಎಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಸ್ವದೇಶಿ ಜಾಗರಣ ಮಂಚ್ ಮೈಸೂರು ಘಟಕದ ವತಿಯಿಂದ ಏರ್ಪಡಿಸಿದ್ದ ಭಾರತಕ್ಕೆ ವಿದೇಶಿ ಬಂಡವಾಳ 'ಭ್ರಮೆ ಮತ್ತು ವಾಸ್ತವ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಎಫ್‌ಡಿಐ ಹೆಚ್ಚಳದಿಂದ ಭಾರತೀಯ ಯುವ ಸಮೂಹಕ್ಕೆ ಉದ್ಯೋಗವೂ ಹೆಚ್ಚಳವಾಗುತ್ತಿಲ್ಲ. ಸ್ವದೇಶಿ ಕಂಪನಿಗಳು ವಿದೇಶಿ ಮಾರುಕಟ್ಟೆಯಲ್ಲಿ ಪೈಪೋಟಿ ನೀಡುವ ಹಂತಕ್ಕೂ ಬೆಳೆದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ವಿದೇಶಿ ನೇರ ಹೂಡಿಕೆಯು 'ಗ್ರೀನ್ ಫೀಲ್ಡ್' ಮತ್ತು 'ಬ್ರೌನ್ ಫೀಲ್ಡ್' ಇನ್‌ವೆಸ್ಟ್‌ಮೆಂಟ್ ರೂಪದಲ್ಲಿರುತ್ತದೆ. ಗ್ರೀನ್ ಫೀಲ್ಡ್ ಹೂಡಿಕೆ ಹೆಚ್ಚಾದಂತೆ ಉದ್ಯಮಗಳ ಸಂಖ್ಯೆ ಹೆಚ್ಚಾಗುತ್ತದೆ. ಆದರೆ, ಬ್ರೌನ್ ಫೀಲ್ಡ್ ಹೂಡಿಕೆ ಹೆಚ್ಚಾದರೆ, ದೇಶಿಯ ಉದ್ಯಮ ಸಂಸ್ಥೆಗಳು ವಿದೇಶಿಯರ ಹತೋಟಿಗೆ ಹೋಗುತ್ತದೆ. ದೇಶಿಯ ಉದ್ಯಮಗಳಲ್ಲಿ ವಿದೇಶಿ ಹೂಡಿಕೆದಾರರು ಬಂಡವಾಳ ಹೂಡುವುದನ್ನು ಸಾಧ್ಯವಾದಷ್ಟು ಕಡಿಮೆ ಮಾಡಲು ಕೇಂದ್ರ ಸರ್ಕಾರ ಚಿಂತಿಸಬೇಕು ಎಂದು ಸಲಹೆ ನೀಡಿದರು.

ವಿದೇಶಿ ಉದ್ಯಮಗಳಲ್ಲಿ ಲಾಭಾಂಶ ಹೆಚ್ಚಿಸಲು ಹಾಗೂ ಉದ್ಯೋಗಸ್ಥರ ಸಂಖ್ಯೆ ಕಡಿತಗೊಳಿಸಲು ರೋಬೋಟಿಕ್ ಹಾಗೂ ಎಐ ತಂತ್ರಜ್ಞಾನದ ಮೊರೆ ಹೋಗುತ್ತಿದ್ದಾರೆ. ಇದರಿಂದ ನಮ್ಮ ಯುವಕರಿಗೆ ಉದ್ಯೋಗ ದೊರೆಯುವುದಿಲ್ಲ. ಮೇಕ್ ಇನ್ ಇಂಡಿಯಾ ಯೋಜನೆಯಡಿ ವಿದೇಶಿ ನೇರ ಬಂಡವಾಳದ ಮೂಲಕ ದೇಶದ ಆರ್ಥಿಕತೆಗೆ ಕೊಡುಗೆ ನೀಡಿದರೂ ದೇಶದ ಕೈಗಾರಿಕೆ, ತಂತ್ರಜ್ಞಾನ ಅಳವಡಿಕೆಯಲ್ಲಿ ಆತ್ಮನಿರ್ಭರ ಆಗಲು ಸಾಧ್ಯವಾಗುತ್ತಿಲ್ಲ ಎಂದರು.


ಭಾರತಕ್ಕೆ ವಿದೇಶಿ ಬಂಡವಾಳ 'ಭ್ರಮೆ ಮತ್ತು ವಾಸ್ತವ' ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು.

ನಮ್ಮ ದೇಶದಲ್ಲಿ ಕೊಕೊಕೋಲಾ ಕಂಪನಿ ಆರಂಭವಾಗಿ 30 ವರ್ಷಗಳೇ ಕಳೆಯುತ್ತಿವೆ. ಇಲ್ಲಿನ ನೀರು, ಮಸಾಲೆ ಪದಾರ್ಥ ಹಾಕಿ ತಯಾರಿಸುತ್ತಾರೆ. ಆದರೆ, ಇಲ್ಲಿಯವರೆಗೆ ಆ ತಂತ್ರಜ್ಞಾನ ದೇಶೀಕರಣವಾಗಿಲ್ಲ. ಕೊಕೊಕೋಲ ಕೋಟ್ಯಾಂತರ ಭಾರತೀಯರು ಕುಡಿದು, ಆ ಕಂಪನಿಗೆ ಲಾಭ ಮಾಡಿಕೊಡುತ್ತಿದ್ದಾರೆಯೇ ಹೊರತು, ಆ ತಂತ್ರಜ್ಞಾನ ದೇಶೀಕರಣ ಮಾಡಿಕೊಳ್ಳುವತ್ತ ಯೋಚನೆ ಮಾಡುತ್ತಿಲ್ಲ ಎಂದು ಉದಾಹರಣೆ ಸಮೇತ ವಿವರಿಸಿದರು.

ಜಾಗತೀಕರಣದ ಭಾಗವಾಗಿ ಕಳೆದ 32 ವರ್ಷಗಳಿಂದ ವಿದೇಶಿ ಕಂಪನಿಗಳಿಗೆ ಅತಿಯಾದ ಪ್ರಾಮುಖ್ಯತೆ ನೀಡಿದ್ದರ ಫಲವಾಗಿ ಟೂತ್‌ಪೇಸ್ಟ್, ತಂಪು ಪಾನೀಯಗಳು, ಶೂ ಪಾಲಿಸ್‌ನಂತಹ ಸಾಧಾರಣ ದಿನಬಳಕೆ ವಸ್ತುಗಳಿಂದ ಹಿಡಿದು, ಸಿಮೆಂಟ್, ಕಾರು, ಟಿವಿ, ಫ್ರಿಜ್, ಏರ್‌ಕಂಡಿಷನರ್‌ನಂತಹ ಭಾರೀ ವಸ್ತುಗಳವರೆಗೆ ಭಾರತ ಮಾರುಕಟ್ಟೆಯಲ್ಲಿ ಅಗ್ರಸ್ಥಾನ ನೀಡಲಾಗುತ್ತಿದೆ. ಇದರಿಂದ ಭಾರತೀಯ ಕಂಪನಿಗಳು ಎಷ್ಟು ಬೆಳೆದಿವೆ ಎಂಬುದನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಭಾರತೀಯ ಮಾರುಕಟ್ಟೆಯ 2015ರ ಅಂಕಿ–ಅಂಶಗಳ ಪ್ರಕಾರ, ವಿದೇಶಿ ಬ್ರಾಂಡ್ ಪ್ಲಾಟ್ ಟಿವಿ ವ್ಯಾಪಾರ–ವಹಿವಾಟು ಶೇ.73, ದೇಶಿ ಕಂಪನಿಯ ಪ್ಲಾಟ್ ಟಿವಿ ವ್ಯಾಪಾರ–ವಹಿವಾಟು ಶೇ.27ರಷ್ಟು, ರೆಫ್ರಿಜರೇಟರ್ ವಹಿವಾಟು ವಿದೇಶಿ ಕಂಪನಿಗಳ ಪಾಲು ಶೇ.63, ದೇಶಿ ಕಂಪನಿಗಳ ಪಾಲು ಶೇ.37 ರಷ್ಟಿದೆ. ಏರ್ ಕಂಡಿಷನ್ ವಹಿವಾಟು ವಿದೇಶಿ ಕಂಪನಿಗಳ ಪಾಲು ಶೇ. 58, ದೇಶಿ ಕಂಪನಿಗಳ ಪಾಲು ಶೇ.42ರಷ್ಟಿದೆ. ಮೈಕ್ರೋವೇವ್ ಓವನ್‌ಗಳ ವಹಿವಾಟು ವಿದೇಶಿ ಕಂಪನಿಗಳ ಪಾಲು ಶೇ.72, ದೇಶಿ ಕಂಪನಿಗಳ ಪಾಲು ಶೇ.28ರಷ್ಟಿದೆ. ಅಲ್ಲದೆ, ದಿನ ಬಳಕೆ ವಸ್ತುಗಳ ವಿದೇಶಿ ಬ್ರಾಂಡ್‌ಗಳಾದ ವಿವಿಧ ಬ್ರಾಂಡ್ ಟೂತ್ ಪೇಸ್ಟ್ ವಹಿವಾಟು ಶೇ.87, ಸಾಫ್ಟ್ ಡ್ರಿಂಕ್ಸ್ ವಹಿವಾಟು ಶೇ.89, ಶೂ ಪಾಲೀಷ್ ವಹಿವಾಟು ಶೇ.82 ರಷ್ಟು ಮಾರುಕಟ್ಟೆ ಒದಗಿಸಲಾಗಿದ್ದು, ಈ ಅಂಕಿ–ಅಂಶಗಳ ಪ್ರಕಾರ ದೇಶಿ ಕಂಪನಿಗಳ ಬೆಳವಣಿಗೆ ಎಲ್ಲಿದೆ ಎಂದು ಪ್ರಶ್ನಿಸಿದರು.

ಕೇಂದ್ರ ಸರ್ಕಾರ, ದೇಶದ ಪ್ರಮುಖ ಕೈಗಾರಿಕೆ ಹಾಗೂ ಉದ್ಯಮಗಳನ್ನು ವಿದೇಶಿ ಕಂಪನಿಗಳ ಪಾಲಾಗದಂತೆ ಕಾಪಾಡಿಕೊಳ್ಳುವುದು ಆದ್ಯ ಕರ್ತವ್ಯವಾಗಬೇಕು ಹಾಗೂ ಕೈಗಾರಿಕೆಯಲ್ಲಿ ಆರ್ಥಿಕ ಸ್ವಾವಲಂಬನೆ ಪ್ರಮುಖ ಆಲೋಚನೆಯಾಗಬೇಕು. ಸುಝುಕಿ ಕಂಪನಿಯ ಪ್ರಾಡಕ್ಟ್‌ಗಳು ಕಳೆದ 40 ವರ್ಷಗಳಿಂದ ಭಾರತದಲ್ಲಿ ತಯಾರಾಗುತ್ತಿದ್ದರೂ ಅದರ ತಂತ್ರಜ್ಞಾನ ಮಾತ್ರ ಭಾರತೀಯ ಕಂಪನಿಗಳಿಗೆ ವರ್ಗಾವಣೆಯಾಗುತ್ತಿಲ್ಲ. ಅಂದರೆ, ಇದರ ನೇರ ಲಾಭ ವಿದೇಶಿ ಕಂಪನಿಗಳಿಗೆ ಹೊರತು, ದೇಶದ ಕೈಗಾರಿಕೆ, ತಂತ್ರಜ್ಞಾನ ಅಭಿವೃದ್ಧಿಗೆ ಹಾಗೂ ಉದ್ಯೋಗ ಸೃಷ್ಟಿಯಲ್ಲಿ ಯಾವುದೇ ಪ್ರಯೋಜನವಾಗುತ್ತಿಲ್ಲ ಎಂದು ಉದಾಹರಣೆ ಸಮೇತ ತಿಳಿಸಿದರು. ವೇದಿಕೆಯಲ್ಲಿ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಅಧ್ಯಕ್ಷ ಕೆ.ಬಿ.ಲಿಂಗರಾಜು, ಐಸಿಎಐ ಮೈಸೂರು ಘಟಕದ ಅಧ್ಯಕ್ಷ ಸಿ.ಎ.ಎಸ್.ಭಾರ್ಗವ್, ಸ್ವದೇಶಿ ಜಾಗರಣ ಮಂಚ್‌ನ ರಶ್ಮಿ ವಿಜಯಕುಮಾರ್ ಉಪಸ್ಥಿತರಿದ್ದರು.

159 ಬೀದಿ ನಾಯಿಗಳಿಗೆ ರೇಬಿಸ್ ಲಸಿಕೆ


ಬೀದಿ ಮತ್ತು ಸಾಕು ನಾಯಿಗಳಿಗೆ ರೇಬಿಸ್ ತಡೆ ಲಸಿಕೆ ನೀಡಲಾಯಿತು.

ಮೈಸೂರು, ಏ.20(ಎಸ್‌ಪಿಎನ್)– ಪೀಪಲ್ಸ್ ಫಾರ್ ಅನಿಮಲ್ಸ್(ಪಿಎಫ್‌ಎ) ಮೈಸೂರು ಘಟಕ ಹಾಗೂ ಅಕಲ್ವಿಯ ಟೆಕ್ನಾಲಜೀಸ್ ಲಿಮಿಟೆಡ್ ಸಹಯೋಗದೊಂದಿಗೆ ಮೈಸೂರು ತಾಲೂಕಿನ ಕೆಲವು ಗ್ರಾಮಗಳಲ್ಲಿ ರೇಬಿಸ್ ನಿಯಂತ್ರಣ ಲಸಿಕೆ ಅಭಿಯಾನವನ್ನು ನಡೆಸಿ, 159 ಬೀದಿ ಮತ್ತು ಸಾಕು ನಾಯಿಗಳಿಗೆ ರೇಬಿಸ್ ತಡೆ ಲಸಿಕೆಯನ್ನು ಉಚಿತವಾಗಿ ನೀಡಲಾಯಿತು.

ಈ ವೇಳೆ ಸಾಕು ಪ್ರಾಣಿಗಳ ಮಾಲೀಕತ್ವ ಮತ್ತು ಪ್ರಾಣಿಗಳ ಜನನ ನಿಯಂತ್ರಣ(ಎಬಿಸಿ) ಶಸ್ತ್ರಚಿಕಿತ್ಸೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿ, ಸಾಕು ನಾಯಿಗಳ ಬಗ್ಗೆ ಜಾಗೃತಿ ಮೂಡಿಸಲಾಯಿತು. ಬೀರಿಹುಂಡಿ, ಗೋಪಾಲಪುರ, ಹುಲ್ಲಹಳ್ಳಿ, ದಾರಿಪುರ, ಜಯಪುರ, ಅಣ್ಣಾಹಳ್ಳಿ, ಸಾಲುಂಡಿ, ಉದ್ಬೂರು, ಜಟ್ಟಿಹುಂಡಿ, ದೊಡ್ಡಮರ, ಕೆ.ಎಂ.ಹಳ್ಳಿ ಮತ್ತು ಅನಗಾನಹಳ್ಳಿಯಲ್ಲಿ ಪಶುವೈದ್ಯ ಡಾ.ಅಮರ ದೀಪ್‌ಸಿಂಗ್ ನೇತೃತ್ವ ತಂಡ ಸಂಚರಿಸಿ ಬೀದಿನಾಯಿಗಳಿಗೆ ಉಚಿತ ರೇಬಿಸ್ ಹಾಕಿಸಿ, ರೇಬಿಸ್ ಹರಡದಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ತಂಡದೊಂದಿಗೆ ರತನ್, ಗೋಪಾಲ್ ಬೆಂಬಲದೊಂದಿಗೆ ವೈದ್ಯಕೀಯ ತಂಡವು ಪ್ರಾಣಿಗೆ ಸುರಕ್ಷಿತ ಮತ್ತು ಪರಿಣಾಮಕಾರಿ ಲಸಿಕೆಯನ್ನು ನೀಡಲಾಯಿತು. ಮನೋಜ್, ಲಾಲ್‌ಸಿಂಗ್ ನಾಯಿಗಳನ್ನು ಹಿಡಿದು ಲಸಿಕೆ ಹಾಕುವಲ್ಲಿ ಸಹಕರಿಸಿದರು.

ಪಿಎಫ್‌ಎನಲ್ಲಿ ದೇಸಿ ನಾಯಿಮರಿಗಳು ಲಭ್ಯ: ಮೈಸೂರಿನ ಬೋಗಾದಿಯ ರೂಪನಗರದಲ್ಲಿರುವ ಪೀಪಲ್ ಫಾರ್ ಅನಿಮಲ್ ಸಂಸ್ಥೆಯಲ್ಲಿ ದೇಸಿ ನಾಯಿಮರಿಗಳು ಉಚಿತವಾಗಿ ಲಭ್ಯವಿದ್ದು, ಎಲ್ಲಾ ನಾಯಿಮರಿಗಳು ಆರೋಗ್ಯವಾಗಿವೆ ಮತ್ತು ಲಸಿಕೆ ಹಾಕಲಾಗಿದೆ. ಹೆಚ್ಚಿನ ಮಾಹಿತಿಗಾಗಿ 9108766808 ಸಂಪರ್ಕಿಸಿ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಹಾಲು ಉತ್ಪಾದಕರಿಗೆ ಸರಿಯಾಗಿ ಹಣ ಪಾವತಿಸದ ಸಂಘಗಳ ವಿರುದ್ಧ ಕ್ರಮ

ಕೆಎಂಎಫ್ ಎಂಡಿ ಬಿ.ಶಿವಸ್ವಾಮಿ ಎಚ್ಚರಿಕೆ



ಮೈಸೂರು ತಾಲೂಕಿನ ಇಲವಾಲದ ಬಿಎಂಸಿ ಹಾಲು ಉತ್ಪಾದನಾ ಕೇಂದ್ರಕ್ಕೆ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಭೇಟಿ ನೀಡಿ ಪರಿಶೀಲಿಸಿದರು.

ಮೈಸೂರು,ಏ.20(ಎಂಟಿವೈ)– ಡೈರಿಗೆ ಹಾಲನ್ನು ಹಾಕುವ ರೈತರಿಗೆ ಯಾವುದೇ ರೀತಿ ತೊಂದರೆ ಆಗದಂತೆ ಕೊಬ್ಬಿನ ಅಂಶ ಹಾಗೂ ಎಸ್‌ಎನ್‌ಎಫ್ ಅಂಶಗಳಿಗೆ ಅನುಗುಣವಾಗಿ ಧರಗಳನ್ನು ನೀಡದಿದ್ದರೆ ಹಾಲು ಉತ್ಪಾದಕ ಸಂಘಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಎಚ್ಚರಿಸಿದ್ದಾರೆ.

ಮೈಸೂರು ತಾಲೂಕಿನ ಇಲವಾಲದ ಬಿಎಂಸಿ ಕೇಂದ್ರ, ಈರಪ್ಪನ ಕೊಪ್ಪಲಿನ ಮಹಿಳಾ ಹಾಲು ಉತ್ಪಾದಕರ ಸಂಘ, ರುದ್ನಹಳ್ಳಿ ಹಾಲು ಉತ್ಪಾದಕರ ಸಂಘ ಸೇರಿದಂತೆ ವಿವಿಧ ಹಾಲು ಉತ್ಪಾದಕರ ಸಂಘಗಳಿಗೆ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಮಾತನಾಡಿದ ಅವರು, ಈ ದೇಶಕ್ಕೆ ಅನ್ನ ನೀಡುವವರು ರೈತರು. ಅವರಿಗೆ ಯಾವುದೇ ಕಾರಣಕ್ಕೂ ಅನ್ಯಾಯವಾಗಬಾರದು. ಹಾಲು ಉತ್ಪಾದಕರನ್ನು ಗೌರವದಿಂದ ಕಾಣಬೇಕು. ಸರಿಯಾದ ಸಮಯಕ್ಕೆ ಹಣ ಸಂದಾಯ ಮಾಡಬೇಕು. ನಾವು ದೆಹಲಿ ಸೇರಿದಂತೆ ಬೇರೆ ಬೇರೆ ರಾಜ್ಯಗಳಲ್ಲೂ ನಂದಿನಿ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದೇವೆ. ಸಂಸ್ಥೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮಾರ್ಗದರ್ಶನದಲ್ಲಿ ಉತ್ತಮವಾಗಿ ಕೆಲಸ ಮಾಡಿಕೊಂಡು ಬರುತ್ತಿದೆ ಎಂದರು.

ಈ ಸಂದರ್ಭದಲ್ಲಿ ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ಸುರೇಶ್ ನಾಯ್ಕ್, ಬಿಎಂಸಿ ಡೆಪ್ಯೂಟಿ ಮ್ಯಾನೇಜರ್ ಸಂತೋಷ್‌ಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬಿಜೆಪಿಗೆ ರಾಜೀನಾಮೆ ನೀಡಿದ ಮಾಜಿ ಶಾಸಕ ಎ.ಟಿ.ರಾಮಸ್ವಾಮಿ



ಬೆಂಗಳೂರು: ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಬಿಜೆಪಿಗೆ ಗುಡ್ ಬೈ ಹೇಳಿದ್ದಾರೆ. ತಾವು ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತಿರುವುದಾಗಿ ತಿಳಿಸಿದ್ದಾರೆ. ತಮ್ಮ ರಾಜೀನಾಮೆ ಪತ್ರವನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರಗೆ ನೀಡುತ್ತಿರುವುದಾಗಿ ಹಾಗೂ ತಾವು ಪರಿಸರ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದಾಗಿ ತಿಳಿಸಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆ ವೇಳೆ ರಾಮಸ್ವಾಮಿ ಜೆಡಿಎಸ್ ತೊರೆದು ಬಿಜೆಪಿಗೆ ಸೇರ್ಪಡೆಯಾಗಿದ್ದರು. ಬಿಜೆಪಿ–ಜೆಡಿಎಸ್ ಮೈತ್ರಿ ವಿಚಾರವಾಗಿ ಅಸಮಾಧಾನಗೊಂಡು ಬಿಜೆಪಿಯ ಚಟುವಟಿಕೆಗಳಿಂದ ದೂರ ಇದ್ದರು. ಇದೀಗ ಬಿಜೆಪಿಗೆ ದಿಢೀರ್ ರಾಜೀನಾಮೆ ನೀಡಿದ್ದು, ಇನ್ಮುಂದೆ ತಾವು ಪರಿಸರ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದಾಗಿ ತಿಳಿಸಿದ್ದಾರೆ.

ಮೋದಿ ಪ್ರಧಾನಿಯಾದಾಗ 52 ಲಕ್ಷ ಕೋಟಿ ಇದ್ದ ಸಾಲ ಈಗ 185 ಲಕ್ಷ ಕೋಟಿಗೇರಿದೆ!

● ಕೆಪಿಸಿಸಿ ಉಪಾಧ್ಯಕ್ಷ ವಿ.ಎಸ್.ಉಗ್ರಪ್ಪ ಆರೋಪ ● ಕಚ್ಚಾ ತೈಲದಿಂದ 30 ಲಕ್ಷ ಕೋಟಿ ಉಳಿಯುತ್ತೆ ● ಕರ್ನಾಟಕ 5 ಲಕ್ಷ ಕೋಟಿ ತೆರಿಗೆ ಕೊಡುತ್ತದೆ ● ಮೋದಿ ಕೆಳಗಿಳಿಸಲು ಆರ್‌ಎಸ್‌ಎಸ್ ನಿರ್ಧಾರ ● ಜನಿವಾರ ವಿಚಾರದಲ್ಲಿ ಹಿಡನ್ ಅಜೆಂಡಾ ಇದೆ!

ಮೈಸೂರು, ಏ.20(ಬಿಎಲ್‌ಯು)– ನರೇಂದ್ರ ಮೋದಿ ಅವರು ಪ್ರಧಾನಮಂತ್ರಿಯಾಗಿ ಅಧಿಕಾರಕ್ಕೆ ಬಂದಾಗ 52 ಲಕ್ಷ ಕೋಟಿ ಇದ್ದ ದೇಶದ ಸಾಲ, ಈಗ 185 ಲಕ್ಷ ಕೋಟಿಗೇರಿದೆ ಎಂದು ಕೆಪಿಸಿಸಿ ಉಪಾಧ್ಯಕ್ಷ ವಿ.ಎಸ್.ಉಗ್ರಪ್ಪ ಆರೋಪಿಸಿದ್ದಾರೆ.

ನಗರದ ಕಾಂಗ್ರೆಸ್ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇಷ್ಟೊಂದು ದೊಡ್ಡ ಗಾತ್ರದ ಸಾಲ ಮಾಡಿರುವ ನರೇಂದ್ರ ಮೋದಿ ಸರ್ಕಾರ ಯಾವುದೇ ಅಣೆಕಟ್ಟು, ಕೈಗಾರಿಕೆ ಅಥವಾ ಇನ್ನಿತರ ಯಾವುದೇ ಅಭಿವೃದ್ಧಿ ಮಾಡಿಲ್ಲ ಎಂದು ಟೀಕಿಸಿದರು.

ಮೋದಿ ದುರ್ಬಲ ಪ್ರಧಾನಿ: ನರೇಂದ್ರ ಮೋದಿ ಅವರು ಈ ದೇಶ ಕಂಡ ದುರ್ಬಲ ಪ್ರಧಾನಿಯಾಗಿದ್ದಾರೆ. ಮಾತ್ರವಲ್ಲದೆ ಅಭಿವೃದ್ಧಿ ವಿರೋಧಿ ಹಾಗೂ ಸಮಾಜ ಒಡೆಯುವ ಪ್ರವೃತ್ತಿಯ ಪ್ರಧಾನಿಯಾಗಿದ್ದಾರೆ. ಜಾತಿ ಮತ್ತು ಧರ್ಮದ ವಿಚಾರ ಎಳೆದು ತಂದು ಜನರಲ್ಲಿ ಕಂದಕ ಸೃಷ್ಟಿ ಮಾಡುತ್ತಿದ್ದಾರೆ. ತಮ್ಮ ಆಡಳಿತದ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಜನರಲ್ಲಿ ಜಾತಿ ವಿಷ ಬೀಜ ಬಿತ್ತುತ್ತಿದ್ದಾರೆ ಎಂದು ಉಗ್ರಪ್ಪ ಆಪಾದಿಸಿದರು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ 109 ಡಾಲರ್ ಇದ್ದ ಸಂದರ್ಭದಲ್ಲಿ ಪೆಟ್ರೋಲ್ ಬೆಲೆ 55 ರೂಪಾಯಿ ಇತ್ತು. ಆದರೆ ಈಗ ಕಚ್ಚಾ ತೈಲದ ಬೆಲೆ ಭಾರೀ ಇಳಿಕೆ ಕಂಡಿದೆ. ಇದರಿಂದ ಕೇಂದ್ರ ಸರ್ಕಾರಕ್ಕೆ 30 ಲಕ್ಷ ಕೋಟಿ ಉಳಿತಾಯವಾಗುತ್ತಿದೆ. ಆದರೆ ಕೇಂದ್ರ ಸರ್ಕಾರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಇಳಿಕೆ ಮಾಡಿಲ್ಲ.

ರಾಷ್ಟ್ರೀಯ ಹೆದ್ದಾರಿಗಳಲ್ಲಿ ಈ ಮೊದಲು 170 ರೂಪಾಯಿ ಟೋಲ್ ಶುಲ್ಕವಿತ್ತು. ಆದರೆ ಈಗ 250 ರೂಪಾಯಿಗಳಿಗೆ ಹೆಚ್ಚಳ ಮಾಡಲಾಗಿದೆ. ಬೆಲೆ ಏರಿಕೆಗೆ ಕಾರಣರಾಗಿ ಇಷ್ಟೊಂದು ವೈಫಲ್ಯ ಇಟ್ಟುಕೊಂಡಿರುವ ಬಿಜೆಪಿಯವರು ಜನಾಕ್ರೋಶ ಯಾತ್ರೆ ಮಾಡಿ ಜನರ ಗಮನ ಬೇರೆಡೆ ಸೆಳೆಯುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಎಲ್ಲಾ ಕಾರಣಗಳಿಂದ ನರೇಂದ್ರ ಮೋದಿ ಅವರನ್ನು ಪ್ರಧಾನಿ ಸ್ಥಾನದಿಂದ ಕಿತ್ತೊಗೆಯಲು ಆರ್‌ಎಸ್‌ಎಸ್ ಈಗಾಗಲೇ ತೀರ್ಮಾನ ಮಾಡಿದೆ. ಈ ಹಿನ್ನೆಲೆಯಲ್ಲಿ ನರೇಂದ್ರ ಮೋದಿ ಅವರು ಇತ್ತೀಚಿಗೆ ನಾಗ್ಪೂರ್‌ನಲ್ಲಿರುವ ಆರ್‌ಎಸ್‌ಎಸ್ ಪ್ರಧಾನ ಕಚೇರಿ ಭೇಟಿ ನೀಡಿ ಆರ್‌ಎಸ್‌ಎಸ್ ನಾಯಕರಿಗೆ ಸ್ಪಷ್ಟನೆ ನೀಡಿ ಬಂದಿದ್ದಾರೆ ಎಂದರು.


ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಕೆಪಿಸಿಸಿ ಉಪಾಧ್ಯಕ್ಷ ವಿ.ಎಸ್.ಉಗ್ರಪ್ಪ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ರಾಜ್ಯದಲ್ಲಿ ಬೆಲೆ ಏರಿಕೆಗೆ ಕೇಂದ್ರ ಕಾರಣ: ಕರ್ನಾಟಕದಲ್ಲಿ ಹಾಲು, ಪೆಟ್ರೋಲ್ ಸೇರಿದಂತೆ ಇತರೆ ಬೆಲೆ ಏರಿಕೆಗೆ ಕೇಂದ್ರ ಸರ್ಕಾರದ ಆರ್ಥಿಕ ನೀತಿಯೇ ಮೂಲ ಕಾರಣವಾಗಿದೆ. ಕೇಂದ್ರ ಸರ್ಕಾರಕ್ಕೆ ಕರ್ನಾಟಕದಿಂದ 5 ಲಕ್ಷ ಕೋಟಿ ತೆರಿಗೆ ಹಣ ನೀಡಲಾಗುತ್ತಿದೆ. ಆದರೆ ಕೇಂದ್ರ ಸರ್ಕಾರ ರಾಜ್ಯಕ್ಕೆ ನ್ಯಾಯಯುತವಾಗಿ ಅನುದಾನ ನೀಡದೆ ಮಲತಾಯಿ ಧೋರಣೆ ತೋರುತ್ತಿದೆ ಎಂದು ಉಗ್ರಪ್ಪ ಹೇಳಿದರು.

ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿರುವ ಎಲ್ಲಾ ವಸ್ತುಗಳ ಬೆಲೆ ಕಡಿಮೆ ಇದೆ. ರೈತರಿಗೆ ಉತ್ತೇಜನ ನೀಡಲು ಹಾಲಿನ ದರ ಹೆಚ್ಚಳ ಮಾಡಲಾಗಿದೆ ಅಷ್ಟೆ. ಗ್ಯಾರಂಟಿ ಯೋಜನೆಗೆ 52 ಲಕ್ಷ ಕೋಟಿ ಹಣ ಕೊಟ್ಟು ಹಲವು ಅಭಿವೃದ್ಧಿ ಯೋಜನೆಯನ್ನು ಸಾಕಾರ ಮಾಡಲಾಗುತ್ತಿದೆ ಎಂದು ಕಾಂಗ್ರೆಸ್ ಸರ್ಕಾರದ ಬೆಲೆ ಏರಿಕೆ ನೀತಿಯನ್ನು ಸಮರ್ಥಿಸಿಕೊಂಡರು.

ಬಿಜೆಪಿ ಗೆಲುವಿಗೆ ಇವಿಎಂ, ವಿವಿ ಪ್ಯಾಟ್ ಕಾರಣ: ನೀವೇ ಹೇಳಿದಂತೆ ಕೇಂದ್ರ ಸರ್ಕಾರದ ಇಷ್ಟೆಲ್ಲಾ ವೈಫಲ್ಯತೆ ಇದ್ದರೂ ಇತ್ತೀಚಿನ ಚುನಾವಣೆಗಳಲ್ಲಿ ಬಹುತೇಕ ರಾಜ್ಯಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಬರುತ್ತಿದೆಯಲ್ಲ ಎಂಬ ಪತ್ರಕರ್ತರ ಪ್ರಶ್ನೆಗೆ, ಇವಿಎಂ ಹಾಗೂ ವಿವಿ ಪ್ಯಾಟ್ ದುರ್ಬಳಕೆ ಮಾಡಿಕೊಂಡು ಬಿಜೆಪಿ ಅಧಿಕಾರಕ್ಕೆ ಬರುತ್ತಿದೆ. ಕೇಂದ್ರ ಚುನಾವಣಾ ಆಯೋಗ ಕೇಂದ್ರ ಸರ್ಕಾರದ ಕೈಗೊಂಬೆಯಾಗಿದ್ದು, ಮೌನ ವಹಿಸಿದೆ ಎಂದು ಆರೋಪಿಸಿದರು.

ಜಾತಿ ಗಣತಿ ವರದಿಯಲ್ಲಿ ಏನಿದೆ ಎಂದು ಇನ್ನು ಕೂಡ ಯಾರಿಗೂ ತಿಳಿದಿಲ್ಲ. ಸರ್ಕಾರದ ಹಂತದಲ್ಲಿ ಈ ಬಗ್ಗೆ ಚರ್ಚೆಯಾಗುತ್ತಿದೆ. ಸಚಿವ ಸಂಪುಟದಲ್ಲಿ ಅನುಮೋದನೆಗೊಂಡು ವಿಧಾನ ಸಭಾ ಅಧಿವೇಶನದಲ್ಲಿ ಮಂಡನೆ ಮಾಡಿದಾಗ ವರದಿಯಲ್ಲಿ ಏನಿದೆ ಎಂದು ತಿಳಿಯುತ್ತದೆ. ಅಲ್ಲಿವರೆಗೆ ಗಾಳಿ ಸುದ್ದಿಗಳಿಗೆ ಯಾರೂ ಕಿವಿಗೊಡಬಾರದು ಎಂದು ಮನವಿ ಮಾಡಿದರು.

ಜನಿವಾರದಲ್ಲಿ ಹುನ್ನಾರವಿದೆ!: ಸಿಇಟಿ ವೇಳೆ ವಿದ್ಯಾರ್ಥಿಯಿಂದ ಜನಿವಾರ ಕತ್ತರಿಸಿದರು ಎಂಬುದನ್ನು ಬಿಜೆಪಿಯವರು ದೊಡ್ಡ ವಿವಾದ ಮಾಡುತ್ತಿದ್ದಾರೆ. ಜನಿವಾರ ಕತ್ತರಿಸಿರುವುದು ಯಡಿಯೂರಪ್ಪ ತವರು ಜಿಲ್ಲೆಯಲ್ಲಿ. ಮತ್ತೊಂದು ಘಟನೆ ನಡೆದಿರುವುದು ವಿಜಯೇಂದ್ರ ಭೇಟಿ ನೀಡುತ್ತಿದ್ದ ಬೀದರ್‌ನಲ್ಲಿ. ಇದನ್ನು ಸೂಕ್ಷ್ಮವಾಗಿ ಗಮನಿಸಿದರೆ ಬಿಜೆಪಿಯವರಲ್ಲಿ ಬೇರೆ ಯಾವುದೋ ಯೋಜನೆ ಇರಬಹುದು ಎನ್ನಿಸುತ್ತದೆ ಎಂದು ಉಗ್ರಪ್ಪ ಸಂಶಯ ವ್ಯಕ್ತಪಡಿಸಿದರು.

ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರ ಕಾರ್ಯದರ್ಶಿ ಶಿವಣ್ಣ, ಮಾಜಿ ಶಾಸಕ ನಂಜುಂಡಸ್ವಾಮಿ, ಮಾಧ್ಯಮ ಸಂಚಾಲಕ ಮಹೇಶ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಕ್ಷತ್ರಿಯ ಸಮಾಜದವರು ವೀರ ಸೇನಾನಿಗಳು

ಛತ್ರಪತಿ ಶ್ರೀ ಶಿವಾಜಿ ಮಹಾರಾಜರ ಜಯಂತ್ಯೋತ್ಸವದಲ್ಲಿ ಮಾಜಿ ಸಚಿವ ಪಿಜಿಆರ್ ಸಿಂಧ್ಯಾ ಅಭಿಪ್ರಾಯ

ಮಂಡ್ಯ: ಕ್ಷತ್ರಿಯ ಸಮಾಜದವರು ವೀರ ಸೇನಾನಿಗಳಾಗಿದ್ದು, ತಮ್ಮ ಮಕ್ಕಳನ್ನು ದೇಶ ಪ್ರೇಮ ಮೆರೆಯುವ ಸೈನಿಕರನ್ನಾಗಿಸಿ ಎಂದು ಮಾಜಿ ಸಚಿವ ಪಿಜಿಆರ್ ಸಿಂಧ್ಯಾ ಕರೆ ನೀಡಿದರು.

ನಗರದಲ್ಲಿರುವ ಕಲಾಮಂದಿರದಲ್ಲಿ ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ಜಿಲ್ಲಾ ಘಟಕ ಆಯೋಜಿಸಿದ್ದ 398ನೇ ವರ್ಷದ ಛತ್ರಪತಿ ಶ್ರೀ ಶಿವಾಜಿ ಮಹಾರಾಜರ ಜಯಂತ್ಯೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದು ಮಂಡ್ಯ ನೆಲದಲ್ಲಿ 398ನೇ ವರ್ಷದ ಛತ್ರ ಪತಿ ಶ್ರೀ ಶಿವಾಜಿ ಮಹಾರಾಜರ ಜಯಂತ್ಯೋತ್ಸವ ಮಾಡುತ್ತಿದ್ದೀರಿ, ಛತ್ರಪತಿ ಶಿವಾಜಿ ಮಹಾರಾಜರು ದೊಡ್ಡ ಸೇನಾನಿಯಾಗಿದ್ದರು, ದೇಶಪ್ರೇಮಿಯಾಗಿದ್ದರು, ಹಿಂದೂ ಧರ್ಮ ರಕ್ಷಕರಾಗಿದ್ದರು ಎಂದು ನುಡಿದರು.

ಮರಾಠ ಜನಾಂಗವು ಮುಕ್ತವಾಗಿ ದೇಶ ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ಇರುತ್ತಾರೆ, ಯಾವುದೇ ಊರಿಗೋದರೂ ಒಬ್ಬ ಮಾಜಿ ಸೈನಿಕರು, ಕರ್ನಲ್‌ಗಳನ್ನು ನೋಡಬಹುದಿತ್ತು, ದೇಶಪ್ರೇಮದ ವಿಚಾರದಲ್ಲಿ ಯಾವೂತ್ತ ಮರಾಠ ಜನಾಂಗ ಹಿಂದೆ



ಛತ್ರಪತಿ ಶ್ರೀ ಶಿವಾಜಿ ಮಹಾರಾಜರ ಜಯಂತ್ಯೋತ್ಸವ ಸಮಾರಂಭದಲ್ಲಿ ಮಾಜಿ ಸಚಿವ ಪಿಜಿಆರ್ ಸಿಂಧ್ಯಾ ಅವರನ್ನು ಅಭಿನಂದಿಸಲಾಯಿತು.

ಬಿದ್ದಿಲ್ಲ, ದೇಶ ರಕ್ಷಣೆ ರಕ್ತದಲ್ಲಿಯೇ ಬಂದಿದೆ ಎಂದು ಹೇಳಿದರು.

ನಮ್ಮ ಮಕ್ಕಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾಗಿದ್ದಾರೆ, ಮನೆಗೊಬ್ಬ ಸೈನಿಕನಾಗಲಿ, ತಾಯಂದಿರು ಹಿಂದೆ ಸರಿಬೇಡಿ, ಎದೆಗುಂದದೆ ಸೈನಿಕ ವೃತ್ತಿಗೆ ಮಕ್ಕಳನ್ನು ಸೇರಿಸಿ ಎಂದರು.

ಇತ್ತೀಚಿನ ದಿನಗಳಲ್ಲಿ ದೇಶದ ಆಯಾಯಾ ರಾಜ್ಯಗಳ ಸೈನಿಕ ಕೋಟದ ಅಂಕಿ ಅಂಶದಲ್ಲಿ ಕರ್ನಾಟಕದಿಂದ ಕೋಟ ಸಂಪೂರ್ಣ ಭರ್ತಿಯಾಗಿಲ್ಲ, 19 ಲಕ್ಷ ಮಂದಿ ಭಾರತದಲ್ಲಿ ಸೈನಿಕರಿದ್ದಾರೆ, ಭಾರತದ ಸೈನಿಕರು ಬಲಶಾಲಿಗಳು, ನಾಲ್ಕು ಮಂದಿ ಪಾಕಿಸ್ತಾನ –ಚೀನಾ ದೇಶದ ಸೈನಿಕರನ್ನು ಒಬ್ಬ ಭಾರತೀಯ ಸೈನಿಕ ಎದುರಿಸುತ್ತಾನೆ ಎಂದು ತಿಳಿಸಿದರು.

ಸೈನಿಕ ವೃತ್ತಿಗೆ ಹೋದವರೆಲ್ಲ ಸಾಯುವುದಿಲ್ಲ, ಸೈನಿಕ ವೃತ್ತಿಗಿಂತ ರಸ್ತೆ ಅಪಘಾತದಲ್ಲಿ ಸಾಯುವವರ ಸಂಖ್ಯೆ ಹೆಚ್ಚಳವಾಗಿದೆ, ಒಂದು ವರ್ಷಕ್ಕೆ 1.60 ಲಕ್ಷ ಮಂದಿ ರಸ್ತೆ ಅಪಘಾತದಲ್ಲಿ ಸಾಯುತ್ತಿದ್ದಾರೆ, ಆದ್ದರಿಂದ ಸಾವು ತಪ್ಪದು. ಸೈನಿಕರಾಗಿ ಸೇವೆ ಸಲ್ಲಿಸಲಿ ಎಂದು ಎಚ್ಚರಿಸಿದರು.

ಇದೇ ಸಂದರ್ಭದಲ್ಲಿ ಲೇಖಕಿ ಹಾರಿಕ ಮಂಜುನಾಥ್ ಛತ್ರಪತಿ ಶ್ರೀ ಶಿವಾಜಿ ಮಹಾರಾಜರ ಚರಿತ್ರೆ ಬಗ್ಗೆ ಉಪನ್ಯಾಸ ನೀಡಿದರು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಿದರು. ಅಮೇಜಿಂಗ್ ನೃತ್ಯ ಶಾಲೆ ಕಲಾವಿದರು ನೃತ್ಯ ಪ್ರದರ್ಶಿಸಿದರು.

ಸಮಾರಂಭದಲ್ಲಿ ಕೆ.ಕೆ.ಎಂ.ಪಿ ರಾಜ್ಯಾಧ್ಯಕ್ಷ ಎಸ್.ಸುರೇಶ್‌ರಾವ್ ಸಾಠೆ, ಪ್ರಧಾನ ಕಾರ್ಯದರ್ಶಿ ಟಿ.ಆರ್.ಸುನೀತ್ ಚವಾಣ್, ಖಜಾಂಚಿ ಟಿ.ಆರ್.ವೆಂಟಕರಾವ್ ಚವ್ಹಾಣ್, ಉದ್ಯಮಿ ಡಾ.ಕೆ.ಎಸ್.ಶಂಕರ್ ಜಾದವ್, ಭಾವಸಾರಕ್ಷತ್ರಿಯ ಸಮಾಜ ಅಧ್ಯಕ್ಷ ಎನ್.ಶಿವರಾವ್‌ವೀರಜ್‌ಕರ್, ಉಪಾಧ್ಯಕ್ಷ ಕೆ.ಭಕ್ತವತ್ಸಲಜವಳೇಕರ್, ಮಾಜಿ ಶಾಸಕ ಇಮಾರುತಿರಾವ್ ಪವಾರ್, ಉಪ ಸಮಾದೇಷ್ಟ ಎಸ್.ಆರ್.ಗಾಯಕ್ವಾಡ್, ಪರಿಷತ್ ಜಿಲ್ಲಾಧ್ಯಕ್ಷ ಎಚ್.ಸುರೇಶ್‌ರಾವ್, ಸಲಗರ್, ಕಾರ್ಯದರ್ಶಿ ಅಂಜಾಜಿರಾವ್ ಬಾಂಗೆ, ಖಜಾಂಚಿ ಎಸ್.ರಾಜೇಶ್‌ಲೌಟೆ ಪದಾಧಿಕಾರಿಗಳು ಹಾಜರಿದ್ದರು.

ದಿಶಾ ಸಮಿತಿ ಸಭೆ ಮುಂದೂಡಿಕೆ

ಮಂಡ್ಯ,ಏ.20– ಏ.22ರಂದು ನಡೆಯಬೇಕಾಗಿದ್ದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಸಭೆಯನ್ನು ಕಾರಣಾಂತರಗಳಿಂದ ಕೇಂದ್ರ ಸರ್ಕಾರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವರು ಹಾಗೂ ಲೋಕಸಭಾ ಕ್ಷೇತ್ರ ಸಂಸದರ ಮೌಖಿಕ ನಿರ್ದೇಶನದಂತೆ ಮುಂದೂಡಲಾಗಿದೆ. ಮುಂದಿನ ದಿಶಾ ಸಮಿತಿ ಸಭೆಯ ದಿನಾಂಕವನ್ನು ತಿಳಿಸಲಾಗುವುದು.

ಅಪರಿಚಿತ ಶವ ಪತ್ತೆ

ಕೆ.ಆರ್.ಪೇಟೆ: ಪಟ್ಟಣದ ಪುರಸಭಾ ಕಚೇರಿಯ ಆವರಣದಲ್ಲಿ ಅಪರಿಚಿತ ಪುರುಷನ ಶವವೊಂದು ಪತ್ತೆಯಾಗಿದೆ.

ಸುಮಾರು 40ರಿಂದ 45ವರ್ಷ ವಯಸ್ಸಿನ ಗಂಡಸಿನ ಶವವನ್ನು ಕಂಡ ವಾಯು ವಿಹಾರಿಗಳು ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಕೂಡಲೆ ಸ್ಥಳಕ್ಕೆ ಭೇಟಿ ನೀಡಿದ ಇನ್ಸ್‌ಪೆಕ್ಟರ್ ಸುಮಾರಾಣಿ ಹಾಗೂ ಸಬ್‌ಇನ್ಸ್‌ಪೆಕ್ಟರ್ ಕೆನವೀನ್ ಅವರು ಶವವನ್ನು ಪಟ್ಟಣದ ಶವಾಗಾರಕ್ಕೆ ಸಾಗಿಸಿದರು.

ಸಿಮೆಂಟ್ ಕಲರ್ ಶರ್ಟ್ ಧರಿಸಿರುವ ಈ ವ್ಯಕ್ತಿಯ ವಾರಸುದಾರು ಯಾರಾದರೂ ಇದ್ದಲ್ಲಿ ಕೆಆರ್.ಪೇಟೆ ಪಟ್ಟಣ ಪೊಲೀಸರನ್ನು ಸಂಪರ್ಕಿಸಲು ಕೋರಲಾಗಿದೆ. ಮೊ:9481804833

ಅಗ್ರಹಾರಬಾಚಹಳ್ಳಿ ಸೊಸೈಟಿ ಚುನಾವಣೆ: ಮೈತ್ರಿಗೆ–7, ಕಾಂಗ್ರೆಸ್–5 ರಲ್ಲಿ ಗೆಲುವು



ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಜೆಡಿಎಸ್ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳು ಪ್ರತ್ಯೇಕವಾಗಿ ವಿಜಯೋತ್ಸವ ಆಚರಿಸಿದರು.

ಕೆ.ಆರ್.ಪೇಟೆ,ಏ.20– ತಾಲೂಕಿನ ಕಸಬಾ ಹೋಬಳಿಯ ಅಗ್ರಹಾರಬಾಚಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಆಡಳಿತ ಮಂಡಳಿಯ ನಿರ್ದೇಶಕರ 12ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಪಕ್ಷದ 7 ಅಭ್ಯರ್ಥಿಗಳು, ಕಾಂಗ್ರೆಸ್ ಬೆಂಬಲಿತ 5 ಅಭ್ಯರ್ಥಿಗಳು ಜಯಭೇರಿ ಬಾರಿಸಿದ್ದಾರೆ.

ಜೆಡಿಎಸ್–ಬಿಜೆಪಿ ಮೈತ್ರಿ ಪಕ್ಷದ ಅಭ್ಯರ್ಥಿಗಳಾದ ಅಗ್ರಹಾರಬಾಚಹಳ್ಳಿ ಚಂದ್ರೇಗೌಡ, ಚಿಕ್ಕೋಸಹಳ್ಳಿ ಸುರೇಶ್, ಮಹಿಳಾ ಮೀಸಲು ಕ್ಷೇತ್ರದಿಂದ ಚಿಲ್ಲದಹಳ್ಳಿ ಮಣಿಯಮ್ಮ, ರಾಧ ಮಹೇಶ್, ಬಿಸಿಎಂ.ಬಿ. ಕ್ಷೇತ್ರದಿಂದ ಎಲ್.ಎಂ.ಚಲುವರಾಜೇಗೌಡ, ಪರಿಶಿಷ್ಟ ಪಂಗಡ ಕ್ಷೇತ್ರದಿಂದ ಚಿಕ್ಕೋಸಹಳ್ಳಿ ಪಾರ್ವತಮ್ಮ, ಸಾಲಗಾರರಲ್ಲದ ಸಾಮಾನ್ಯ ಕ್ಷೇತ್ರದಿಂದ ಅಶೋಕ್ ಗೆಲುವು ಸಾಧಿಸಿದ್ದಾರೆ.

ಅದೇ ರೀತಿ ಕಾಂಗ್ರೆಸ್–ರೈತ ಸಂಘದ ಬೆಂಬಲಿತ ಅಭ್ಯರ್ಥಿಗಳಾದ ಅರೆಬೊಪ್ಪನಹಳ್ಳಿ ಅಶೋಕ್, ಎ.ಬಿ.ಮಹೇಂದ್ರ ಎ.ಸಿ.ವೆಂಕಟೇಶ್ವರ್ (ಸರ್ವೆ ದೇವರಾಜ್), ಬಿಸಿಎಂ ಮೀಸಲು ಕ್ಷೇತ್ರದಿಂದ ನಗರೂರು ಕುಮಾರ್, ಪ.ಜಾ ಮೀಸಲು ಕ್ಷೇತ್ರದಿಂದ ವಳಗೆರೆ ಮೆಣಸ ಕೆ.ಬಲರಾಮ್ ಗೆಲುವು ಸಾಧಿಸಿದ್ದಾರೆ.

ನಾಲ್ವಡಿ ಜಯಂತಿ: ಅಕ್ಷರ ಜಾತ್ರೆಗೆ ಕವನಗಳು, ಪ್ರಶಸ್ತಿಗೆ ಹೆಸರುಗಳ ಆಹ್ವಾನ

ಮಂಡ್ಯ,ಏ.20– ಡಾ.ಜೀಶಂಪ ಸಾಹಿತ್ಯ ವೇದಿಕೆ, ಶ್ರೀ ರಾಜರ್ಷಿ ನಾಲ್ವಡಿ ಕೃಷ್ಣ ರಾಜ ಒಡೆಯರ್ ಫಿಲಂ, ಕನ್ನಂಬಾಡಿ ಹಾಗೂ ಕಾವೇರಿ ಪ್ರಭ ದಿನಪತ್ರಿಕೆ ವತಿಯಿಂದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜಯಂತಿ ಅಂಗವಾಗಿ ಜೂ.1 ರಂದು ಭಾನುವಾರ ಮಂಡ್ಯ ನಗರದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ 12ನೇ ಅಖಿಲ ಕರ್ನಾಟಕ ಕನ್ನಡ ಅಕ್ಷರ ಜಾತ್ರೆ ಆಯೋಜಿಸಿದ್ದು, ಆಸಕ್ತ ಕವಿಗಳಿಂದ ಕವನಗಳನ್ನು ಹಾಗೂ ವಿವಿಧ ಪ್ರಶಸ್ತಿಗೆ ಸಾಧಕರಿಂದ ಹೆಸರನ್ನು ಆಹ್ವಾನಿಸಲಾಗಿದೆ.

ಆಸಕ್ತರು 25 ಸಾಲಿನ ಎರಡು ಕವನಗಳು, ಕಿರು ಪರಿಚಯ, ಪೋಟೋ, ಮೊಬೈಲ್ ಸಂಖ್ಯೆ, ವಿಳಾಸವನ್ನು ಮತ್ತು ಸಾಧಕರು ಸಾಧನೆಯ ವಿವರಗಳನ್ನು ಮೇ 5ರೊಳಗೆ ಕಳುಹಿಸಬೇಕು. ವ್ಯಾಟ್ಸಪ್‌ನಲ್ಲಿ ಮೊದಲು ನೋಂದಣಿ ಮಾಡಿಕೊಂಡು, ನಂತರ ಅಂಚೆ ಮೂಲಕ ಕಳುಹಿಸಬೇಕು. ಕವನ ಯಾವುದಾದರೂ ವಿಷಯವನ್ನು ಒಳಗೊಂಡಿರಬಹುದು. ಆಯ್ಕೆಯಾದ ಕವಿತೆಗಳನ್ನು ಪುಸ್ತಕ ರೂಪದಲ್ಲಿ ಹೊರತರಲಾಗುವುದು. ಐವತ್ತು ಮಂದಿ ಕವಿಗಳಿಗೆ ಕವಿಗೋಷ್ಠಿಯಲ್ಲಿ ಅವಕಾಶ ಕಲ್ಪಿಸಲಾಗುವುದು. ಉತ್ತಮ ಸಾಧಕರನ್ನು ಅಖಿಲ ಕರ್ನಾಟಕ ಕನ್ನಡ ಅಕ್ಷರ ಜಾತ್ರೆ ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಗೌರವಿಸಲಾಗುವುದು. ಕವಿಗೋಷ್ಠಿಯಲ್ಲಿ ಭಾಗವಹಿಸುವವರಿಗೆ ಕವನ ವಾಚನಕ್ಕೆ ಅವಕಾಶ, ಪ್ರಮಾಣ ಪತ್ರ, ನೆನಪಿನ ಕಾಣಿಕೆ ನೀಡಿ ಗೌರವಿಸಲಾಗುವುದು.

ಹತ್ತು ಉತ್ತಮ ಕವನಗಳಿಗೆ 'ಕಾವ್ಯಶ್ರೀ' ಹಾಗೂ ತಲಾ ಹತ್ತು ಮಂದಿ ಸಾಧಕರಿಗೆ 'ನಾಲ್ವಡಿ ಕೃಷ್ಣರಾಜ ಒಡೆಯರ್' ಪ್ರಶಸ್ತಿ, ತಲಾ ಹತ್ತು ಮಂದಿಗೆ ನಂಜಮ್ಮಣ್ಣಿ ಸಮಾಜ ಸೇವಾ ಪ್ರಶಸ್ತಿ, ತಲಾ ಹತ್ತು ಮಂದಿಗೆ 'ಕನ್ನಡರತ್ನ' ಮತ್ತು ತಲಾ ಹತ್ತು ಮಂದಿಗೆ 'ಸಮಾಜ ಸೇವಾ ರತ್ನ' ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ನೀಡಲಾಗುವುದು. ವಿಶೇಷವಾಗಿ ಇಪ್ಪತ್ತು ಮಂದಿಗೆ ಮಂಡ್ಯ ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧ ಗ್ರಾಮ ಪಂಚಾಯ್ತಿಯಲ್ಲಿ ಉತ್ತಮ ಕೆಲಸ ಮಾಡಿದ ಪಿಡಿಓಗಳಿಗೆ ನಾಲ್ವಡಿ ಆಡಳಿತ ಪ್ರಶಸ್ತಿ ನೀಡಲಾಗುವುದು. ಕವಿಗಳು, ಕವನಗಳು, ಸಾಧಕರು ಪರಿಚಯವನ್ನು ವಿಳಾಸ: ಎಸ್.ಕೃಷ್ಣಸ್ವರ್ಣಸಂದ್ರ, ಕವಿಮಿತ್ರ, ನಂ–767, ಸ್ವರ್ಣಸಂದ್ರ, ಮಂಡ್ಯ–2 ಕಳುಹಿಸಬೇಕು. ಸಂಪರ್ಕ ಮತ್ತು ವ್ಯಾಟ್ಸಾಪ್ ನಂ–9448424380ಗೆ ಕಳುಹಿಸಬೇಕಾಗಿ ಪ್ರಕಟಣೆಯಲ್ಲಿ ವಿನಂತಿ.

ಭಾರತೀಯ ಸಂಸ್ಕೃತಿಯ ಪರಂಪರೆ ನಿಂತಿರುವುದೇ ಪ್ರಕೃತಿ ಆರಾಧನೆಯಲ್ಲಿ

ಮಂಡ್ಯ: ಭಾರತೀಯ ಸಂಸ್ಕೃತಿಯ ಪರಂಪರೆ ನಿಂತಿರುವುದೇ ಪ್ರಕೃತಿಯ ಆರಾಧನೆಯಲ್ಲಿ. ಪ್ರಕೃತಿ ಸಂರಕ್ಷಣೆ ಎಲ್ಲಾ ಭಾರತೀಯ ನಾಗರೀಕರ ಹೊಣೆಯಾಗಿದೆ ಎಂದು ಜಿಲ್ಲಾಧಿಕಾರಿ ಕುಮಾರ ಹೇಳಿದರು.

ಸ್ಕೋಪ್ ಫೌಂಡೇಶನ್ ಇಂಡಿಯಾ ವತಿಯಿಂದ ಹಲ್ಲೆಗೆರೆಯ ಭೂದೇವಿ ಆಧ್ಯಾತ್ಮಿಕ ಕೇಂದ್ರದಲ್ಲಿ ಆಯೋಜಿಸಲಾಗಿದ್ದ ಮದರ್ ಅರ್ಥ್ ಡೇ ಸೆಲೆಬ್ರೇಶನ್ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು ಆಧುನಿಕ ತಂತ್ರಜ್ಞಾನದಲ್ಲಿ ನಾವೆಲ್ಲರೂ ತಲ್ಲೀನರಾಗಿ ನಮ್ಮ ಪೂರ್ವ ಪರಂಪರೆಯನ್ನು ಮರೆಯುತ್ತಿದ್ದೇವೆ, ನಮ್ಮ ಪೂರ್ವಜರು ನಂಬಿ ಆರಾಧಿಸಿಕೊಂಡು ಬಂದದ್ದು ಭೂಮಿ ಮತ್ತು ಪ್ರಕೃತಿಯನ್ನ, ಹೀಗಾಗಿ ನಾವು ಯಾರೂ ಸಹ ಭೂತಾಯಿಯನ್ನು ಮರೆಯುವಂತಿಲ್ಲ ಎಂದರು.

ಮನುಷ್ಯ ತನ್ನ ಆಸೆ ಕೂಪಕ್ಕೆ ಬಿದ್ದು ಭೂ ಸಂಪತ್ತನ್ನು ಲೂಟಿ ಮಾಡುತ್ತಿದ್ದಾನೆ, ಪ್ರಕೃತಿಯನ್ನು ವಿನಾಶದತ್ತ ಕೊಂಡೊಯ್ಯುತ್ತಿದ್ದಾನೆ, ಭೂಮಿಯ ಒಡಲನ್ನು ಎಷ್ಟೇ ಬಗೆದರು ಮುನಿಸಾಗದೆ ಭೂತಾಯಿ ಎಲ್ಲರನ್ನೂ ತನ್ನ ಮಕ್ಕಳಂತೆ ಆರೈಕೆ ಮಾಡಿಕೊಂಡು ಬರುತ್ತಿದ್ದಾಳೆ. ಭೂಮಿಗೆ ಭಾರತದಲ್ಲಿ ಪೂಜನೀಯ ಸ್ಥಾನವಿದೆ, ನಮ್ಮ ಮುಂದಿನ ಪೀಳಿಗೆಗೆ ಭೂಮಿಯ ಆರಾಧನೆ ಮತ್ತು ಸಂರಕ್ಷಣೆಯ ಜವಾಬ್ದಾರಿ ನೀಡಬೇಕಿದೆ ಎಂದು ಹೇಳಿದರು.



ಮದರ್ ಅರ್ಥ್ ಡೇ ಸೆಲೆಬ್ರೇಶನ್ ಕಾರ್ಯಕ್ರಮವನ್ನು ಉದ್ಘಾಟಿಸಿದ ಗಣ್ಯರು.

ನಂತರ ಮಾತನಾಡಿದ ಡಾ.ಆನಂದ್ ಭಟ್ ಸೊಸೈಟಿ ಆಫ್ ಚಿಲ್ಡ್ರನ್ ಪ್ಲಾನೆಟ್ ಆನ್ ಅರ್ಥ್ (SCOPE) ಫೌಂಡೇಶನ್ ವತಿಯಿಂದ ಪ್ರಕೃತಿಗೆ ಮೀಸಲಾಗಿರುವ ಸ್ಮಾರಕವನ್ನು ನಿರ್ಮಾಣ ಮಾಡಲಾಗುತ್ತಿದೆ, ಇಡೀ ವಿಶ್ವದಲ್ಲೇ ಇದೆ ಮೊದಲ ಭೂದೇವಿಗೆ ಸಮರ್ಪಿತವಾದ ಸ್ಮಾರಕವಾಗಿ ನಿರ್ಮಾಣಗೊಳ್ಳಲಿದೆ, ಮುಂದೆ ಇದೊಂದು ಐತಿಹಾಸಿಕ ಸ್ಮಾರಕವಾಗಿ ಗುರುತಿಸಿಕೊಳ್ಳಲಿದೆ ಎಂದು ತಿಳಿಸಿದರು.

ನಂತರ ಸ್ಕೋಪ್ ಫೌಂಡೇಶನ್ ಸಂಸ್ಥಾಪಕ ಮೂರ್ತಿ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಹೈಕೋರ್ಟ್ ಹಿರಿಯ ವಕೀಲ ಚಂದ್ರಮೌಳಿ, ಜಾನಪದ ಕಲಾವಿದ ಡಾ.ಕಾ.ರಮೇಶ್ವರಪ್ಪ, ಗಣ್ಯರಾದ ವೆಂಕಟೇಶ್, ತ್ಯಾಗರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬಲಮುರಿಯಲ್ಲಿ ಈಜುತ್ತಿದ್ದ ಯುವಕ ನಾಪತ್ತೆ

ಮುಳುಗುತ್ತಿದ್ದ ಪ್ರವಾಸಿಗರನ್ನು ರಕ್ಷಿಸಿದ ಪೋಲೀಸರು

ಶ್ರೀರಂಗಪಟ್ಟಣ, ಏ.20– ಬಲಮುರಿ ಪ್ರವಾಸಿ ತಾಣದಲ್ಲಿನ ಕಾವೇರಿ ನದಿಯಲ್ಲಿ ಈಜುತ್ತಿದ್ದ ಯುವಕ ನಾಪತ್ತೆಯಾಗಿದ್ದು ಹಾಗೂ ಈತನ ಜೊತೆಯಲ್ಲಿದ್ದು ಮುಳುಗುತ್ತಿದ್ದ ಓರ್ವ ಪ್ರವಾಸಿಗರನ್ನು ಕರ್ತವ್ಯ ನಿರತ ಕೆ.ಆರ್.ಸಾಗರ ಪೊಲೀಸ್ ಸಿಬ್ಬಂದಿ ರಕ್ಷಿಸಿರುವ ಘಟನೆ ಭಾನುವಾರ ಸಂಜೆ ನಡೆದಿದೆ.



ಅಂಜಲ್

ಮಂಡ್ಯ ನಗರದ ನೂರಾನಿ ಬಡಾವಣೆಯ ನಿವಾಸಿ ಅಬ್ದುಲ್ ಹುಸೇನ್ ತಮ್ಮ ಕುಟುಂಬಸ್ಥರ ಜೊತೆ ಬಲಮುರಿ ಪ್ರವಾಸಿ ತಾಣಕ್ಕೆ ತೆರಳಿದ್ದ ಸಂದರ್ಭದಲ್ಲಿ ಇವರ ಮಗ ಅಂಜಲ್ (22) ಕಾವೇರಿ ನದಿಯಲ್ಲಿ ಆಟವಾಡುತ್ತಿದ್ದ ಸಂದರ್ಭದಲ್ಲಿ ನಾಪತ್ತೆಯಾಗಿದ್ದಾನೆ.

ಈತನನ್ನು ಹುಡುಕಲು ಹೋದ ಅಂಜಲ್ ಸಂಬಂಧಿ ಇಬ್ಬರು ನದಿಯಲ್ಲಿ ಮುಳುಗುತ್ತಿದ್ದುದನ್ನು ಕಂಡು ಸಹಾಯಕ್ಕಾಗಿ ಕೂಗಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಬಲಮುರಿ ಪ್ರವಾಸಿ ತಾಣದಲ್ಲಿ ಕರ್ತವ್ಯದಲ್ಲಿದ್ದ ಕೆ.ಆರ್.ಸಾಗರ ಪೊಲೀಸ್ ಠಾಣೆ ಸಿಬ್ಬಂದಿ ರೇಣುಕುಮಾರ್ ಮುಳುಗುತ್ತಿದ್ದ ಯುವಕನ್ನು ಸ್ಥಳದಲ್ಲಿ ಸಿಕ್ಕಿದ ಬಟ್ಟೆಯನ್ನು ಬಳಸಿ ರಕ್ಷಣೆ ಮಾಡಿದ್ದು ಮತ್ತೋರ್ವನನ್ನು ಸ್ಥಳದಲ್ಲಿದ್ದ ಇತರೆ ಪ್ರವಾಸಿಗರು ರಕ್ಷಿಸಿದ್ದು ಇಬ್ಬರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮಾಹಿತಿ ಮೇರೆಗೆ ಸ್ಥಳಕ್ಕೆ ಧಾವಿಸಿದ ಕೆಆರ್.ಸಾಗರ ಪೊಲೀಸ್ ಠಾಣೆಯ ಪಿ.ಎಸ್ಐ ರಮೇಶ್ ಕರ್ಕಿಕಟ್ಟೆ ನಾಪತ್ತೆಯಾಗಿರುವ ಯುವಕನಿಗಾಗಿ ನುರಿತ ಈಜಾಗಾರರನ್ನು ಬಳಸಿ ಶೋಧಕಾರ್ಯ ನಡೆಸಿದ್ದಾರೆ.

ಅರ್ಜಿ ಆಹ್ವಾನ

ಮಂಡ್ಯ,ಏ.20– ಕೈಮಗ್ಗ ಮತ್ತು ಜವಳಿ ಇಲಾಖೆ ವತಿಯಿಂದ 2025–26ನೇ ಸಾಲಿಗೆ ಪ್ರಧಾನಮಂತ್ರಿ ಮುದ್ರಾ ಯೋಜನೆಯಡಿ ಅರ್ಹ ಕೈಮಗ್ಗ ನೇಕಾರರಿಂದ ಸಾಲ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದ್ದು ಅರ್ಹ ಕೈಮಗ್ಗ ನೇಕಾರರು ರಾಷ್ಟ್ರೀಕೃತ ಬ್ಯಾಂಕಿನಿಂದ ಕೈಮಗ್ಗ ನೇಯುವ ಚಟುವಟಿಕೆಗಾಗಿ ರೂ.50,000 ದಿಂದ ರೂ. 2 ಲಕ್ಷಗಳವರೆಗೆ ಆರ್ಥಿಕ ಸಾಲ ಪಡೆಯಬಹುದಾಗಿದೆ. ಆಸಕ್ತ ಅರ್ಹ ಕೈಮಗ್ಗ ನೇಕಾರರು ಅರ್ಜಿಗಳನ್ನು ಪಡೆಯಲು ಹಾಗೂ ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ 9008836898 / 9972405347 ಅನ್ನು ಸಂಪರ್ಕಿಸಬಹುದು.

ಒಂದನೇ ಪುಟದಿಂದ

ಓಂ ಪ್ರಕಾಶ್ ಬರ್ಬರ ಹತ್ಯೆ

ಕೊಲೆ ನಡೆದ ವೇಳೆ ಮನೆಯಲ್ಲಿ ಓಂ ಪ್ರಕಾಶ್, ಅವರ ಪತ್ನಿ ಪಲ್ಲವಿ ಹಾಗೂ ಮಗಳು ಕೃತಿ ಮೂವರೇ ಇದ್ದರು. ಮಗ ಕಾರ್ತಿಕ್ ಮತ್ತು ಸೊಸೆ ಮನೆಯಲ್ಲಿ ಇರಲಿಲ್ಲ. ತನ್ನೆಲ್ಲಾ ಆಸ್ತಿಯನ್ನು ಮಗನ ಹೆಸರಿಗೆ ಬರೆದಿದ್ದಕ್ಕೆ ಮಗಳು ಕೂಡ ಕೋಪಗೊಂಡಿದ್ದಳು. ಮಗಳಿಗೆ ಆಸ್ತಿ ಕೊಡದಿದ್ದಕ್ಕೆ ಹೆಂಡತಿ ಪಲ್ಲವಿಯೂ ಬೇಸತ್ತಿದ್ದಳು. ಹೀಗಾಗಿ, ತನಗೆ ಹಾಗೂ ಮಗಳಿಗೆ ಆಸ್ತಿಯಲ್ಲಿ ಪಾಲು ಕೊಡುವಂತೆ ಹೆಂಡತಿ ಜಗಳ ಮಾಡುತ್ತುದ್ದಳು ಎನ್ನಲಾಗಿದೆ.

ನಿರ್ದೇಶಕ ಓಂ ಪ್ರಕಾಶ್ ಅವರು ಹೆಂಡತಿ, ಮಗಳಿಗೆ ಆಸ್ತಿ ಕೊಡದೇ ಮಗ ಮತ್ತು ಸಹೋದರಿಗೆ ಆಸ್ತಿ ಕೊಟ್ಟಿದ್ದರು ಎಂಬ ಮಾಹಿತಿ ಲಭ್ಯವಾಗಿದೆ. ದಾಂಡೇಲಿಯಲ್ಲಿ ಇದ್ದ ಆಸ್ತಿಯನ್ನು ಓಂ ಪ್ರಕಾಶ್ ತಮ್ಮ ತಂಗಿಯರಿಗೆ ಕೊಟ್ಟಿದ್ದರು. ತಂಗಿಯರ ಹೆಸರಿಗೆ ಯಾಕೆ ಆಸ್ತಿ ಮಾಡಿದ್ದೀರಾ? ಎಂಬ ವಿಚಾರಕ್ಕೆ ಹಲವು ದಿನಗಳಿಂದ ಪತ್ನಿ ಗಲಾಟೆ ಮಾಡುತ್ತಿದ್ದರು. ತಂಗಿಯರ ವಿಚಾರ ಮಾತಾಡಬೇಡ ಎಂದು ಓಂ ಪ್ರಕಾಶ್ ಈ ಹಿಂದೆ ಪತ್ನಿಗೆ ವಾರ್ನ್ ಮಾಡಿದ್ದರು ಎನ್ನಲಾಗಿದೆ.

ಓಂ ಪ್ರಕಾಶ್ ಅವರಿಗೆ ಸೇರಿದ ಎರಡು ಮನೆ ಬೆಂಗಳೂರಿನಲ್ಲಿ ಇದೆ. ಕಾವೇರಿ ಜಂಕ್ಷನ್‌ನಲ್ಲಿರುವ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್‌ನಲ್ಲಿ ಫ್ಲಾಟ್ ಇದೆ. ಹೆಚ್.ಎಸ್.ಆರ್ ಲೇಔಟ್‌ನ ಐಪಿಎಸ್ ಕ್ವಾಟ್ರಸ್‌ನಲ್ಲಿ ಮನೆ ಇದೆ. ಈ ಮನೆಯಲ್ಲಿ ಗಲಾಟೆ ಆದಾಗ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್‌ನಲ್ಲಿ ಓಂ ಪ್ರಕಾಶ್ ಹೋಗಿ ವಾಸ ಮಾಡುತ್ತಿದ್ದರು. ಓಂ ಪ್ರಕಾಶ್ ಅವರು ನಿವೃತ್ತ ಜೀವನದಲ್ಲಿ ನೆಮ್ಮದಿ ಇಲ್ಲವೆಂದು ನರಳಾಡುತ್ತಿದ್ದರು. ಹಲವು ಬಾರಿ ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆ ಮನೆಯಲ್ಲಿ ಹೆಂಡತಿಯ ಟಾರ್ಚರ್ ತಡೆದುಕೊಳ್ಳುವುದಕ್ಕೆ ಆಗುತ್ತಿಲ್ಲವೆಂದು ಹೇಳಿಕೊಂಡಿದ್ದರು ಎನ್ನಲಾಗಿದೆ.

ಇನ್ನು ಓಂ ಪ್ರಕಾಶ್ ಬಿಹಾರ ಮೂಲದವರು. ಬಿಹಾರ ರಾಜ್ಯದ ಚಂಪಾರಣ್ ಜಿಲ್ಲೆಯ ಓಂ ಪ್ರಕಾಶ್ ಅವರು ಐಪಿಎಸ್ ಅಧಿಕಾರಿಯಾದ ನಂತರ ಮೊದಲ ಬಾರಿಗೆ ಅಂದಿನ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ಎಎಸ್‌ಪಿ ಆಗಿ ರಾಜ್ಯದಲ್ಲಿ ವೃತ್ತಿ ಆರಂಭ ಮಾಡಿದ್ದರು. ಇದಾದ ನಂತರ ಶಿವಮೊಗ್ಗ, ಉತ್ತರಕನ್ನಡ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು. ರಾಜ್ಯ ವಿಜಿಲೇನ್ಸ್ ಸೆಲ್‌ನ ಎಸ್‌ಪಿಯಾಗಿ, ಕರ್ನಾಟಕ ಲೋಕಾಯುಕ್ತದಲ್ಲಿ, ಅಗ್ನಿಶಾಮಕ ದಳದ ಡಿಐಜಿ, ಸಿಐಡಿ ಐಜಿಪಿಯಾಗಿ ಕರ್ತವ್ಯ ನಿರ್ವಹಣೆ ಮಾಡಿದ್ದರು. 2015 ಮಾರ್ಚ್‌ನಲ್ಲಿ ರಾಜ್ಯ ಪೊಲೀಸ್ ಮಹಾನಿರ್ದೇಶಕರಾಗಿ ನೇಮಕವಾಗಿದ್ದ ಓಂ ಪ್ರಕಾಶ್ ಅವರು 2017ರಲ್ಲಿ ನಿವೃತ್ತಿ ಹೊಂದಿದ್ದರು.

ಸ್ಕಿಜೋಫ್ರೇನಿಯ ಪೀಡಿತ ಪತ್ನಿ ಪಲ್ಲವಿ

ಬೆಂಗಳೂರು, ಏ.20– ನಿವೃತ್ತಿ ಡಿಜಿ, ಐಜಿಪಿ ಓಂ ಪ್ರಕಾಶ್ ಅವರ ಪತ್ನಿ ಪಲ್ಲವಿ ಅವರು ಕಳೆದ 12 ವರ್ಷಗಳಿಂದ ಸ್ಕಿಜೋಫ್ರೇನಿಯ ಎಂಬ ರೋಗದಿಂದ ಬಳಲುತ್ತಿದ್ದರು. ಇವರು ಕೆಲವೊಂದು ವಿಚಾರವನ್ನು ತಲೆಗೆ ತೆಗೆದುಕೊಂಡು ಆತಂಕ ಪಡುವ ಜೊತೆಗೆ, ಸುಖಾ ಸುಮ್ಮನೆ ಜಗಳ ಮಾಡುತ್ತಿದ್ದರು ಎಂದು ಹೇಳಲಾಗುತ್ತಿದೆ. ಇದಕ್ಕೆ ಚಿಕಿತ್ಸೆಯನ್ನೂ ಪಡೆಯುತ್ತಿದ್ದ ಪತ್ನಿ ಪಲ್ಲವಿ ಇಂದು ಪತಿ ಓಂ ಪ್ರಕಾಶ್ ಅವರು ಬರೋಬ್ಬರಿ 10 ಬಾರಿ ಚಾಕು ಚುಚ್ಚಿಸಿಕೊಂಡು ಪ್ರಾಣ ಬಿಟ್ಟಿದ್ದಾರೆ. ಸ್ಕಿಜೋಫ್ರೇನಿಯ ಎಂಬುದು ಮಾನಸಿಕ ಖಾಯಿಲೆ ಆಗಿದ್ದು, ಈ ಸಮಸ್ಯೆಯಿಂದ ಬಳಲುತ್ತಿರುವವರು ಸದಾ ಭ್ರಮೆಯ ಸ್ಥಿತಿಯಲ್ಲಿ ಇರುತ್ತಾರೆ. ಯಾವುದೋ ವಿಚಾರವನ್ನು ತಮ್ಮ ಮನಸ್ಸಿನಲ್ಲಿ ಕಲ್ಪಿಸಿಕೊಂಡು ಆತಂಕ ಪಡುತ್ತಾ ಇರುತ್ತಾರೆ. ಇದೆ ಖಾಯಿಲೆಯಿಂದ ಪತಿ ಓಂ ಪ್ರಕಾಶ್ ಅವರ ಮೇಲೆ ಇಲ್ಲದ ಸಲ್ಲದ ಊಹೆ ಮಾಡಿಕೊಂಡು, ಆರೋಪ ಮಾಡಿದ್ದರು.



ಕೆಲ ದಿನಗಳ ಹಿಂದೆ ವಾಟ್ಸಪ್ ಗ್ರೂಪ್ ಒಂದರಲ್ಲಿ ಗಂಡ ಓಂ ಪ್ರಕಾಶ್ ವಿರುದ್ಧ ಪತ್ನಿ ಪಲ್ಲವಿ ಅಸಮಾಧಾನ ವ್ಯಕ್ತಪಡಿಸಿದ್ದರು. ತನಗೆ ತನ್ನ ಪತಿ ಓಂ ಪ್ರಕಾಶ್ ಅವರಿಂದ ತೀರಾ ಹಿಂಸೆ ಆಗುತ್ತಿದೆ ಎಂದು ಮೆಸೇಜ್ ಮಾಡಿದ್ದರು. ಆಸ್ತಿಯ ವಿಚಾರದಲ್ಲಿ ಪದೇ ಪದೇ ಕಿರಿಕ್ ಮಾಡುತ್ತಿದ್ದಾರೆ. ಇಂತಹ ವ್ಯಕ್ತಿಗಳು ಬದುಕಿರಬಾರದು ಎಂದು ಮೆಸೇಜ್ ಮಾಡಿದ್ದರು. ಇದಾದ ನಂತರ ಓಂ ಪ್ರಕಾಶ್ ವಿರುದ್ಧ ಪೊಲೀಸರು ಸುಮೋಟೋ ಪ್ರಕರಣ ದಾಖಲಿಸಿಕೊಂಡು ಕ್ರಮ ತೆಗೆದುಕೊಳ್ಳಬೇಕು ಎಂದು ಮೆಸೇಜ್ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಇಂದು ಓಂ ಪ್ರಕಾಶ್ ಕೊಲೆಗೆ ಇದೇ ಕಾರಣ ಇರಬಹುದು ಎಂದು ಪೊಲೀಸರು ವಿಚಾರಣೆ ಮಾಡುತ್ತಿದ್ದಾರೆ. ಇನ್ನು ಪತ್ನಿ ಪಲ್ಲವಿ ಜೊತೆಗೆ ಓಂ ಪ್ರಕಾಶ್ ಅವರಿಗೆ ಜಗಳ ಯಾಕಾಗಿತ್ತು ಎಂಬ ಬಗ್ಗೆಯೂ ಪೊಲೀಸರು ಮಾಹಿತಿ ಸಂಗ್ರಹಿಸುತ್ತಿದ್ದಾರೆ.

ಅಕ್ರಮವಾಗಿ ಮರಗಳ ಹನನ

ಸ್ವಚ್ಛಂದವಾದ ಗಾಳಿಯನ್ನು ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು ಸೇವಿಸುತ್ತಾ ಆಹ್ಲಾದಕರ ಅನುಭವ ಪಡೆಯುತ್ತಿದ್ದರು. ಈವರೆಗಿನ ಭೋದಕರು ವಿದ್ಯಾರ್ಥಿಗಳನ್ನು ಹುರಿದುಂಬಿಸಿ ಪರಿಸರ ಸಂರಕ್ಷಣೆಯನ್ನು ತಮ್ಮ ಜವಾಬ್ದಾರಿ ಎಂದು ಭಾವಿಸಿ ಮಾಡುತ್ತಾ ಬಂದಿದ್ದರು.

ಇಲ್ಲಿನ ಪರಿಸರದ ಕಾರಣದಿಂದಾಗಿಯೇ ಕಾಲೇಜಿಗೆ ನ್ಯಾಕ್ ಮಾನ್ಯತೆಯೂ ದೊರೆತಿತ್ತು ಎಂದು ಬಲ್ಲವರು ಹೇಳುತ್ತಾರೆ. ಹೀಗಿರುವಾಗ ಬೆಲೆ ಬಾಳುವ ಮರಗಳನ್ನು ಹನನ ಮಾಡಿರುವುದು ಪರಿಸರ ಪ್ರೇಮಿಗಳಲ್ಲಿ ತೀವ್ರ ಆಕ್ರೋಶವನ್ನುಂಟು ಮಾಡಿದೆ. ಸೆಂಟ್ ಫಿಲೋಮಿನಾಸ್ ಕಾಲೇಜು ಖಾಸಗಿ ಆಸ್ತಿಯಾಗಿದ್ದು, ಅಲ್ಲಿ ಬೆಳೆದಿರುವ ಮರಗಳು ಅವರದೇ ಮಾಲೀಕತ್ವಕ್ಕೆ ಒಳಪಡುತ್ತದೆಯಾದರೂ, ಮರಗಳನ್ನು ಕಡಿಯಬೇಕಾದರೆ ಸೂಕ್ತ ಕಾರಣಗಳೊಂದಿಗೆ ಅರಣ್ಯ ಇಲಾಖೆಯಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಅರಣ್ಯ ಇಲಾಖೆ ಅಧಿಕಾರಿಗಳು ಸದರಿ ಮರಗಳು ಏನಾದರೂ ಒಣಗಿ ಹೋಗಿದ್ದರೆ ಅಥವಾ ಅಪಾಯಕಾರಿಯಾಗಿದ್ದರೆ ಇಲ್ಲವೇ ಮರಗಳಿದ್ದ ಸ್ಥಳದಲ್ಲಿ ಅಭಿವೃದ್ಧಿ ಕಾರ್ಯ ನಡೆಯಬೇಕಾಗಿದ್ದು, ಅದಕ್ಕಾಗಿ ಮರ ಕಡಿಯಲೇ ಬೇಕು ಎಂಬಂತಹ ಪರಿಸ್ಥಿತಿ ಇದ್ದರೆ ಮಾತ್ರ ಮರ ಕಡಿಯಲು ಅನುಮತಿ ನೀಡುತ್ತಾರೆ.




ಅನಧಿಕೃತ ಕಡಿತ ಪ್ರಕರಣ ದಾಖಲಿಸಲಾಗುವುದು

"ಮೈಸೂರಿನ ಸೆಂಟ್ ಫಿಲೋಮಿನಾ ಕಾಲೇಜಿನ ಆವರಣದಲ್ಲಿ ಕೆಲ ಮರಗಳನ್ನು ಅನಧಿಕೃತವಾಗಿ ಕಡಿದಿರುವ ಬಗ್ಗೆ ಸಂಸ್ಥೆಯೊಂದು ಎರಡು ದಿನಗಳ ಹಿಂದಷ್ಟೇ ದೂರು ನೀಡಿದೆ. ಸಂತ ಫಿಲೋಮಿನಾ ಕಾಲೇಜು ಖಾಸಗಿ ಸ್ಥಳವಾಗಿದ್ದು, ಅಲ್ಲಿನ ಮರಗಳು ಖಾಸಗಿ ಸ್ವತ್ತಾಗಿದೆ. ಆದರೂ ಅನುಮತಿ ಪಡೆಯದೇ ಮರ ಕಡಿದಿರುವುದು ಗಮನಕ್ಕೆ ಬಂದಿದೆ. ಸಂಸ್ಥೆಯೊಂದು ನೀಡಿರುವ ದೂರನ್ನು ಗಂಭೀರವಾಗಿ ಪರಿಗಣಿಸಿದ್ದು, ಸೋಮವಾರ ಸ್ಥಳಕ್ಕೆ ತೆರಳಿ ಎಷ್ಟು ಮರ ಹಾಗೂ ಯಾವ ಯಾವ ಜಾತಿಯ ಮರ ಕಡಿಯಲಾಗಿದೆ ಎಂದು ಪರಿಶೀಲಿಸಿ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಅನಧಿಕೃತವಾಗಿ ಮರ ಕಡಿದಿರುವ ಪ್ರಕರಣವನ್ನು ದಾಖಲಿಸಲಾಗುವುದು.

- **ಜೀಶನ್,** ಆರ್‌ಎಫ್‌ಓ, ಮೈಸೂರು

ಆದರೆ ಸೆಂಟ್ ಫಿಲೋಮಿನಾಸ್ ಕಾಲೇಜಿನ ಆಡಳಿತ ಮಂಡಳಿಯವರು ಅರಣ್ಯ ಇಲಾಖೆಯಿಂದ ಅನುಮತಿ ಪಡೆಯುವ ಗೋಜಿಗೇ ಹೋಗದೆ ಮರಗಳನ್ನು ಕಡಿದು ಹಾಕಿದ್ದಾರೆ.



ಈ ಮರಗಳನ್ನು ಯಾವಾಗ ಕಡಿಯಲಾಯಿತು? ಅಲ್ಲಿ ಹನನ ಮಾಡಿರುವ ಮರಗಳು ಯಾವ ಜಾತಿಯ ಮರಗಳು, ಅದರ ಆಯುಸ್ಸು ಎಷ್ಟು? ಎಂಬುದರ ಬಗ್ಗೆ ಯಾವುದೇ ಮಾಹಿತಿ ಇಲ್ಲವಾದರೂ, ಮರಗಳನ್ನು ಕಡಿದಿರುವುದಂತೂ ಅರಣ್ಯ ಕಾಯ್ದೆಗೆ ವಿರುದ್ಧವಾಗಿ ರುವುದು ಮಾತ್ರವಲ್ಲದೇ ಕಾಲೇಜು ಆವರಣದ ಪರಿಸರಕ್ಕೂ ಕೂಡ ಧಕ್ಕೆಯಾಗುತ್ತದೆ ಎಂಬ ವಿಚಾರ ಈ ವಿದ್ಯಾವಂತ ಆಡಳಿತ ಮಂಡಳಿಯ ವರಿಗೆ ತಿಳಿದಿರದೇ ಇರಲಾರದು. ಹಾಗಿದ್ದರೂ ಕೂಡ ಕಾನೂನು ಬಾಹಿರವಾಗಿ ಮರಗಳನ್ನು ಕಡಿಯಲಾಗಿದೆ. ಈ ಸಂಬಂಧ ಅರಣ್ಯ ಇಲಾಖೆಗೆ ಕಥೋಲಿಕ ಕನ್ನಡ ಕ್ರೈಸ್ತರ ಸಂಘ ಕಳೆದ ಎರಡು ದಿನದ ಹಿಂದೆ ದೂರು ನೀಡಿದ್ದು, ಅರಣ್ಯಾಧಿಕಾರಿಗಳು ಪರಿಶೀಲಿಸಿ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರಂತೆ.

ಅರಣ್ಯ ಸಚಿವರ ಆದೇಶ

ಒಳಗೆ ತನಿಖಾ ವರದಿಯನ್ನು ಸಲ್ಲಿಸುವಂತೆ ಆದೇಶಿಸಿದ್ದಾರೆ. ಸಚಿವ ಈಶ್ವರ್ ಖಂಡ್ರೆ ಅವರು, ಅರಣ್ಯ ಇಲಾಖೆಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ಬರೆದ ಪತ್ರದಲ್ಲಿ 'ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆಯ ಸವಾಲುಗಳನ್ನು ವಿಶ್ವವೇ ಎದುರಿಸುತ್ತಿರುವ ಸಂದರ್ಭದಲ್ಲಿ ವೃಕ್ಷ ಸಂರಕ್ಷಣೆ ಇಲಾಖೆಯ ಕರ್ತವ್ಯವಾಗಿದೆ. ಜೀವನವೂ ಇರಬೇಕು. ಜೀವನೋಪಾಯವೂ ನಡೆಯಬೇಕು. ಅಭಿವೃದ್ಧಿಯೂ ಆಗಬೇಕು, ಪ್ರಕೃತಿ, ಪರಿಸರವೂ ಉಳಿಯಬೇಕು. ಈ ರೀತಿಯ ಸಮತೋಲನದ ಕ್ರಮ ಕೈಗೊಳ್ಳುವುದು ಇಂದಿನ ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟಿರುವ ಸಚಿವರು, ಇತ್ತೀಚೆಗೆ ಸುಪ್ರೀಂಕೋರ್ಟ್ ಅಭಿಪ್ರಾಯಪಟ್ಟಿರುವ ಹೇಳಿಕೆ `Cutting down large number of trees is like killing human beings or worse then that' ಸ್ಮರಿಸಿದ್ದಾರೆ.

ರಾಗಿ ಖರೀದಿ ಕೇಂದ್ರದ ಭ್ರಷ್ಟಾಚಾರ ತಪ್ಪಿಸಲು ಮನವಿ

ಸಾಲಿಗ್ರಾಮ, ಏ.20– ರಾಗಿ ಖರೀದಿ ಕೇಂದ್ರದಲ್ಲಿನ ಭ್ರಷ್ಟಾಚಾರ, ರೈತರಿಗೆ ನೀಡುತ್ತಿರುವ ಕಿರುಕುಳ ತಪ್ಪಿಸುವಂತೆ ಒತ್ತಾಯಿಸಿ ಸಾಲಿಗ್ರಾಮ ತಾಲೂಕು ಜೆಡಿಎಸ್ ಅಧ್ಯಕ್ಷ ರಾಜಣ್ಣ ನೇತೃತ್ವದಲ್ಲಿ ಗ್ರೇಡ್–2 ತಹಸೀಲ್ದಾರ್ ಸಣ್ಣರಾಮುಗೆ ಮನವಿ ಸಲ್ಲಿಸಲಾಯಿತು.

ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಮನವಿ ಸಲ್ಲಿಸಿ ಮಾತನಾಡಿದ ರಾಜಣ್ಣ, ಪ್ರತಿ ಕ್ವಿಂಟಾಲ್ ರಾಗಿಗೆ ಹೆಚ್ಚುವರಿಯಾಗಿ 4 ಕೆಜಿ ಸೇರಿಸಿ ಖರೀದಿಸುತ್ತಿರುವ ಹಾಗೂ ರಾಗಿ ಸುರಿದು ಭರ್ತಿ ಮಾಡುವ ಕೆಲಸಕ್ಕೆ ತಗಲುವ ಖರ್ಚನ್ನು ರೈತರಿಂದಲೇ ವಸೂಲಿ ಮಾಡುತ್ತಿದ್ದು, ಈ ಬಗ್ಗೆ ಮಾಹಿತಿ ಕೇಳಿದರೆ ಉತ್ತರಿಸದೇ ಉದ್ಧಟತನ ತೋರುತ್ತಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಸರ್ಕಾರ ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿ ರಾಗಿ ಖರೀದಿಸುತ್ತಿದ್ದು, ನನಗೆ ಗೊತ್ತಿರುವ ಮಾಹಿತಿ ಪ್ರಕಾರ ಎಲ್ಲಾ ವೆಚ್ಚವನ್ನು ಸರ್ಕಾರವೇ ಭರಿಸುತ್ತಿದೆ. ಅಧಿಕಾರಿಗಳು ಯಾವುದೇ ಮಾಹಿತಿ ನೀಡದೆ 50 ಕೆಜಿ ರಾಗಿ ಚೀಲಕ್ಕೆ 580 ಗ್ರಾಂ ಅನ್ನು ಹೆಚ್ಚುವರಿಯಾಗಿ ತೆಗೆದುಕೊಳ್ಳುವುದರ ಜೊತೆಗೆ ಇಂತಿಷ್ಟು ಹಣ ಕಟ್ಟಲೇಬೇಕೆಂದು ಒತ್ತಾಯಿಸುತ್ತಿದ್ದಾರೆ. ಆದರೆ ರೈತರ ಕಷ್ಟಕ್ಕಾಗಿ ಸರ್ಕಾರ ಬೆಂಬಲ ಬೆಲೆ ಮತ್ತು ರಾಗಿ ಖರೀದಿಸುತ್ತಿದ್ದರೆ ಇಲ್ಲಿ ಕೆಲಸ ಮಾಡುವ ನೌಕರರು ರೈತರಿಗೆ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿದರು.



ಗ್ರೇಡ್–2 ತಹಸೀಲ್ದಾರ್‌ಗೆ ಮನವಿ ಪತ್ರ ಸಲ್ಲಿಸಲಾಯಿತು.

ತಕ್ಷಣ ಖರೀದಿ ಕೇಂದ್ರದ ನಾಮಫಲಕದಲ್ಲಿ ಸರ್ಕಾರದ ಮತ್ತು ಇಲಾಖೆಯ ಸುತ್ತೋಲೆ ಪ್ರಕಟಿಸುವ ಜೊತೆಗೆ ಗ್ರಾಮಾಂತರದಿಂದ ಬರುವ ರೈತರು ಕೇಳುವ ಮಾಹಿತಿಯನ್ನು ಅಧಿಕಾರಿಗಳು ನೀಡಬೇಕು. ರೈತರನ್ನು ಗೌರವದಿಂದ ನಡೆಸಿಕೊಳ್ಳಬೇಕು. ಈ ಬಗ್ಗೆ ತನಿಖೆ ಮಾಡಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಜೊತೆಗೆ ನೊಂದ ರೈತರಿಗೆ ನ್ಯಾಯ ಒದಗಿಸಿ ಕೊಡಬೇಕೆಂದು ಒತ್ತಾಯಿಸಿದರು.

ಮನವಿಗೆ ಸ್ಪಂದಿಸದಿದ್ದರೆ ತಾಲೂಕಿನ ಎಲ್ಲಾ ರಾಗಿ ಬೆಳೆಗಾರರು ಮತ್ತು ರೈತ ಹೋರಾಟಗಾರರ ಜೊತೆಗೂಡಿ ದೊಡ್ಡ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಈ ವೇಳೆ ರಾಗಿ ಬೆಳೆಗಾರರಾದ ಪ್ರಸನ್ನ, ಶ್ರೀನಿವಾಸ್, ಪರಶುರಾಮ್, ಕೃಷ್ಣೇಗೌಡ, ಲೋಕೇಶ್ ಇನ್ನಿತರರಿದ್ದರು.



ಹುಲಿ ದಾಳಿಗೆ ಮೇಕೆ ಬಲಿ

ಹನಗೋಡು, ಏ.20– ಹಾಡು ಹಗಲೇ ಹುಲಿಯೊಂದು ಮೇಕೆ ಮೇಲೆ ದಾಳಿ ನಡೆಸಿ ಕೊಂದಿರುವ ಘಟನೆ ಭಾನುವಾರ ನಡೆದಿದೆ.

ಹನಗೋಡು ಹೋಬಳಿಯ ಕಚುವಿನಹಳ್ಳಿ ಗ್ರಾಮದ ಅಣ್ಣೇಗೌಡರಿಗೆ ಸೇರಿದ ಮೇಕೆಯನ್ನು ಹುಲಿ ಕೊಂದು ಹಾಕಿದ್ದು, ಅಣ್ಣೇಗೌಡರ ಪತ್ನಿ ಪ್ರೇಮಮ್ಮ ಹಾಗೂ ಚಿಕ್ಕೇಗೌಡರ ಪತ್ನಿ ರೇಣುಕಾ ಅವರು ಎಂದಿನಂತೆ ತಮ್ಮ ಗ್ರಾಮದ ಹೊಸಕೆರೆ ಕೋಡಿ ಭಾಗದಲ್ಲಿರುವ ಹೆಬ್ಬಾಳ ದಲ್ಲಿ ತಮ್ಮ ಕುರಿಗಳನ್ನು ಮೇಯಿಸುತ್ತಿದ್ದ ವೇಳೆ ಭಾನುವಾರ ಮಧ್ಯಾಹ್ನ ಹೆಬ್ಬಾಳದ ಬಿದಿರು ಪೊದೆಯಿಂದ ಹೊರ ಬಂದ ಹುಲಿ ಮೇಕೆ ಮೇಲೆ ದಾಳಿ ನಡೆಸಿದೆ.

ಹುಲಿ ಕಂಡ ಪ್ರೇಮಮ್ಮ ಮತ್ತು ರೇಣುಕಾ ಹಾಗೂ ಅಕ್ಕ ಪಕ್ಕದಲ್ಲಿದ್ದ ದನಗಾಯಿಗಳು ಜೋರಾಗಿ ಚೀರಾಟ ನಡೆಸಿದ್ದರಿಂದ ಗಾಬರಿಗೊಂಡ ಹುಲಿ ಮತ್ತೇ ಹೆಬ್ಬಾಳದ ಬಿದಿರು ಪೊದೆಯೊಳಗೆ ಅಡಗಿಕೊಂಡಿದೆ. ವಿಷಯ ತಿಳಿಯುತ್ತಿದ್ದಂತೆ ನಾಗರಹೊಳೆ ಉದ್ಯಾನವನದ ಕಚುವಿನಹಳ್ಳಿ ಶ್ರೇಣಿಯ ಅರಣ್ಯ ಇಲಾಖೆ ಸಿಬ್ಬಂದಿಗಳು ಸ್ಥಳಕ್ಕೆ ದೌಡಾಯಿಸಿ ಸುತ್ತಮುತ್ತ ಮೇಯಿಸುತ್ತಿದ್ದ ದನಗಾಹಿ ಹಾಗೂ ಕುರಿಗಾಹಿಗಳನ್ನು ದೂರ ಕಳುಸಿದ್ದಾರೆ. ರಾತ್ರಿ ವೇಳೆಗೆ ಸಾಕಾನೆಗಳ ಸಹಾಯದೊಂದಿಗೆ ಹುಲಿ ಕಾರ್ಯಚರಣೆ ಮಾಡಲಾಗುವುದೆಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ಹುಲಿ ಸೆರೆಗೆ ಒತ್ತಾಯ: ಕಳೆದೆರಡು ವರ್ಷಗಳಿಂದ ಈ ಭಾಗದಲ್ಲಿ ಹುಲಿ ಹಾವಳಿ ಹೆಚ್ಚಾಗಿದ್ದು, ಆಗಾಗ್ಗೆ ಹುಲಿ ದಾಳಿ ನಡೆಸಿ ಸಾಕು ಪ್ರಾಣಿಗಳನ್ನು ಬಲಿ ಪಡೆಯುತ್ತಿದೆ. ಇದಲ್ಲದೆ ಸಾಕು ಪ್ರಾಣಿಗಳಲ್ಲದೆ ಮನುಷ್ಯರ ಮೇಲೂ ಹುಲಿ ದಾಳಿ ನಡೆಯುತ್ತಿದೆ. ಇದರಿಂದ ರೈತರು ಸಹ ತಮ್ಮ ಜಮೀನುಗಳಿಗೆ ತೆರಳಲು ಭಯ ಪಡುವಂತಾಗಿದೆ. ಕೂಡಲೇ ಹುಲಿ ಸೆರೆ ಹಿಡಿಯುವಂತೆ ಕಚುವಿನಹಳ್ಳಿ ಲೋಕೇಶ್ ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ.

ಕಲಾವಿದನ ವಿನೂತನ ಪ್ರತಿಭಟನೆ

ಹನನವನ್ನು ತೀವ್ರವಾಗಿ ವಿರೋಧಿಸಿದ್ದಾರೆ. ಈ ವೇಳೆ ಟೀಮ್ ಮೈಸೂರು ತಂಡದ ಗೋಕುಲ್ ಗೋವರ್ಧನ್ ಮಾತನಾಡಿ, ಪರಿಸರ ಪ್ರೇಮಿಗಳು ಅಭಿವೃದ್ಧಿಯ ವಿರೋಧಿಗಳಲ್ಲ. ಅಭಿವೃದ್ಧಿ ಪರಿಸರ ಸಂರಕ್ಷಣೆಯೊಂದಿಗೆ ಮಾಡಿ ಎನ್ನುವುದು ನಮ್ಮ ಆಗ್ರಹ. ರಸ್ತೆ ಅಗಲೀಕರಣ ಮರಗಳನ್ನು ಉಳಿಸಿಕೊಂಡು ಮಾಡಬಹುದಿತ್ತು ಆದರೆ ಪರಿಸರದ ಕಾಳಜಿ ಇಲ್ಲದೇ ಮರ ಕಡಿಯಲಾಗಿದೆ. ಮೈಸೂರು ನಗರದಲ್ಲಿ ಅನೇಕ ರಸ್ತೆಗಳು ಅಗಲೀಕರಣವಾಗಬೇಕಾಗಿದೆ. ಗೋಪಾಲಗೌಡ ಆಸ್ಪತ್ರೆಯಿಂದ ಹಳೆ ಹಾಲಿನ ಡೈರಿವರೆಗೂ ರಸ್ತೆ ಅಗಲೀಕರಣ ಮಾಡಿಲ್ಲ. ಫೈವ್ ಲೈಟ್ ಸರ್ಕಲ್‌ನಿಂದ ಗ್ರಾಮಾಂತರ ಬಸ್ ನಿಲ್ದಾಣ ರಸ್ತೆ, ಇರ್ವಿನ್ ರಸ್ತೆಯಲ್ಲಿ ಒಂದು ಕಟ್ಟಡ ರಸ್ತೆ ಮಧ್ಯದಲ್ಲಿಯೇ ಇದೆ. ಅಗಲೀಕರಣ ಮಾಡಬೇಕಾದ ರಸ್ತೆ ಬಿಟ್ಟು ಹೈದರಾಲಿ ರಸ್ತೆಯನ್ನು ಅಗಲೀಕರಣ ಮಾಡಲು ಮರಗಳನ್ನು ಬಲಿ ಕೊಟ್ಟಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಆದಿತ್ಯ ಆಸ್ಪತ್ರೆಯ ಡಾ.ಚಂದ್ರಶೇಖರ್ ಮಾತನಾಡಿ, ಮರಗಳ ಮರಣಹೋಮ ಮಾಡಿರುವುದು ಸರಿಯಲ್ಲ. ತಂತ್ರಜ್ಞಾನ ಬಳಸಿ ಅವುಗಳನ್ನು ಸಂರಕ್ಷಿಸಬಹುದಿತ್ತು. ಆದರೆ ಅಧಿಕಾರಿಗಳು ಯಾವುದೋ ಒತ್ತಡಕ್ಕೆ ಮಣಿದು ಮರ ಕಡಿದಿದ್ದಾರೆ ಎಂದು ಆರೋಪಿಸಿದರು.

ಈ ಪ್ರತಿಭಟನೆಯಲ್ಲಿ ಟೀಂ ಮೈಸೂರು ಸದಸ್ಯರಾದ ಕಿರಣ್ ಜೈರಾವ್ ಗೌಡ, ಅನಿಲ್ ಜೈನ್, ಹಿರಿಯಣ್ಣ, ರಾಮ್ ಪ್ರಸಾದ್, ಮುರಳಿ, ಮನೋಹರ್, ವಸಂತ್ ಕುಮಾರ್, ಬಸವರಾಜು, ಆನಂದ್, ನವೀನ್, ಹೇಮಂತ್, ಬಾಲಕೃಷ್ಣ, ಸುನೀಲ್, ಮನೋಜ್, ಗೋವಿಂದ್ ಕಿರಣ್, ಮೂರ್ತಿ, ಮಂಜು ಹುಣಸೂರು, ಹರೀಶ್ ಇಟ್ಟಿಗೆಗೂಡು, ಧರ್ಮೇಂದ್ರ, ತಿಲಕ್, ಸ್ವರೂಪ್, ಅಭಿಷೇಕ್, ತ್ರಿಮೂರ್ತಿ, ಸಹನಾ, ಕುಮಾರಿ ಸುಕೃತ, ಕುಮಾರಿ ಕಲ್ಯಾಣಿ, ಕುಮಾರಿ ವರ್ಷಿಣಿ, ಆದಿತ್ಯ ಆಸ್ಪತ್ರೆಯ ಸಾಮಾಜಿಕ ಕಾರ್ಯಕರ್ತ ಸಿಂದುವಳ್ಳಿ ಅಹ್ಮದ್ ಹಾಗೂ ಪರಿಸರ ಪ್ರೇಮಿಗಳು ಪಾಲ್ಗೊಂಡಿದ್ದರು.

ಮೈಸೂರು ಮಿತ್ರ

ಹಿಂದೂಗಳೇ ಧೈರ್ಯವಾಗಿ ನೀವೂ ಮತಾಂತರ ಮಾಡಿ

ಚಿಂತಕ ಚಕ್ರವರ್ತಿ ಸೂಲಿಬೆಲೆ ಕರೆ



ಮಂಗಳೂರು, ಏ.20– ಹಿಂದೂಗಳೇ ಧೈರ್ಯವಾಗಿ ನೀವೂ ಮತಾಂತರ ಮಾಡಿ ಎಂದು ಚಿಂತಕ ಚಕ್ರವರ್ತಿ ಸೂಲಿಬೆಲೆ ಕರೆ ನೀಡಿದ್ದಾರೆ.

ಮಂಗಳೂರಿನ ಉಜಿರೆಯಲ್ಲಿ ನಡೆದ ರಾಮೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯಾರಾದರೂ ನಿಮ್ಮನ್ನು ಮತಾಂತರ ಆಗಿ ಎಂದ ಹೇಳಿದರೆ ನೀವು, ನಮ್ಮ ಸಮಾಜ ನಿಮ್ಮನ್ನು ಪ್ರೀತಿಯಿಂದ ಸ್ವಾಗತಿಸುತ್ತೆ ಬನ್ನಿ ಎಂದು ಕರೆಯಿರಿ ಎಂದು ಹೇಳಿದರು.

ಹಿಂದೂಗಳ ಸಂಖ್ಯೆ ಜಾಸ್ತಿ ಮಾಡಲು ಏನು ಐಡಿಯಾ ಇದೆ? ಎಂದು ಕೇಳಿದಾಗ ಹೆಚ್ಚು ಮಕ್ಕಳನ್ನು ಮಾಡುವಂತೆ ಮನವಿ ಮಾಡಿಕೊಳ್ಳುತ್ತೇವೆ ಎಂದು ಹೇಳಿದರು. ಆದರೆ, ನಮ್ಮ ಜನ ನಾಲ್ಕೈದು ಮಕ್ಕಳನ್ನು ಮಾಡ್ತಾರಾ? ನಮ್ಮ ಜನರಿಗೆ ಅವರ ಮಕ್ಕಳನ್ನು ಪಂಚರ್ ಹಾಕಲು ಕಳುಹಿಸಲು ಇಷ್ಟ ಇಲ್ಲ. ಅವರಿಗೆ ನಮ್ಮ ಮಕ್ಕಳು ಚೆನ್ನಾಗಿ ಓದಿಸಿ ಡಾಕ್ಟರ್, ಇಂಜಿನಿಯರ್ ಆಗಿ ಮಾಡಬೇಕು ಅನ್ನೋ ದರ್ಪ್ಪೇ ಇದೆ. ಹಾಗಾಗಿ ಓದಿಸುವ ತಾಕತ್ತು ಇಲ್ಲದ ಕಾರಣ ಒಂದು ಸಾಕು, ಎರಡು ಸಾಕು ಅಂತಾರೆ. ಹಾಗಾಗಿ ಸರ್ಕಾರ ನಮಗಾಗಿ ಮಾಡಿರುವ ಕಾನೂನುಗಳನ್ನು ಬಳಸಿಕೊಳ್ಳಿ ಎಂದು ಕರೆ ನೀಡಿದರು.

ಬಿಜೆಪಿ ಸರ್ಕಾರ ಇದ್ದಾಗ ಮತಾಂತರ ನಿಷೇಧ ಕಾಯ್ದೆ ಜಾರಿಗೆ ತಂದಿತು. ಹೊಸ ಸರ್ಕಾರ ಬಂದು ಆ ಕಾನೂನು ತೆಗೆದು ಹಾಕಿತು. ಅಂದರೆ ಅದರ ಅರ್ಥ ನೀವೂ ಮತಾಂತರ ಮಾಡಬಹುದು ಅಂತ ಸರ್ಕಾರವೇ ಹೇಳಿದೆ. ಹಾಗಿದ್ದಾಗ ನಾವು ಮತಾಂತರ ಮಾಡಬೇಕಲ್ಲವೇ ಎಂದು ಪ್ರಶ್ನಿಸಿದರಲ್ಲದೆ, ಜಗತ್ತಿನ ಯಾವ ರಾಷ್ಟ್ರದಲ್ಲೂ ಈ ರೀತಿಯ ಪರಿಸ್ಥಿತಿ ಇಲ್ಲ. ಹಾಗಾಗಿ ಮತಾಂತರ ಮಾಡಿ, ಸರ್ಕಾರವೇ ಅಧಿಕೃತವಾಗಿ ಹೇಳಿದೆ, ಮಾಡಲು ನಿಮಗೆ ಏನು ಕಷ್ಟ ಏನು ಎಂದು ಸೂಲಿಬೆಲೆ ಕೇಳಿದರು.

ಮೈಸೂರು ರೈಲ್ವೆ ವಿಭಾಗದಲ್ಲಿ 36 ಕೋಟಿ ರೂ. ವೆಚ್ಚದಲ್ಲಿ ಲೋಕೋ ಪೈಲೆಟ್‌ಗಳಿಗೆ ವಿಶ್ರಾಂತಿ ಕೊಠಡಿ

ರೈಲ್ವೆ ಅಧಿಕಾರಿಗಳಿಂದ ಮಾಹಿತಿ

ಮೈಸೂರು, ಏ.20(ಬಿಎಲ್‌ಯು)– ಮೈಸೂರು ರೈಲ್ವೆ ವಿಭಾಗದಲ್ಲಿ ರೈಲ್ವೆ ಇಂಜಿನ್ ಚಾಲನೆ ಮಾಡುವ ಲೋಕೋ ಪೈಲೆಟ್‌ಗಳಿಗಾಗಿ 36 ಕೋಟಿ ರೂ. ವೆಚ್ಚದಲ್ಲಿ ಹೊಸ ರನ್ನಿಂಗ್ ರೂಮ್ (ವಿಶ್ರಾಂತಿ ಕೊಠಡಿ) ನಿರ್ಮಾಣ ಹಾಗೂ ಈಗಿರುವ ರನ್ನಿಂಗ್ ರೂಂ ನವೀಕರಣ ಮಾಡಲಾಗುತ್ತಿದೆ ಎಂದು ನೈರುತ್ಯ ರೈಲ್ವೆಯ ಮೈಸೂರು ವಿಭಾಗದ ಸಿನಿಯರ್ ಡಿವಿಜನಲ್ ಎಲೆಕ್ಟ್ರಿಲ್ ಇಂಜಿನಿಯರ್ ರವಿಶಂಕರ್ ತಿಳಿಸಿದರು.

ರೈಲ್ವೆ ಇಂಜಿನ್ ಚಾಲನೆ ಮಾಡುವ ಲೋಕೋ ಪೈಲೆಟ್‌ಗಳಿಗೆ ಸೂಕ್ತ ಸೌಲಭ್ಯ ನೀಡುತ್ತಿಲ್ಲ ಎಂಬ ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪದ ಹಿನ್ನೆಲೆ ಲೋಕೋ ಪೈಲೆಟ್‌ಗಳಿಗೆ ಒದಗಿಸಿರುವ ಸೌಲಭ್ಯಗಳ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡುವಂತೆ ರೈಲ್ವೆ ಮಂಡಳಿ ಸೂಚನೆ ನೀಡಿರುವುದರ ಮೇರೆಗೆ ರೈಲ್ವೆ ಇಲಾಖೆ ಅಧಿಕಾರಿಗಳು ಭಾನುವಾರ ಪತ್ರಿಕಾಗೋಷ್ಠಿ ನಡೆಸಿ ವಿವರಣೆ ನೀಡಿದರು.

ಮೈಸೂರು ರೈಲ್ವೆ ವಿಭಾಗದಲ್ಲಿ 1084 ಲೋಕೋ ಪೈಲೆಟ್‌ಗಳ ಅವಶ್ಯವಿದೆ. ಆದರೆ ಈಗ 856 ಪುರುಷ ಲೋಕೋ ಪೈಲೆಟ್ ಹಾಗೂ 36 ಮಹಿಳಾ ಲೋಕೋ ಪೈಲೆಟ್‌ಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಪ್ಯಾಸೆಂಜರ್ ರೈಲುಗಳ ಲೋಕೋ ಪೈಲೆಟ್‌ಗಳಿಗೆ ಕೊರತೆ ಇಲ್ಲ. ಆದರೆ ಗೂಡ್ಸ್ ರೈಲುಗಳಿಗೆ ಚಾಲಕರ ಕೊರತೆ ಇದೆ. ಈ ಹಿನ್ನೆಲೆ ಅಸಿಸ್ಟೆಂಟ್ ಲೋಕೋ ಪೈಲೆಟ್‌ಗಳ ನೇಮಕಾತಿಗೆ ರೈಲ್ವೆ ಮಂಡಳಿ ಮುಂದಾಗಿದೆ ಎಂದರು.



ಲೋಕೋ ಪೈಲೆಟ್‌ಗಳನ್ನು 9 ರಿಂದ 11 ಗಂಟೆ ವರೆಗೆ ಕರ್ತವ್ಯಕ್ಕೆ ಬಳಕೆ ಮಾಡಿಕೊಳ್ಳಲಾಗುತ್ತದೆ. ತರುವಾಯ 6 ರಿಂದ 8 ಗಂಟೆವರೆಗೆ ವಿಶ್ರಾಂತಿ ನೀಡಲಾಗುವುದು ಎಂದು ರವಿಶಂಕರ್ ತಿಳಿಸಿದರು.

ಮೈಸೂರು ವಿಭಾಗದಲ್ಲಿ ಲೋಕೋ ಪೈಲೆಟ್‌ಗಳಿಗಾಗಿ 9 ರನ್ನಿಂಗ್ ರೂಂ (ವಿಶ್ರಾಂತಿ ಕೊಠಡಿ)ಗಳಿವೆ. ಇವುಗಳಲ್ಲಿ ಸುಬ್ರಹ್ಮಣ್ಯ, ಹಾಸನ, ಶಿವಮೊಗ್ಗ ಮತ್ತು ಚಿಕ್ಕಜಾಜೂರು ವಿಶ್ರಾಂತಿ ಕೊಠಡಿಗಳನ್ನು ನವೀಕರಣ ಮಾಡಲಾಗುವುದು. ಜೊತೆಗೆ 5 ಹೊಸ ವಿಶ್ರಾಂತಿ ಕೊಠಡಿ ನಿರ್ಮಿಸಲಾಗುವುದು. ಇದಕ್ಕಾಗಿ 36 ಕೋಟಿ ರೂಪಾಯಿ ವೆಚ್ಚ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ನವೀಕರಿಸುವ ಹಾಗೂ ಹೊಸದಾಗಿ ನಿರ್ಮಾಣ ಮಾಡುತ್ತಿರುವ ವಿಶ್ರಾಂತಿ ಕೊಠಡಿಗಳಲ್ಲಿ ಜಿಮ್ ಸೌಲಭ್ಯ ನೀಡಲಾಗುವುದು. ಅಲ್ಲದೆ ರೈಲ್ವೆ ಇಂಜಿನ್‌ನಲ್ಲಿ ಶೌಚಾಲಯ ನಿರ್ಮಿಸಲು ರೈಲ್ವೆ ಮಂಡಳಿ ತೀರ್ಮಾನ ಕೈಗೊಂಡಿದೆ ಎಂದು ರವಿಶಂಕರ್ ಹೇಳಿದರು.

ಇದೇ ವೇಳೆ ಮಾತನಾಡಿದ ನೈರುತ್ಯ ರೈಲ್ವೆಯ ಮೈಸೂರು ವಿಭಾಗದ ಡಿವಿಜನಲ್ ಮ್ಯಾಕಾನಿಕಲ್ ಇಂಜಿನಿಯರ್ ಶ್ರೀನಿವಾಸ ರಾವ್, ಮೈಸೂರು ನಗರದಲ್ಲಿ 44 ಹಾಸಿಗೆಗಳಿರುವ ವಿಶ್ರಾಂತಿ ಕೊಠಡಿಗಳಿವೆ. ವಿಶ್ರಾಂತಿ ಕೊಠಡಿಗಳು ಪ್ರಶಾಂತ ವಾತಾವರಣದಲ್ಲಿದ್ದು, ಶುಚಿತ್ವ ಕಾಪಾಡಲಾಗಿದೆ. ಲೋಕೋ ಪೈಲೆಟ್‌ಗಳಿಗೆ ರಿಯಾಯಿತಿ ದರದಲ್ಲಿ ಬೆಳಗ್ಗಿನ ಉಪಹಾರ ಮತ್ತು ಮಧ್ಯಾಹ್ನ ಮತ್ತು ರಾತ್ರಿ ಊಟ ನೀಡಲಾಗುವುದು. ಇದಕ್ಕೆ 5.85 ರೂ. ದರ ನಿಗದಿ ಮಾಡಲಾಗಿದೆ ಎಂದು ರವಿಶಂಕರ್ ವಿವರಿಸಿದರು.

ರೈಲು ಚಾಲನೆಯಲ್ಲಿ ಲೋಕೋ ಪೈಲೆಟ್ (ಇಂಜಿನ್ ಚಾಲಕರು)ಗಳ ಪಾತ್ರ ಬಹುಮುಖ್ಯವಾಗಿರುವ ಹಿನ್ನೆಲೆ ಅವರ ಜಾಗ್ರತೆ ಮತ್ತು ಆರೋಗ್ಯದ ಬಗ್ಗೆ ಹೆಚ್ಚಿನ ಆಸಕ್ತಿ ತೋರಲಾಗಿದೆ. ರೈಲ್ವೆ ಆಸ್ಪತ್ರೆ ಸೇರಿದಂತೆ ಒಪ್ಪಂದ ಮಾಡಿಕೊಂಡಿರುವ ಇತರೆ ಆಸ್ಪತ್ರೆಗಳಲ್ಲಿ ಲೋಕೋ ಪೈಲೆಟ್‌ಗಳಿಗೆ ಆರೋಗ್ಯ ತಪಾಸಣೆ ಮಾಡಿಸಲಾಗುವುದು. ಈ ವೇಳೆ ಅವರಲ್ಲಿ ಅನಾರೋಗ್ಯ ಕಂಡು ಬಂದರೆ ವಿಶ್ರಾಂತಿ ನೀಡಲಾಗುವುದು ಎಂದು ತಿಳಿಸಿದರು.

ಪ್ರಸ್ತುತ ಮೈಸೂರು ರೈಲ್ವೆ ವಿಭಾಗದಲ್ಲಿ 1805 ಕಿಲೋ ಮೀಟರ್ ವಿದ್ಯುತ್ ಚಾಲಿತ ಮಾರ್ಗವಿದ್ದು, ಶೇಕಡ 92.65 ಕಾಮಗಾರಿ ಪೂರ್ಣಗೊಳಿಸಲಾಗಿದೆ. ಇನ್ನು 64 ಕಿಲೋ ಮೀಟರ್ ವಿದ್ಯುತ್ ಚಾಲಿತ ಮಾರ್ಗ ನಿರ್ಮಾಣ ಮಾಡಬೇಕಿದ್ದು, ಮುಂದಿನ ವರ್ಷದೊಳಗೆ ಇದನ್ನು ಪೂರ್ಣಗೊಳಿಸಲಾಗುವುದು ಎಂದು ಶ್ರೀನಿವಾಸರಾವ್ ಭರವಸೆ ನೀಡಿದರು.

ಚಾಕುವಿನಿಂದ ಇರಿದು ಕಾರವಾರ ಮಾಜಿ ನಗರಸಭೆ ಸದಸ್ಯನ ಹತ್ಯೆ



ಕಾರವಾರ, ಏ.20– ಮಾಜಿ ನಗರಸಭೆ ಸದಸ್ಯ ಸತೀಶ್ ಕೋಳಂಕರ್ (62) ಅವರನ್ನು ಚಾಕುವಿನಿಂದ ಇರಿದು ಹತ್ಯೆ ಮಾಡಿರುವ ಘಟನೆ ಉತ್ತರ ಕನ್ನಡ ಜಿಲ್ಲೆಯ ಕಾರವಾರದ ಬಿಎಸ್ಎನ್ಎಲ್ ಕಚೇರಿ ಬಳಿ ನಡೆದಿದೆ. ಇಂದು ಬೆಳಗ್ಗೆ ವಾಯುವಿಹಾರಕ್ಕೆ ತೆರಳಿದ್ದ ವೇಳೆ ಇಬ್ಬರು ದುಷ್ಕರ್ಮಿಗಳು ಸತೀಶ್ ಅವರ ಎದೆಗೆ ಇರಿದಿದ್ದಾರೆ. ತಕ್ಷಣ ಅವರನ್ನು ಸ್ಥಳೀಯ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಈ ಸಂಬಂಧ ಕಾರವಾರ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ. ವ್ಯಾವಹಾರಿಕ ವಿಚಾರದ ದ್ವೇಷದಿಂದ ಸತೀಶ್ ಅವರ ಹತ್ಯೆಯಾಗಿರುವ ಶಂಕೆಯಿದೆ. ಅವರ ವಿರುದ್ಧ ಕಾರವಾರ ನಗರ ಠಾಣೆಯಲ್ಲಿ 9ಕ್ಕೂ ಹೆಚ್ಚು ಪ್ರಕರಣಗಳಿವೆ. ಅವರನ್ನು ರೌಡಿ ಶೀಟರ್ ಪಟ್ಟಿಗೆ ಸೇರಿಸಲಾಗಿತ್ತು. ಹತ್ತು ದಿನಗಳ ಹಿಂದೆ ನಗರದ ಹೋಟೆಲ್ ಒಂದರಲ್ಲಿ ಹಣಕಾಸಿನ ವಿಚಾರವಾಗಿ ಗಲಾಟೆ ನಡೆದಿತ್ತು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಾರಾಯಣ ತಿಳಿಸಿದ್ದಾರೆ. ಇದು ಒಂದು ವೈಯಕ್ತಿಕ ಮತ್ತು ಸಾಲದ ವ್ಯವಹಾರಕ್ಕೆ ಆದ ಕೊಲೆಯಾಗಿದೆ. ಆರೋಪಿಗಳ ಮಾಹಿತಿ ದೊರೆತಿದ್ದು, ಶೀಘ್ರದಲ್ಲಿ ಬಂಧಿಸುತ್ತೇವೆ. ಕಾರವಾರದಲ್ಲಿ ಕಾನೂನು ಸುವ್ಯವಸ್ಥೆ ಹತೋಟಿಯಲ್ಲಿದೆ ಎಂದು ಹೇಳಿದರು.

ಏಷ್ಯನ್ ಜೂನಿಯರ್ ರ್‍ಯಾಂಕಿಂಗ್ ಟೆನಿಸ್ ಪಂದ್ಯಾವಳಿ: ಮೈಸೂರಿನ ಪದ್ಮಪ್ರಿಯಾಗೆ ಸಿಂಗಲ್ಸ್, ಡಬಲ್ಸ್‌ನಲ್ಲಿ ಪ್ರಶಸ್ತಿ



ಪ್ರಶಸ್ತಿ ಸ್ವೀಕರಿಸುತ್ತಿರುವ ಪದ್ಮಪ್ರಿಯಾ ರಮೇಶ್‌ಕುಮಾರ್.

ಮೈಸೂರು,ಏ.20(ಎಂಟಿವೈ)– ತ್ರಿಪುರಾದ ಅಗರ್ತಲಾದಲ್ಲಿನ ಮಲಂಚ ನಿವಾಸ್‌ನಲ್ಲಿ ನಡೆದ 14 ವರ್ಷದೊಳಗಿನ ಏಷ್ಯನ್ ಜೂನಿಯರ್ ರ್‍ಯಾಂಕಿಂಗ್ ಟೆನಿಸ್ ಪಂದ್ಯಾವಳಿಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದ ಮೈಸೂರಿನ ಟೆನಿಸ್ ಆಟಗಾರ್ತಿ ಪದ್ಮಪ್ರಿಯಾ ರಮೇಶ್ ಕುಮಾರ್ ಸಿಂಗಲ್ಸ್ ಮತ್ತು ಡಬ್ಬಲ್ಸ್ ವಿಭಾಗದಲ್ಲಿ ಚಾಂಪಿಯನ್ ಆಗಿದ್ದಾರೆ.

ಏಷ್ಯನ್ ಟೆನ್ನಿಸ್ ಫೆಡರೇಷನ್ ಹಾಗೂ ಆಲ್ ಇಂಡಿಯಾ ಟೆನ್ನಿಸ್ ಅಸೋಸಿಯೇಷನ್ ವತಿಯಿಂದ 6 ದಿನ ನಡೆದ ಏಷ್ಯಾದ 14 ವರ್ಷದೊಳಗಿನ ಜೂನಿಯರ್ ರ್‍ಯಾಂಕಿಂಗ್ ಟೆನಿಸ್ ಪಂದ್ಯಾವಳಿಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದ ಮೈಸೂರಿನ ಪದ್ಮಪ್ರಿಯಾ ರಮೇಶ್ ಕುಮಾರ್ ಅತ್ಯುತ್ತಮ ಪ್ರದರ್ಶನ ನೀಡಿ, ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ತನ್ನದಾಗಿಸಿಕೊಂಡಿದ್ದರೆ, ಡಬಲ್ಸ್ ವಿಭಾಗದಲ್ಲೂ ಸಹ ಆಟಗಾರ್ತಿ ದಿಯಾ ಕುಮಾರ್ ಅವರೊಂದಿಗೆ ಡಬಲ್ಸ್ ವಿಭಾಗದಲ್ಲೂ ಪ್ರಶಸ್ತಿ ಪಡೆದುಕೊಂಡಿದ್ದಾರೆ.

ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಪದ್ಮಪ್ರಿಯಾ ಅವರು ಎದುರಾಳಿ ದಿಯಾ ರವಿಕುಮಾರ್ ವಿರುದ್ಧ 6–2, 3–6, 6–4 ಅಂತರದಲ್ಲಿ ಗೆಲುವು ಸಾಧಿಸಿದರು.

ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ಪದ್ಮಪ್ರಿಯಾ ರಮೇಶ್‌ಕುಮಾರ್ ಹಾಗೂ ದಿಯಾ ರವಿಕುಮಾರ್ ಜೋಡಿ ಮರಿಯಾ ಪಟೇಲ್ ಹಾಗೂ ಧೃತಿ ಸಾಂದ್ರಾ ಬಂಟುಪಲ್ಲಿ ವಿರುದ್ಧ 6–2, 6–0 ಅಂತರದಲ್ಲಿ ಗೆಲುವು ಸಾಧಿಸಿದರು.

ಇತ್ತೀಚೆಗೆ ಪಂಜಾಬ್‌ನಲ್ಲಿನ ಲೂದಿಯಾನದಲ್ಲಿ ನಡೆದ ರಾಷ್ಟ್ರೀಯ ಟೆನಿಸ್ ಸರಣಿಯಲ್ಲೂ 14 ವರ್ಷದೊಳಗಿನ ವಿಭಾಗದಲ್ಲೂ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದ ಪದ್ಮಪ್ರಿಯಾ ಅವರು ಇದೀಗ ಏಷ್ಯನ್ ರ್‍ಯಾಂಕಿಂಗ್ ಜೂನಿಯರ್ ಪಂದ್ಯಾವಳಿಯಲ್ಲೂ ಸಿಂಗಲ್ಸ್ ಹಾಗೂ ಡಬಲ್ಸ್ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರ ಹೊಮ್ಮಿದ್ದಾರೆ. ಇದರಿಂದ ಅಖಿಲ ಭಾರತ ಟೆನಿಸ್ ರ್‍ಯಾಂಕಿಂಗ್‌ನಲ್ಲಿ 6ನೇ ರ್‍ಯಾಂಕ್ ಹಾಗೂ ಏಷ್ಯಾದ ರ್‍ಯಾಂಕಿಂಗ್‌ನಲ್ಲಿ 37ನೇ ರ್‍ಯಾಂಕ್ ಆಟಗಾರ್ತಿಯಾಗಿ ಪದ್ಮಪ್ರಿಯಾ ಹೊರ ಹೊಮ್ಮಿದ್ದಾರೆ. ಹುಲಿ ಯೋಜನೆಯ ಸಿಎಫ್ ಡಾ.ಪಿ. ರಮೇಶ್‌ಕುಮಾರ್ ಹಾಗೂ ಮೈಸೂರು ವೃತ್ತದ ಸಿಎಫ್ ಡಾ.ಎಂ.ಮಾಲತಿ ಪ್ರಿಯಾ ದಂಪತಿ ಪುತ್ರಿಯಾಗಿರುವ ಪದ್ಮಪ್ರಿಯಾ ಮೈಸೂರಿನ ಎಕ್ಸೆಲ್ ಪಬ್ಲಿಕ್ ಶಾಲೆಯ 8ನೇ ತರಗತಿ ವಿದ್ಯಾರ್ಥಿಯಾಗಿದ್ದು, ಟೆನಿಸ್ ಕೋಚ್ ರಘುವೀರ್ ಪೊನ್ನುಸ್ವಾಮಿ ಅವರ ಬಳಿ ತರಬೇತಿ ಪಡೆಯುತ್ತಿದ್ದಾರೆ.

ಏಕಲವ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷರಾಗಿ ದ್ಯಾವಪ್ಪ ನಾಯಕ, ಉಪಾಧ್ಯಕ್ಷರಾಗಿ ಪ್ರಭಾಕರ್ ಅವಿರೋಧ ಆಯ್ಕೆ



ಏಕಲವ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ಆಡಳಿತ ಮಂಡಳಿಗೆ ಅಧ್ಯಕ್ಷರಾಗಿ ದ್ಯಾವಪ್ಪ ನಾಯಕ, ಉಪಾಧ್ಯಕ್ಷರಾಗಿ ಪ್ರಭಾಕರ್ ಅವಿರೋಧವಾಗಿ ಆಯ್ಕೆಯಾದರು.

ಮೈಸೂರು, ಏ.20–ಮೈಸೂರಿನ ಹಿನಕಲ್ ಗ್ರಾಮದಲ್ಲಿ ನೂತನವಾಗಿ ಪ್ರಾರಂಭವಾಗಿರುವ ಏಕಲವ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ಐದು ವರ್ಷಗಳ ಅವಧಿಯ ಆಡಳಿತ ಮಂಡಳಿಗೆ ಅಧ್ಯಕ್ಷರಾಗಿ ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಅಧ್ಯಕ್ಷ ದ್ಯಾವಪ್ಪ ನಾಯಕ ಹಾಗೂ ಉಪಾಧ್ಯಕ್ಷರಾಗಿ ಪ್ರಭಾಕರ್ ಹುಣಸೂರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನಿರ್ದೇಶಕರಾಗಿ ಕೆಂಪನಾಯಕ, ತಾಯೂರು ಪ್ರಕಾಶ್, ಡಿ.ಮಂಜುನಾಥ್, ಸುರೇಶ್‌ಕುಮಾರ್ ಬೀಡು, ಎಂ.ಮಣಿಕಂಠ, ಜಿ.ಡಿ.ಪುಟ್ಟರಾಜು, ನಾರಾಯಣ ನಾಯಕ, ರಾಜು, ಎನ್.ಪ್ರತಾಪ್, ಎಂ.ವಿ. ಶ್ರೀನಿವಾಸ ಮಿತ್ರ, ಸತ್ಯನಾರಾಯಣ, ಮಮತಾ, ಜೆ.ಆಶಾ ಆಯ್ಕೆಯಾಗಿದ್ದಾರೆ.

ವಾರ್ಧಕ ಷಟ್ಪದಿಯಲ್ಲಿ ಮುಕ್ತಕ ರಚನಾ ಸ್ಪರ್ಧೆ

ಮೈಸೂರು: ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಸಂಸ್ಥೆಯು 20ರಿಂದ 40 ವರ್ಷದ ವಯೋಮಾನದ ಕನ್ನಡ ಯುವ ಕವಿ–ಕವಯಿತ್ರಿಗಳಿಗೆ ವಾರ್ಧಕ ಷಟ್ಪದಿಯಲ್ಲಿ ಮುಕ್ತಕ ರಚನಾ ಸ್ಪರ್ಧೆ ಏರ್ಪಡಿಸಲಾಗಿದೆ. ಸ್ಪರ್ಧಿಗಳು ತಮ್ಮ ರಚನೆಗಳನ್ನು ಮೇ 15ರೊಳಗೆ ಅಕಾಡೆಮಿಯ ಕೇಂದ್ರ ಕಚೇರಿಗೆ ಅಂಚೆ ಮೂಲಕವೇ ಕಳುಹಿಸತಕ್ಕದ್ದು. ಹೆಚ್ಚಿನ ಮಾಹಿತಿಗೆ ಮೊ. 98452 19796, 9481530236 ಸಂಪರ್ಕಿಸಬಹುದು.

8, 9, 10ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು,ಏ.20–ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ) ಪೀಪಲ್ಸ್ ಪಾರ್ಕ್ ವತಿಯಿಂದ 2025–26ನೇ ಸಾಲಿನಲ್ಲಿ 8, 9 ಹಾಗೂ 10ನೇ ತರಗತಿಗಳಿಗೆ ದಾಖಲಾತಿ ಪ್ರಾರಂಭವಾಗಿದೆ. ದಾಖಲಾತಿಯು ಸಂಪೂರ್ಣ ಉಚಿತ. ಕನ್ನಡ ಹಾಗೂ ಆಂಗ್ಲ ಮಾಧ್ಯಮಗಳಿಗೆ ಪ್ರವೇಶಾತಿ ಲಭ್ಯವಿದ್ದು, 9 ಹಾಗೂ 10ನೇ ತರಗತಿಗಳಿಗೆ ಎನ್‌ಎಸ್‌ಕ್ಯೂಎಫ್ ಕಾರ್ಯಕ್ರಮದಲ್ಲಿ ಸೌಂದರ್ಯ ಮತ್ತು ಆರೋಗ್ಯ ಸ್ವಾಸ್ಥ್ಯ ಹಾಗೂ ಮಾಹಿತಿ ತಂತ್ರಜ್ಞಾನ ವಿಷಯಗಳ ಆಯ್ಕೆಗೆ ಅವಕಾಶವಿರುತ್ತದೆ. ಸಂಗೀತ, ಕ್ರೀಡೆ ಹಾಗೂ ಸಾಹಿತ್ಯಿಕ ಚಟುವಟಿಕೆಗಳಿಗೆ ವಿಶೇಷ ಅವಕಾಶವಿದ್ದು, ಉತ್ತಮ ಕಲಿಕಾ ಪರಿಸರ ಹೊಂದಿರುತ್ತದೆ. ದೂ.ಸಂ: 9448788102 ಸಂಪರ್ಕಿಸಬಹುದು ಎಂದು ನಜರ್‌ಬಾದ್‌ನ, ಪೀಪಲ್ಸ್ ಪಾರ್ಕ್‌ನಲ್ಲಿರುವ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ ಉಪಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಿವ್ಯಾ ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು: ಮೈಸೂರಿನ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಕೆ.ದಿವ್ಯಾ ದ್ವಿತೀಯ ಪಿಯುಸಿಯಲ್ಲಿ ಶೇ.90ರಷ್ಟು ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕನ್ನಡ–92, ಇಂಗ್ಲಿಷ್–83, ಅರ್ಥಶಾಸ್ತ್ರ–87, ವಾಣಿಜ್ಯ ಶಾಸ್ತ್ರ–95, ಲೆಕ್ಕಶಾಸ್ತ್ರ–91 ಹಾಗೂ ಗಣಕ ವಿಜ್ಞಾನ–93 ಅಂಕಗಳನ್ನು ಪಡೆದಿದ್ದಾಳೆ. ಈಕೆ ಕುಮಾರ ಹಾಗೂ ರೇಖಾ ದಂಪತಿ ಪುತ್ರಿ.

ಮೈಸೂರಿನ ಜ್ಞಾನಗಂಗಾ ಪ.ಪೂರ್ವ ಕಾಲೇಜಿಗೆ ಶೇ.97ರಷ್ಟು ಫಲಿತಾಂಶ

ಮೈಸೂರು, ಏ. 20– ಮೈಸೂರಿನ ಜ್ಞಾನಗಂಗಾ ಪದವಿ ಪೂರ್ವ ಕಾಲೇಜಿಗೆ 2024–25ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.97 ಫಲಿತಾಂಶ ಬಂದಿದೆ. ಶಿವಾನಿ ಎಸ್ ಅಡಗಲಿ ವಿಜ್ಞಾನ ವಿಭಾಗದಲ್ಲಿ 583 ಅಂಕ ಪಡೆದು ರಾಜ್ಯಕ್ಕೆ 17ನೇ ರ್‍ಯಾಂಕ್, ಶ್ರೀರಾಮ ವಾಣಿಜ್ಯ ವಿಭಾಗದಲ್ಲಿ 573 ಅಂಕಗಳನ್ನು ಪಡೆದು ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಅತ್ಯುನ್ನತ ಶ್ರೇಣಿಯಲ್ಲಿ 13 ವಿದ್ಯಾರ್ಥಿಗಳು, ಪ್ರಥಮ ಶ್ರೇಣಿಯಲ್ಲಿ 49 ವಿದ್ಯಾರ್ಥಿಗಳು ಹಾಗೂ ದ್ವಿತೀಯ ಶ್ರೇಣಿಯಲ್ಲಿ 8 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ ಎಂದು ಕಾಲೇಜಿನ ಪ್ರಕಟಣೆ ತಿಳಿಸಿದೆ.

ಏ.23, ಉಚಿತ ಯೋಗಾಸನ ತರಬೇತಿ

ಮೈಸೂರು,ಏ.20–ಮೈಸೂರಿನ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಹಾಗೂ ಚೈತನ್ಯ ಯೋಗಕೇಂದ್ರದ ಜಂಟಿ ಆಶ್ರಯದಲ್ಲಿ 1 ತಿಂಗಳ ಉಚಿತ ಯೋಗ ತರಬೇತಿ ಶಿಬಿರವನ್ನು ಏ.23ರಿಂದ ಮಕ್ಕಳು, ಮಹಿಳೆಯರು ಹಾಗೂ ಪುರುಷರಿಗೆ ಹೊಸ ನ್ಯಾಯಾಲಯದ ಎದುರು ಇರುವ ನೇಗಿಲಯೋಗಿ ಸೇವಾ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 6ರಿಂದ 7 ಗಂಟೆಯವರೆಗೆ ನಡೆಯಲಿದೆ. ಮಾಹಿತಿಗೆ ಮೊ. 8762198411, 9449886387, 9483453005 ಸಂಪರ್ಕಿಸಬಹುದು.

ಶೇ.95ರಷ್ಟು ಸತ್ಯಾಂಶದಿಂದ ಕೂಡಿರುವ ಜಾತಿಗಣತಿ ವರದಿ ವೈಜ್ಞಾನಿಕ

ರಾಜ್ಯ ಅಹಿಂದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್ ಪ್ರತಿಪಾದನೆ



ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಅಹಿಂದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್ ಮಾತನಾಡಿದರು.

ಮೈಸೂರು,ಏ.20(ಜಿಎ)–ಶೇ.95ರಷ್ಟು ಸತ್ಯಾಂಶದಿಂದ ಕೂಡಿರುವ ಜಾತಿಗಣತಿ ವರದಿ ವೈಜ್ಞಾನಿಕವಾಗಿದೆ ಎಂದು ಕರ್ನಾಟಕ ರಾಜ್ಯ ಅಹಿಂದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್ ಇಂದಿಲ್ಲಿ ಪ್ರತಿಪಾದಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾನತೆಯೇ ಸ್ವಾತಂತ್ರದ ಆತ್ಮ. ಎಲ್ಲಾ ಸಮುದಾಯಗಳಿಗೂ ನ್ಯಾಯ ಸಿಗಬೇಕು ಎಂಬ ಉದ್ದೇಶದಿಂದ 2015 ರಂದು ಸಿದ್ದರಾಮಯ್ಯ ಎಲ್ಲಾ ಸಮುದಾಯದ 2ಲಕ್ಷ ಜನರಿಂದ ಮಾಹಿತಿ ಪಡೆದು 180 ಕೋಟಿ ರೂ. ಹಣ ಖರ್ಚು ಮಾಡಿ ವರದಿ ಸಿದ್ಧಪಡಿಸಿದ್ದಾರೆ. ಆದ್ದರಿಂದ ಈ ವರದಿಯೂ ವೈಜ್ಞಾನಿಕವಾಗಿದ್ದು, ಈ ವರದಿ ಶೇ.95ರಷ್ಟು ಸತ್ಯಾಂಶದಿಂದ ಕೂಡಿದೆ ಎಂದರು.

ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸಾಮಾಜಿಕ ನ್ಯಾಯ ಒದಗಿಸಿ ಕೊಡುವ ನಿಟ್ಟಿನಲ್ಲಿ ಸರ್ಕಾರ ಈ ವರದಿ ತಯಾರಿಸಿದೆ. ಇದನ್ನು ಕೇವಲ ರಾಜಕೀಯ ಕಾರಣಗಳಿಗಾಗಿ ಮಾತ್ರ ಕೆಲವು ಮೇಲ್ವರ್ಗದವರು ವಿರೋಧಿಸುತ್ತಿದ್ದಾರೆಯೇ ಹೊರತು ಬೇರಾವ ಕಾರಣವೂ ಇಲ್ಲ. 1931ರ ಬ್ರಿಟಿಷರ ಕಾಲದ ನಂತರ ಇದೇ ಮೊದಲ ಬಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಜಾತಿ ಜನಗಣತಿ ವರದಿ ಸಿದ್ಧವಾಗಿದೆ, ಹಿಂದುಳಿದ ವರ್ಗಕ್ಕೆ ನ್ಯಾಯ ಸಿಗಬೇಕೆಂದರೆ ಇದನ್ನು ನಾವೆಲ್ಲರೂ ಒಪ್ಪಲೇಬೇಕು ಎಂದು ತಿಳಿಸಿದರು.

ನಮ್ಮ ಸಮಾಜಕ್ಕೆ ಅನ್ಯಾಯವಾಗಿದೆ ಎಂದು ಹೇಳುವ ನೀವುಗಳು ರಾಜ್ಯದ ಇತಿಹಾಸವನ್ನು ಒಮ್ಮೆ ಅಧ್ಯಯನ ಮಾಡಿ ನೋಡಿ. ಯಾವ ಸಮಾಜದವರು ಅತಿ ಹೆಚ್ಚು ರಾಜ್ಯವನ್ನು ಆಳಿದ್ದಾರೆ, ಮತ್ತು ಎಷ್ಟು ಜನ ಮುಖ್ಯಮಂತ್ರಿ ಆಗಿದ್ದಾರೆ, ಮಂತ್ರಿಗಾಗಿದ್ದಾರೆ, ಹಿಂದುಳಿದ ಸಮುದಾಯವರಿಗೆ ಎಷ್ಟು ರಾಜಕೀಯ ಪ್ರಾತಿನಿಧ್ಯ ಸಿಕ್ಕಿದೆ ಅನ್ನೋದು ಗೊತ್ತಾಗಲಿದೆ. ಈ ವರದಿಯಲ್ಲಿ ಏನಾದರೂ ಲೋಪದೋಷಗಳಿದ್ದರೆ ಆ ತಪ್ಪನ್ನು ಹೇಳಲಿ ಸರಿಪಡಿಸಿಕೊಳ್ಳೋಣ, ನಾವು ಕೂಡ ಹೋರಾಟ ಮಾಡೋಣ. ಅದನ್ನು ಹೊರತುಪಡಿಸಿ ಅನಾವಶ್ಯಕವಾಗಿ ಜಾತಿ ಜಾತಿ ಎಂದು ಬೇರೆ ಧರ್ಮದವರ, ಬೇರೆ ಜಾತಿಯವರ ಬಗ್ಗೆ ಕೀಳಾಗಿ ಕಾಣಬೇಡಿ. ಒಕ್ಕಲಿಗ ಸಮುದಾಯದಲ್ಲೂ ಬಡವರಿದ್ದಾರೆ, ಲಿಂಗಾಯತ, ಬ್ರಾಹ್ಮಣ ಸಮುದಾಯದಲ್ಲೂ ಬಡವರಿದ್ದಾರೆ. ಅವರಿಗೆ ನ್ಯಾಯ ಸಿಗೋದ್ ಬೇಡ್ವಾ? ಎಂದು ಶಿವರಾಮ್ ಪ್ರಶ್ನಿಸಿದರು.

ನಿಖಿಲ್ ಕುಮಾರಸ್ವಾಮಿ ನಮ್ಮ ಮನೆಗೆ ಯಾರೂ ಬಂದಿಲ್ಲ ಎಂದು ಈಗ ಹೇಳುವ ನೀವು, ಆಗಲೇ ಯಾಕೆ ಸಂಬಂಧಪಟ್ಟವರನ್ನು ಪ್ರಶ್ನೆ ಮಾಡಲಿಲ್ಲ. ಈಗ ನಮ್ಮ ಮನೆಗೆ ಬಂದಿಲ್ಲ ಅಂತ ವಿರೋಧ ಮಾಡ್ತಿದಿರಾ? ನೀವು ಶಾಸಕರಾಗಲು ಅನ್ಫಿಟ್ ಎಂದು ಅವರು ಆಕ್ರೋಶ ಹೊರ ಹಾಕಿದರು.

ಈ ವೇಳೆ ಮಾತನಾಡಿದ ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್, ಈ ವರದಿ ಶೇ.95 ರಷ್ಟು ವಾಸ್ತವದಿಂದ ಕೂಡಿದ್ದು, ಕೆಲವೊಂದು ಲೋಪದೋಷಗಳು ಇರಬಹುದು. ಅದನ್ನು ಪರಿಶೀಲನೆ ಮಾಡಿ ಸರಿಪಡಿಸುವ ಪ್ರಯತ್ನ ಆಗುತ್ತದೆ. ಇದರಿಂದ ಯಾವುದೇ ಸಮಾಜಕ್ಕೂ ಅನ್ಯಾಯ ಆಗಲ್ಲ. ಪ್ರತಿಯೊಬ್ಬ ಹಿಂದುಳಿದವರು, ಬಡವರಿಗೂ ನ್ಯಾಯ ಸಿಗುತ್ತದೆ. ರಾಜ್ಯದಲ್ಲಿ ಉಪ್ಪಾರ ಸಮಾಜದವರು 15 ರಿಂದ 20 ಲಕ್ಷ ಜನಸಂಖ್ಯೆ ಇದ್ದಾರೆ, ಆದರೆ ಈ ವರದಿಯಲ್ಲಿ ಏಳೂವರೆ ಲಕ್ಷ ಎಂದು ನಮೂದಿಸಲಾಗಿದ್ದು, ಇದನ್ನು ಕೂಡ ಪರಿಶೀಲಿಸಿ, ಎಲ್ಲಾ ಸಮಾಜಕ್ಕೂ ನ್ಯಾಯ ಒದಗಿಸಿಕೊಡಿ ಎಂದು ನಾವು ಕೂಡ ಮನವಿ ಮಾಡುತ್ತೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕುಂಬಾರರ ಸಂಘದ ಅಧ್ಯಕ್ಷ ಎನ್.ಎಸ್.ಪ್ರಕಾಶ್, ಜಿಲ್ಲಾ ಮಡಿವಾಳ ಸಂಘದ ಉಪಾಧ್ಯಕ್ಷ ಕೇಶವ್ ವಿಜಿ, ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್, ಕರ್ನಾಟಕ ದಲಿತ ಚಳುವಳಿ ನವ ನಿರ್ಮಾಣ ವೇದಿಕೆ ಹೊರಳವಾಡಿ ನಂಜುಂಡಸ್ವಾಮಿ ಹಾಗೂ ಬಂಗವಾದಿ ನಾರಾಯಣಪ್ಪ, ಹಿಂದುಳಿದ ವರ್ಗಗಳ ಮುಖಂಡರಾದ ಲೋಕೇಶ್‌ಕುಮಾರ್ ಮಾದಾಪುರ, ಪರಿಶಿಷ್ಟ ಪಂಗಡಗಳ ರಾಜ್ಯ ಉಪಾಧ್ಯಕ್ಷ ದಿನೇಶ್ ಶಿಂಷಾ ಉಪಸ್ಥಿತರಿದ್ದರು.

ದೇಶ – ವಿದೇಶ

ಮಾನವೀಯ ವಲಯದ ಮೇಲೆ ಇಸ್ರೇಲ್ ಬಾಂಬ್ ದಾಳಿ: ಕನಿಷ್ಠ 90 ಮಂದಿ ಸಾವು



ದೀರ್ ಅಲ್–ಬಾಲಾಹ್: ಕಳೆದ 48 ಗಂಟೆಗಳಲ್ಲಿ ಗಾಜಾ ಮೇಲೆ ಇಸ್ರೇಲ್ ನಡೆಸಿರುವ ದಾಳಿಯಲ್ಲಿ ಮಕ್ಕಳು ಸೇರಿದಂತೆ 90ಕ್ಕೂ ಹೆಚ್ಚು ಮಂದಿ ಪ್ಯಾಲೆಸ್ಟೀನಿಯನ್ನರು ಸಾವನ್ನಪ್ಪಿದ್ದಾರೆ. ಮಾನವೀಯ ವಲಯ ಎಂದು ಗುರುತಿಸಿದ ಸ್ಥಳದಲ್ಲಿ ಆಶ್ರಯ ಪಡೆದಿದ್ದ ಮಕ್ಕಳು, ಮಹಿಳೆಯರು ಸೇರಿದಂತೆ 15 ಮಂದಿ ಒಂದೇ ರಾತ್ರಿ ಮೃತಪಟ್ಟಿದ್ದಾರೆ. ದಕ್ಷಿಣ ನಗರ ಖಾನ್ ಯೂನಿಸ್‌ನಲ್ಲಿ ಕನಿಷ್ಠ 11 ಜನರು ಸಾವನ್ನಪ್ಪಿದ್ದಾರೆ, ಸ್ಥಳಾಂತರಗೊಂಡ ಲಕ್ಷಾಂತರ ಜನರು ಮವಾಸಿ ಪ್ರದೇಶದ ಟೆಂಟ್‌ನಲ್ಲಿ ವಾಸವಿದ್ದು, ಇಸ್ರೇಲ್ ಇದನ್ನು ಮಾನವೀಯ ವಲಯವೆಂದು ಗುರುತಿಸಿದೆ. ರಫಾ ನಗರದಲ್ಲಿ ನಡೆದ ಪ್ರತ್ಯೇಕ ದಾಳಿಗಳಲ್ಲಿ ತಾಯಿ ಮತ್ತು ಮಗಳು ಸೇರಿದಂತೆ ಇತರ ನಾಲ್ವರು ಜನರು ಸಾವನ್ನಪ್ಪಿದ್ದಾರೆ. ಹಮಾಸ್ ವಿರುದ್ಧ ಯುದ್ಧ ಆರಂಭಿರುವ ಇಸ್ರೇಲ್, ಗಾಜಾ ಪಟ್ಟಿಯನ್ನು ವಶಕ್ಕೆ ಪಡೆಯಬೇಕೆಂದು ಹಠಕ್ಕೆ ಬಿದ್ದಿದೆ. ಇದರಂತೆ ಗಾಜಾ ಮೇಲೆ ತನ್ನ ದಾಳಿಯನ್ನು ತೀವ್ರವಗೊಳಿಸಿದೆ. ದಾಳಿ ಪರಿಣಾಮ ಎಲ್ಲಿ ನೋಡಿದರೂ ಕುಸಿದು ಬಿದ್ದಿರುವ ಕಟ್ಟಡ ಹಾಗೂ ಕಟ್ಟಡಗಳ ಅವಶೇಷದ ಕೆಳಗೆ ಶವಗಳ ರಾಶಿಗಳು ಕಂಡು ಬರುತ್ತಿದೆ.

ಮಹಿಳಾ ಪೊಲೀಸ್ ಮೇಲೆ ಅತ್ಯಾಚಾರ; ಸೇನಾಧಿಕಾರಿ ವಿರುದ್ಧ ಪ್ರಕರಣ ದಾಖಲು

ಭೋಪಾಲ್: ಮದುವೆಯ ನೆಪದಲ್ಲಿ ಮಹಿಳಾ ಪೊಲೀಸ್ ಪೇದೆಯೊಬ್ಬರ ಮೇಲೆ ಸೇನಾ ಅಧಿಕಾರಿ ಅತ್ಯಾಚಾರವಸೆಗಿರುವ ಘಟನೆ ಮಧ್ಯ ಪ್ರದೇಶದ ಭೋಪಾಲ್‌ನಲ್ಲಿ ನಡೆದಿದೆ. ಈ ಸಂಬಂಧ ಪ್ರಸ್ತುತ ಉತ್ತರಾಖಂಡದ ಹಲ್ದ್ವಾನಿಯಲ್ಲಿ ನಿಯೋಜನೆ ಗೊಂಡಿರುವ ಲೆಫ್ಟಿನೆಂಟ್ ಕರ್ನಲ್ ವರುಣ್ ಪ್ರತಾಪ್ ಸಿಂಗ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ 42 ವರ್ಷದ ಮಹಿಳಾ ಪೊಲೀಸ್ ಪೇದೆ ನೀಡಿದ ದೂರಿನ ಆಧಾರದ ಮೇಲೆ ಸೇನಾ ಅಧಿಕಾರಿ ವಿರುದ್ಧ ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ಸೆಕ್ಷನ್ 69 (ಮದುವೆಯ ಸುಳ್ಳು ಭರವಸೆ ನೀಡಿ ಲೈಂಗಿಕ ಸಂಭೋಗ) ಮತ್ತು 351 (2) (ಅಪರಾಧ ಬೆದರಿಕೆ) ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ. ಈ ಕುರಿತು ಪ್ರತಿಕ್ರಿಯಿಸಿದ ಭೋಪಾಲ್ ಮಹಿಳಾ ಪೊಲೀಸ್ ಭದ್ರತಾ ಸಹಾಯಕ ಕಮಿಷನರ್ ನಿಧಿ ಸಕ್ಸೇನಾ, ಆರೋಪಿ ಭಾರತೀಯ ಸೇನೆಯಲ್ಲಿ ಲೆಫ್ಟಿನೆಂಟ್ ಕರ್ನಲ್ ಆಗಿದ್ದು, ಆತ ಕರ್ತವ್ಯ ನಿರ್ವಹಿಸುತ್ತಿರುವ ಸೇನಾ ಘಟಕಕ್ಕೆ ಅತ್ಯಾಚಾರ ಕುರಿತು ಮಾಹಿತಿ ನೀಡಿದ್ದೇವೆ. ಅವರು ವಿಚಾರಣೆಗೆ ಬಂದರೆ ಒಳ್ಳೆಯದು. ಇಲ್ಲದಿದ್ದರೆ ಬಂಧನ ಕಾರ್ಯವಿಧಾನವನ್ನು ಅನುಸರಿಸಬೇಕಾಗುತ್ತದೆ ಎಂದರು.

ಕೆನಡಾದಲ್ಲಿ ಅಪರಿಚಿತನ ಗುಂಡೇಟಿಗೆ ಭಾರತೀಯ ವಿದ್ಯಾರ್ಥಿನಿ ಬಲಿ



ಹ್ಯಾಮಿಲ್ಟನ್: ಕೆನಡಾದ ಒಂಟಾರಿಯೊ ಪ್ರಾಂತ್ಯದ ಹ್ಯಾಮಿಲ್ಟನ್‌ನಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಭಾರತೀಯ ವಿದ್ಯಾರ್ಥಿನಿ ದಾರುಣವಾಗಿ ಸಾವನ್ನಪ್ಪಿದ್ದಾಳೆ. ಈ ಘಟನೆಯಲ್ಲಿ ವಿದ್ಯಾರ್ಥಿನಿ ಆಕಸ್ಮಿಕವಾಗಿ ಗುಂಡಿಗೆ ಗುರಿಯಾಗಿದ್ದಾಳೆ.

ಪಂಜಾಬ್‌ನ ತರಣ್ ಜಿಲ್ಲೆಯ ಗೋಯಿಂಡ್ವಾಲ್ ಸಾಹಿಬ್‌ನ ಧುಂಡಾ ಗ್ರಾಮದ 21 ವರ್ಷದ ಭಾರತೀಯ ವಿದ್ಯಾರ್ಥಿನಿ ಹರ್ಸಿಮ್ರತ್ ಕೌರ್ ರಾಂಧವಾ, ಕೆನಡಾದ ಒಂಟಾರಿಯೊದ ಹ್ಯಾಮಿಲ್ಟನ್‌ನಲ್ಲಿರುವ ಬಸ್ ನಿಲ್ದಾಣದಲ್ಲಿ ಬಸ್ ಕಾಯುತ್ತಿದ್ದಾಗ ಗುರಿ ತಪ್ಪಿದ ಗುಂಡು ತಗುಲಿ ಸಾವನ್ನಪ್ಪಿದ್ದಾಳೆ. ಹ್ಯಾಮಿಲ್ಟನ್‌ನ ಕಿಂಗ್ ಸ್ಟ್ರೀಟ್‌ನಲ್ಲಿ ಗುರುವಾರ ರಾತ್ರಿ ಸಂಭವಿಸಿದ ಈ ಗುಂಡಿನ ದಾಳಿಯಲ್ಲಿ ಮೊಹಾಕ್ ಕಾಲೇಜಿನಲ್ಲಿ ಓದಿತ್ತಿದ್ದ 22 ವರ್ಷದ ಭಾರತೀಯ ವಿದ್ಯಾರ್ಥಿನಿ ಹರ್ಸಿಮ್ರತ್ ರಾಂಧವಾಗೆ ಗುಂಡು ತಗುಲಿದೆ. ಗಾಯಗೊಂಡ ವಿದ್ಯಾರ್ಥಿಯನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾಳೆ. ಪ್ರಾಥಮಿಕ ತನಿಖೆಯಲ್ಲಿ ಕಪ್ಪು ಬಣ್ಣದ ಕಾರಿನ ಪ್ರಯಾಣಿಕನೊಬ್ಬ ಬಿಳಿ ಸೆಡಾನ್ ಕಾರಿನಲ್ಲಿದ್ದವರ ಮೇಲೆ ಗುಂಡು ಹಾರಿಸಿದ್ದಾನೆ ಎಂದು ತಿಳಿದುಬಂದಿದೆ.


ಈಶಾನ್ಯ ದೆಹಲಿಯ ಮುಸ್ತಫಾಬಾದ್‌ನಲ್ಲಿ ಕಟ್ಟಡ ಕುಸಿತ: ಸಾವಿನ ಸಂಖ್ಯೆ 11ಕ್ಕೆ ಏರಿಕೆ



ನವದೆಹಲಿ: ಈಶಾನ್ಯ ದೆಹಲಿಯ ಶಕ್ತಿ ವಿಹಾರ್ ಪ್ರದೇಶದಲ್ಲಿ ಶನಿವಾರ ಬೆಳಗ್ಗೆ ಬಹುಮಹಡಿ ವಸತಿ ಕಟ್ಟಡವೊಂದು ಕುಸಿದು ಬಿದ್ದಿದ್ದು, ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 11ಕ್ಕೆ ಏರಿಕೆಯಾಗಿದೆ ಮತ್ತು 11 ಜನ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶನಿವಾರ ಬೆಳಗಿನ ಜಾವ 3 ಗಂಟೆ ಸುಮಾರಿಗೆ ಮುಸ್ತಫಾಬಾದ್ ಪ್ರದೇಶದಲ್ಲಿ 20 ವರ್ಷ ಹಳೆಯ 4 ಅಂತಸ್ತಿನ ಕಟ್ಟಡ ಕುಸಿದು ಬಿದ್ದಿದ್ದು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ, ಅಗ್ನಿಶಾಮಕ ದಳ, ದೆಹಲಿ ಪೊಲೀಸರು ಮತ್ತು ಇತರ ಸ್ವಯಂಸೇವಕರ ತಂಡಗಳು 12 ಗಂಟೆಗಳಿಗೂ ಹೆಚ್ಚು ಕಾಲ ರಕ್ಷಣಾ ಕಾರ್ಯಾಚರಣೆ ನಡೆಸಿವೆ. ನೆಲ ಮಹಡಿಯಲ್ಲಿರುವ 2–3 ಅಂಗಡಿಗಳಲ್ಲಿ ನಡೆಯುತ್ತಿದ್ದ ನವೀಕರಣ ಕಾರ್ಯ ಕಟ್ಟಡ ಕುಸಿತಕ್ಕೆ ಕಾರಣವಾಗಿರಬಹುದು ಎಂದು ಪೊಲೀಸ್ ಮೂಲವೊಂದು ತಿಳಿಸಿದೆ. ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಘಟನೆಯ ಕುರಿತು ತನಿಖೆಗೆ ಆದೇಶಿಸಿದ್ದಾರೆ. ಮುಸ್ತಫಾಬಾದ್‌ನಲ್ಲಿ ಸಂಭವಿಸಿದ ದುರಂತದಿಂದ ತೀವ್ರ ದುಃಖವಾಗಿದೆ. ಘಟನೆಯ ಬಗ್ಗೆ ತನಿಖೆಗೆ ಆದೇಶ ನೀಡಲಾಗಿದೆ ಎಂದು ದೆಹಲಿ ಸಿಎಂ ಹೇಳಿದ್ದಾರೆ.

ಜಗತ್ತಿನಲ್ಲೇ ಮೊದಲು; ಕೈದಿಗಳಿಗಾಗಿ ಜೈಲಿನಲ್ಲೇ ಸೆಕ್ಸ್ ರೂಂ ತೆರೆದ ಇಟಲಿ



ರೋಮ್: ಜೈಲು ಕೈದಿಗಳಿಗೆ ಖಾಸಗಿ ಭೇಟಿ ಮತ್ತು ಏಕಾಂತ ಸಾಂವಿಧಾನಿಕ ಹಕ್ಕು ಎಂಬ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಮಹತ್ವದ ಹೆಜ್ಜೆಯನ್ನಿಟ್ಟಿರುವ ಇಟಲಿ ಸರ್ಕಾರ ಕೈದಿಗಳಿಗಾಗಿ ಜೈಲಿನಲ್ಲೇ ಸೆಕ್ಸ್ ರೂಂ ತೆರೆದಿದೆ.

ಕೈದಿಗಳ ನೋಡಲು ಬರುವ ಸಂಗಾತಿಗಳು ಅಥವಾ ಹೊರಗಿನಿಂದ ಭೇಟಿ ನೀಡುವ ಪಾಲುದಾರರೊಂದಿಗೆ ಕೈದಿಗಳು ಆಪ್ತ ಸಭೆಗಳನ್ನು ನಡೆಸಲು ಇಟಲಿ ಸರ್ಕಾರ ಇದೇ ಮೊದಲ ಬಾರಿಗೆ ಸೆಕ್ಸ್ ರೂಂಗಳನ್ನು ತೆರೆದಿದೆ. ಇಟಲಿಯ ಮೊದಲ ಕೈದಿಗಳ ಲೈಂಗಿಕ ಕೊಠಡಿ ಶುಕ್ರವಾರ ಕಾರ್ಯರೂಪಕ್ಕೆ ಬಂದಿದೆ. ಮಧ್ಯ ಉಂಬ್ರಿಯಾ ಪ್ರದೇಶದ ಜೈಲಿನಲ್ಲಿರುವ ಈ ಸೆಕ್ಸ್ ರೂಂ ತೆರೆಯಲಾಗಿದ್ದು, ಈ ವಿಶೇಷ ಸೌಲಭ್ಯದಲ್ಲಿ ಕೈದಿಯೊಬ್ಬನಿಗೆ ತನ್ನ ಮಹಿಳಾ ಸಂಗಾತಿಯಿಂದ ಭೇಟಿಗೆ ಅವಕಾಶ ನೀಡಲಾಯಿತು. ಕಳೆದ ವಾರ ಇಟಲಿ ಸರ್ಕಾರದ ನ್ಯಾಯ ಸಚಿವಾಲಯ ಕಳೆದ ವಾರ ಮಾರ್ಗಸೂಚಿಗಳನ್ನು ಹೊರಡಿಸಿತ್ತು. ಇದರ ಅನ್ವಯ ಜೈಲಿನಲ್ಲಿ ಏರ್ಪಡಿಸುವ ಸೆಕ್ಸ್ ರೂಂ ಅಥವಾ ಕೋಣೆಯ ಬಾಗಿಲು ಅನ್‌ಲಾಕ್ ಆಗಿರಬೇಕು, ಅಗತ್ಯವಿದ್ದರೆ ಜೈಲು ಸಿಬ್ಬಂದಿಗೆ ಮಧ್ಯಪ್ರವೇಶಿಸುವ ಸಾಧ್ಯತೆಯನ್ನು ನೀಡುತ್ತದೆ.

ಕಂಚಿ ಕಾಮಾಕ್ಷಿಯಮ್ಮ ಪ್ರತಿಷ್ಠಾಪನಾ ವಾರ್ಷಿಕೋತ್ಸವ



ಮಡಿಕೇರಿ,ಏ.20–ಮಡಿಕೇರಿಯ ನಾಲ್ಕು ಶಕ್ತಿ ದೇವತೆಗಳಲ್ಲಿ ಒಂದಾದ ಗೌಳಿ ಬೀದಿ ಶ್ರೀ ಕಂಚಿ ಕಾಮಾಕ್ಷಿಯಮ್ಮ ದೇವಾಲಯದ ಪುನರ್ ಪ್ರತಿಷ್ಠಾಪನಾ ವಾರ್ಷಿಕೋತ್ಸವವು ಶ್ರದ್ಧಾಭಕ್ತಿಯಿಂದ ನಡೆಯಿತು. ಕೇರಳದ ಶ್ರೀ ಈಶ್ವರ ನಂಬೂದರಿ ಅವರ ನೇತೃತ್ವದಲ್ಲಿ ಎರಡು ದಿನಗಳ ಕಾಲ ವಿವಿಧ ಧಾರ್ಮಿಕ ವಿಧಿ ವಿಧಾನಗಳು ನೆರವೇರಿತು.

ಶ್ರೀ ಮಹಾ ಗಣಪತಿ ಹೋಮ, ಐಕ್ಯ ಮತ್ಯ ಸುಕ್ತದ ಹೋಮ, ಕಳಸ ಪೂಜೆ, ದೇವಿಗೆ ಅಭಿಷೇಕ, ಅಲಂಕಾರ ಪೂಜೆ ಮತ್ತು ಮಹಾ ಮಂಗಳಾರತಿ ನೆರವೇರಿತು. ಬಳಿಕ ಭಕ್ತರಿಗೆ ಪ್ರಸಾದ ವಿತರಣೆ ಹಾಗೂ ಅನ್ನ ಸಂತರ್ಪಣೆ ನಡೆಯಿತು. ನಗರದ ವಿವಿಡೆಡೆಯಿಂದ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವರಿಗೆ ವಿಶೇಷ ಪೂಜೆ, ಪ್ರಾರ್ಥನೆ ಸಲ್ಲಿಸಿದರು.ವಾರ್ಷಿಕೋತ್ಸವದ ಅಂಗವಾಗಿ ದೇವಾಲಯ ಸಮಿತಿ ವತಿಯಿಂದ ಶ್ರೀ ಕಂಚಿ ಕಾಮಾಕ್ಷಿಯಮ್ಮ ಹಾಗೂ ಶ್ರೀ ಮುತ್ತು ಮಾರಿಯಮ್ಮ ದೇವಿಯ ಮೂಲ ವಿಗ್ರಹಗಳಿಗೆ ಸ್ವರ್ಣಕಾಸಿನ ಮಾಲೆಯನ್ನು ಸಮರ್ಪಿಸಲಾಯಿತು.

ಟಿ–20 ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ

ಮಡಿಕೇರಿ,ಏ.20– ಗೌಡ ಪ್ರೀಮಿಯರ್ ಲೀಗ್ ಲೆದರ್ ಬಾಲ್ ಟಿ–20 ಕ್ರಿಕೆಟ್ ಪಂದ್ಯಾವಳಿಗೆ ನಗರದ ಜನರಲ್ ಕೆ.ಎಸ್.ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಭಾನುವಾರ ವಿದ್ಯುಕ್ತ ಚಾಲನೆ ನೀಡಲಾಯಿತು.

ಇಂದಿನಿಂದ ಮೇ 4ರವರೆಗೆ ಗೌಡ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಯ ಪ್ರಶಸ್ತಿಗಾಗಿ 10 ಫ್ರಾಂಚೈಸಿ ತಂಡಗಳು ಪಾಲ್ಗೊಳ್ಳಲಿದ್ದು, ಪಂದ್ಯಾವಳಿಯಲ್ಲಿ ಕೊಡಗು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಒಕ್ಕಲಿಗ ಸಮುದಾಯದ ಅರೆಭಾಷೆ, ಕನ್ನಡ ಮತ್ತು ತುಳು ಭಾಷೆಯನ್ನಾಡುವ ಜನಾಂಗದವರಿಗೆ ನಡೆಯುತ್ತಿರುವುದು ವಿಶೇಷ.

ಸಮಾರಂಭವನ್ನು ಉದ್ಘಾಟಿಸಿದ ಮಾಜಿ ವಿಧಾನಸಭಾಧ್ಯಕ್ಷ ಕೆ.ಜಿ.ಬೋಪಯ್ಯ ಮಾತನಾಡಿ, ಜನಾಂಗ ಬಾಂಧವರು ಪರಸ್ಪರ ಪ್ರೀತಿ ವಿಶ್ವಾಸಗಳೊಂದಿಗೆ ಒಗ್ಗಟ್ಟನ್ನು ಕಂಡುಕೊಳ್ಳುವ ಮೂಲಕ ಇತರರಿಗೆ ಮಾದರಿಯಾಗಬೇಕೆಂದು ಕರೆ ನೀಡಿದರು.

ಪಂದ್ಯಾಟಗಳ ಆರಂಭಕ್ಕೆ ಚಾಲನೆ ನೀಡಿದ ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ, ಪ್ರಸಕ್ತ ದಿನಮಾನಗಳಲ್ಲಿ ಕೊಡಗಿನಲ್ಲಿ ವಿವಿಧ ಜನಾಂಗಗಳ ಹಲವಾರು ಕ್ರೀಡಾಕೂಟಗಳ ಆಯೋಜನೆಯಾಗುತ್ತಿದೆ. ಆ ಮೂಲಕ, ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವ ಕಾರ್ಯ ನಿಜಕ್ಕೂ ಮೆಚ್ಚುವಂತದ್ದು. ಇದರೊಂದಿಗೆ, ಜಿಲ್ಲೆಯ ಎಲ್ಲರೂ ಒಗ್ಗಟ್ಟಿನಿಂದ, ಪರಸ್ಪರ ವಿಶ್ವಾಸದಿಂದ ಮುನ್ನಡೆದರೆ ಜಿಲ್ಲೆಯ ಪ್ರಗತಿ ಸಾಧ್ಯವಾಗಲಿದೆ ಎಂದು ಅಭಿಪ್ರಾಯಿಸಿದರು.



ಟಿ–20 ಕ್ರಿಕೆಟ್ ಪಂದ್ಯಾವಳಿಗೆ ನಗರದ ಜನರಲ್ ಕೆ.ಎಸ್.ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಭಾನುವಾರ ವಿದ್ಯುಕ್ತ ಚಾಲನೆ ನೀಡಲಾಯಿತು.

ಕೊಡಗು ಗೌಡ ಸಮಾಜಗಳ ಒಕ್ಕೂಟದ ಮಾಜಿ ಅಧ್ಯಕ್ಷ ಸೂರ್ತಲೆ ಸೋಮಣ್ಣ ಮಾತನಾಡಿ, ವಾರ್ಷಿಕವಾಗಿ ನಡೆಯುತ್ತಿರುವ ಗೌಡ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿ ಆಯೋಜನೆಗೆ ಸಹಕಾರಿಯಾಗುವಂತೆ ಜಿಲ್ಲೆಯ ಶಾಸಕರ ಮೂಲಕ ಸರ್ಕಾರದಿಂದ ಅಗತ್ಯ ಅನುದಾನ ದೊರಕಿಸಿಕೊಡಲು ಕಾಂಗ್ರೆಸ್ ಜಿಲ್ಲಾಧ್ಯಕ್ಷರು ಮುಂದಾಗಬೇಕೆಂದು ಮನವಿ ಮಾಡಿದರು.

ಕೊಡಗು ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಆನಂದ ಕರಂದ್ಲಾಜೆ, ಕೊಡಗು ಗೌಡ ವಿದ್ಯಾಸಂಘದ ಅಧ್ಯಕ್ಷ ಅಂಬೆಕಲ್ ನವೀನ್ ಕುಶಾಲಪ್ಪ ಕೆ.ಮಾನಾಡಿ, ಗೌಡ ಜನಾಂಗ ಬಾಂಧವರ ಕ್ರಿಕೆಟ್ ಹಬ್ಬಕ್ಕೆ ಸರ್ಕಾರ ಅಗತ್ಯ ಆರ್ಥಿಕ ನೆರವನ್ನು ಒದಗಿಸಲು ಮುಂದಾಗಬೇಕೆಂದು ಮನವಿ ಮಾಡಿದರು. ಕೊಡಗು ಗೌಡ ಸಮಾಜದ ಅಧ್ಯಕ್ಷ ಪೇರಿಯನ ಜಯಾನಂದ, ಮಡಿಕೇರಿ ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷರಾದ ವಿ.ಜಿ. ಮೋಹನ್ ಮಾತನಾಡಿದರು.

ಪಂದ್ಯಾವಳಿ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಗೌಡ ಯುವ ವೇದಿಕೆ ಅಧ್ಯಕ್ಷ ಪಾಣತ್ತಲೆ ಜಗದೀಶ್ ವಹಿಸಿದ್ದರು. ವೇದಿಕೆಯಲ್ಲಿ ದಕ್ಷಿಣ ಕನ್ನಡ, ಕೊಡಗು ಸಮಾಜಗಳ ಅಭಿವೃದ್ಧಿ ಸಂಘದ ಅಧ್ಯಕ್ಷ ಪೈಕೇರ ಮನೋಹರ್ ಮಾದಪ್ಪ, ರೋಟರಿ ಮಿಸ್ಟಿ ಹಿಲ್ಸ್ ಅಧ್ಯಕ್ಷ ಪೊನ್ನಚ್ಚನ ಮಧು ಸೋಮಣ್ಣ, ನಗರಸಭಾ ಸದಸ್ಯ ಎಸ್.ಸಿ. ಸತೀಶ್ ಉಪಸ್ಥಿತರಿದ್ದರು.

ಹುಲಿ ದಾಳಿ: ಪ್ರಾಣಾಪಾಯದಿಂದ ಪಾರಾದ ಹಸು



ಗೋಣಿಕೊಪ್ಪ,ಏ.20– ಪೊನ್ನಂಪೇಟೆ ತಾಲೂಕು ಬಾಳೆಲೆ ಹೋಬಳಿ ಸುಳುಗೋಡು ಗ್ರಾಮದ ಬೆಳೆಗಾರ ಚಿಂಡಮಾಡ ಜಗನ್ ರವರ ತೋಟದ ಮನೆ ಪಕ್ಕದಲ್ಲಿ ಕಟ್ಟಿ ಹಾಕಿದ್ದ ಹಸುವಿನ ಮೇಲೆ ಶನಿವಾರ ಸಂಜೆ ಹುಲಿ ದಾಳಿ ನಡೆಸಿದೆ. ಇದರಿಂದ ಕುತ್ತಿಗೆ ಭಾಗಕ್ಕೆ ಗಾಯವಾಗಿದ್ದು, ಹಸು ಪ್ರಾಣಾಪಾಯದಿಂದ ಪಾರಾಗಿದೆ.

ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ಸ್ಥಳಕ್ಕೆ ಭೇಟಿ ನೀಡಿ ಹಸುವಿಗೆ ಸೂಕ್ತ ಚಿಕಿತ್ಸೆ ನೀಡಲಾಗಿರುವ ಬಗ್ಗೆ ಪಶು ವೈದ್ಯ ಇಲಾಖೆಯವರಿಂದ ವಿವರಣೆ ಪಡೆದರು. ತಿತಿಮತಿ ವಲಯ ಅರಣ್ಯ ಅಧಿಕಾರಿ ದೇವರಾಜ್ ಅವರಿಗೆ ಕೂಡಲೇ ಅರಣ್ಯದಂಚಿನಲ್ಲಿರುವ ಗ್ರಾಮಗಳಲ್ಲಿ ಕೂಂಬಿಂಗ್ ಆರಂಭಿಸಿ ಹುಲಿಯನ್ನು ಅರಣ್ಯಕ್ಕೆ ಅಟ್ಟಲು ಕಾರ್ಯಚರಣೆ ಕೈಗೊಳ್ಳುವಂತೆ ಸೂಚನೆ ನೀಡಿದರು. ತೆರಾಲು ಗ್ರಾಮದಲ್ಲಿ ಎರಡನೇ ದಿನದ ಕಾರ್ಯಚರಣೆ ನಡೆದಿದ್ದು ಹುಲಿಯ ಚಲನವಲನ ಹಾಗೂ ಅದರ ಹೆಜ್ಜೆ ಗುರುತು ಪತ್ತೆಯಾಗಿಲ್ಲ. ಭಾನುವಾರ ದಿ. ಅನಿಲ್ ಮಲ್ಹೋತ್ರ ಅವರ ಸುಮಾರು 250 ರಿಂದ 300 ಎಕರೆ ಕಾಡಿನ ಜಾಗದಲ್ಲಿ ಕೂಂಬಿಂಗ್ ನಡೆದಿದೆ. ಸೋಮವಾರ ಸಹ ಕಾರ್ಯಚರಣೆ ಮುಂದುವರೆಯಲಿದೆ ಎಂದರು.

ಮರ ಬಿದ್ದು ನಂಜನಗೂಡು ಮೂಲದ ಕಾರ್ಮಿಕ ಬಲಿ

ಮಡಿಕೇರಿ: ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕನ ಮೇಲೆ ಮರ ಬಿದ್ದ ಪರಿಣಾಮ ಆತ ಸ್ಥಳದಲ್ಲಿಯೇ ಮೃತಪಟ್ಟ ಘಟನೆ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಮೈಸೂರು ಜಿಲ್ಲೆ ನಂಜನಗೂಡು ಮೂಲದ ಕಾರ್ಮಿಕ ಮಣಿ ಎಂಬಾತ ಧಾರುಣವಾಗಿ ಮೃತಪಟ್ಟಿರುವ ದುರ್ದೈವಿ. ಚೆಟ್ಟಳ್ಳಿ ಕಾಫಿ ಬೋರ್ಡ್ ಸಮೀಪದಲ್ಲಿರುವ ತೋಟದಲ್ಲಿ ಇತರ ಕಾರ್ಮಿಕರು ಮರ ಕಪಾತು ಕೆಲಸ ಮಾಡುತ್ತಿದ್ದ ವೇಳೆ ಕೆಳ ಭಾಗದಲ್ಲಿದ್ದ ಕಾರ್ಮಿಕ ಮಣಿ ಅವರ ಮೇಲೆ ಕತ್ತರಿಸಿದ ಮರ ಬಿದ್ದಿದೆ. ಪರಿಣಾಮ ಮಣಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ಕೈಗೊಂಡಿದ್ದಾರೆ.

ದಾವಣಗೆರೆಯಲ್ಲಿ ಸಾಹಿತ್ಯ ಸಿರಿ ಪ್ರಶಸ್ತಿ ಪ್ರದಾನ

ಮಡಿಕೇರಿ,ಏ.20– ಕೊಡಗಿನ ಸಾಹಿತಿ ಟಿ.ಶೆಟ್ಟಿಗೇರಿಯ ಉಳುವಂಗಡ ಕಾವೇರಿ ಉದಯ ಅವರಿಗೆ ದಾವಣಗೆರೆಯಲ್ಲಿ ಕನ್ನಡ ಬಹುಭಾಷಾ ಸಾಹಿತ್ಯ ಸಿರಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ವಿದ್ಯಾಧರ ಕನ್ನಡ ಪ್ರತಿಷ್ಠಾನ, ದಾವಣಗೆರೆ ಕನ್ನಡ ಸಾಹಿತ್ಯ ಪರಿಷತ್, ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್, ಸ್ಫೂರ್ತಿ ಪ್ರಕಾಶನ ತೆಲಿಗಿ, ಜ್ಞಾನ ಪ್ರಕಾಶನ ಮತ್ತು ಜ್ಞಾನ ಪ್ರಕಾಶನ ಸಂಸ್ಥೆಯ ವತಿಯಿಂದ ಮಾತೋಶ್ರೀ ಜಾನಕಿಬಾಯಿ ರಂಗರಾವ ಮುತಾಲಿಕ ದೇಸಾಯಿ ಸಂಸ್ಮರಣೆಯ ಅಂಗವಾಗಿ ದಾವಣಗೆರೆಯ ವಿದ್ಯಾನಗರದ ಕುವೆಂಪು ಕನ್ನಡ ಭವನದಲ್ಲಿ ನಡೆದ ಕನ್ನಡ ನುಡಿತೇರು ಕಾರ್ಯಕ್ರಮದಲ್ಲಿ ವಿದ್ಯಾಧರ ಕನ್ನಡ ಪ್ರತಿಷ್ಠಾನದ ಅಧ್ಯಕ್ಷ ವಿದ್ಯಾಧರ ಮುತಾಲಿಕ ದೇಸಾಯಿ ಅವರು ಉಳುವಂಗಡ ಕಾವೇರಿ ಉದಯ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ದಾವಣಗೆರೆಯ ಸ್ಫೂರ್ತಿ ಪ್ರಕಾಶನದ ಅಧ್ಯಕ್ಷ ಎಂ.ಬಸವರಾಜ್ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮವನ್ನು ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ ಉದ್ಘಾಟಿಸಿದರು.



ಉಳುವಂಗಡ ಕಾವೇರಿ ಉದಯ ಅವರಿಗೆ ಸಾಹಿತ್ಯ ಸಿರಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮುದ್ದಂಡ ಕಪ್ ಹಾಕಿ ಉತ್ಸವ; ಮುಂದಿನ ಹಂತಕ್ಕೆ ಪ್ರವೇಶ

ಮಡಿಕೇರಿ,ಏ.20– ಮುದ್ದಂಡ ಕಪ್ ಹಾಕಿ ಉತ್ಸವದಲ್ಲಿ ಇಂದು ನಡೆದ ಪಂದ್ಯಾವಳಿಯಲ್ಲಿ ಕೂತಂಡ, ಅಮ್ಮಣಿಚಂಡ, ಮಂಡೇಪಂಡ, ಸಣ್ಣುವಂಡ, ಕಾಂಡಂಡ, ಕರವಂಡ ತಂಡಗಳು ಮುನ್ನಡೆ ಸಾಧಿಸಿ ಮುಂದಿನ ಹಂತಕ್ಕೆ ಪ್ರವೇಶ ಪಡೆದಿದೆ.

ಇಂದಿನ ಪಂದ್ಯಾವಳಿ : ಮುದ್ದಂಡ ಹಾಕಿ ಉತ್ಸವ 2025ರ ಪ್ರಯುಕ್ತ ಏ.21ರಂದು '5–ಎ ಸೈಡ್ ವುಮೆನ್ಸ್' ಹಾಕಿ ಪಂದ್ಯಾವಳಿ ನಡೆಯಲಿದ್ದು, ಮೈದಾನ–2ರಲ್ಲಿ ಬೆಳಿಗ್ಗೆ 9:30 ಗಂಟೆಗೆ ತಾತಂಡ–ಪಾಂಡಿರ(ಹೆಬ್ಬೆಟ್ಟಗೇರಿ), 10 ಗಂಟೆಗೆ ಕಾಂಡಂಡ–ಬೊವ್ವೇರಿಯಂಡ, 10:30 ಚೆಪ್ಪುಡಿರ–ಪಾಳೆಯಂಡ, 11 ಗಂಟೆಗೆ ಮಾಳೇಟಿರ(ಕೆದಮುಳ್ಳೂರು)–ಅಮ್ಮಾಟಂಡ, 11:30 ಮುಕ್ಕಾಟಿರ(ಹರಿಹರ)–ಕೇಚೇಟಿರ, ಮಧ್ಯಾಹ್ನ 12 ಗಂಟೆಗೆ ಬಿದ್ದಾಟಂಡ–ಚೋಯಮಾಡಂಡ, 12:30 ಕೊಟ್ಟಂಗಡ–ನಾಪಂಡ, 1:30 ಚಂದಂಗಡ–ಕುಪ್ಪಂಡ(ಕೈಕೇರಿ), 2 ಗಂಟೆಗೆ ಮಾಚಿಮಂಡ–ಚೇಂದಿರ, 2:30 ಚೌರೀರ(ಹೊದವಾಡ)–ಮನೆಯಪಂಡ, 3 ಗಂಟೆಗೆ ಮೇವಡ–ಕಾಯಪಂಡ, 3:30 ಮುರುವಂಡ–ಅಚ್ಚಪಂಡ, 4ಕ್ಕೆ ತೆಕ್ಕಡ–ಕುಟ್ಟಂಡ (ಕಾರ್ಮಾಡ್), 4:30 ಬಲ್ಲಂಡ–ಚೇನಂಡ, 5 ಗಂಟೆಗೆ ಕುಟ್ಟಂಡ(ಮಾದಾಪುರ)–ಬೈರಾಜಂಡ 5:30 ಪರದಂಡ–ಪಾಲಂದಿರ ತಂಡಗಳ ನಡುವೆ ಪಂದ್ಯಾಟ ನಡೆಯಲಿದೆ.



ಅಮ್ಮಣಿಚಂಡ–ಬೊವ್ವೇರಂಡ ತಂಡಗಳು ನಡುವಿನ ಪಂದ್ಯಾಟ.

ವಕೀಲ ಗೋಪಾಲಕೃಷ್ಣ ಕಾಮತ್ ನಿಧನ



ವಿರಾಜಪೇಟೆ, ಏ.20– ನಗರದ ಜೈನರ ಬೀದಿಯ ನಿವಾಸಿ ಬಸವೇಶ್ವರ ದೇವಸ್ಥಾನದ ಮುಖ್ಯಸ್ಥರೂ ಹಿರಿಯ ವಕೀಲ ಎನ್.ಗೋಪಾಲಕೃಷ್ಣ ಕಾಮತ್ (86) ನಿಧನ ಹೊಂದಿದ್ದಾರೆ.

ಕೆಲ ದಿನಗಳಿಂದ ಅನಾರೋಗ್ಯದ ಕಾರಣದಿಂದಾಗಿ ಮಂಗಳೂರು ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಮೃತರ ಅಂತಿಮ ಸಂಸ್ಕಾರ ನಾಳೆ (ಸೋಮವಾರ) ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಮೇರಿಮಾತೆಯ ದೇವಾಲಯದಲ್ಲಿ ಶುಭ ಶುಕ್ರವಾರ ಆಚರಣೆ



ಮೇರಿಮಾತೆಯ ದೇವಾಲಯದ ಕ್ರೈಸ್ತ ಬಾಂಧವರು ಗುಡ್ ಫ್ರೈಡೆ ಆಚರಿಸಿದರು

ನಾಪೋಕ್ಲು, ಏ.20–ಸ್ಥಳೀಯ ಮೇರಿಮಾತೆಯ ದೇವಾಲಯದ ಕ್ರೈಸ್ತ ಬಾಂಧವರು ಯೇಸುಕ್ರಿಸ್ತರ ಮರಣ ಹಿಂಸೆ ಮತ್ತು ಶಿಲುಬೆಗೇರಿಸುವಿಕೆಯ ನೆನಪಿಗಾಗಿ ಶುಭ ಶುಕ್ರವಾರವನ್ನು ಪ್ರಾರ್ಥನೆ ಮತ್ತು ಉಪವಾಸದ ಮೂಲಕ ಗುಡ್ ಫ್ರೈಡೆಯನ್ನು ಆಚರಿಸಲಾಯಿತು.

ಧರ್ಮಗುರುಗಳಾದ ಜ್ಞಾನ ಪ್ರಕಾಶ್ ಮಾತನಾಡಿ ಈ ಶುಭ ಶುಕ್ರವಾರದಂದು ಏಸು ಕೊಟ್ಟಂತಹ ಆದರ್ಶವನ್ನು ಅನುಸರಿಸಿ ಅವರ ಹಂಗಿನಲ್ಲಿ ಬದುಕಬೇಕು ಕತ್ತಲೆಯಿಂದ ಬೆಳಕಿನೆಡೆಗೆ ನಡೆಯುವಂತಹ ಆ ಒಂದು ಕಾರ್ಯಕ್ಕೆ ನಾಂದಿ ಆಗಬೇಕೆಂದು ಹಿತ ನುಡಿದರು

ಈ ಸಂದರ್ಭ ಪಾಲನಾ ಸಮಿತಿಯ ಸದಸ್ಯರು, ಯುವಕ ಸಂಘದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಕ್ರೈಸ್ತ ಬಾಂಧವರು ಭಾಗವಹಿಸಿದ್ದರು.

ಭಯವಿಲ್ಲದೆ ತಮ್ಮ ಖಾಯಿಲೆ ಬಗ್ಗೆ ಹೇಳಿಕೊಳ್ಳಿ: ಡಾ.ಬಸವರಾಜೇಂದ್ರ



ದಿವಂಗತ ಡಾ|| ಎ.ಬಿ. ನಂಜಪ್ಪರವರ ಮೊದಲ ವರ್ಷದ ಪುಣ್ಯಸ್ಮರಣೆ.

ಆಲೂರು, ಏ.20– ವೈದ್ಯರ ಬಳಿ ಬರುವ ರೋಗಿಯು ಯಾವುದೆ ಭಯವಿಲ್ಲದೆ ತಮ್ಮ ಖಾಯಿಲೆ ಬಗ್ಗೆ ಹೇಳಿ ಗುಣಪಡಿಸಿಕೊಳ್ಳುವಂತೆ ಬಸವರಾಜೇಂದ್ರ ಆಸ್ಪತ್ರೆಯ ವ್ಯವಸ್ಥಾಪಕರಾದ ಡಾ|| ಬಸವರಾಜೇಂದ್ರ ಹೇಳಿದ್ದಾರೆ.

ಗ್ರಾಮದ ಬಸವ ಮಂದಿರದಲ್ಲಿ ಚಾರು ಸಾಂಸ್ಕೃತಿಕ ಪ್ರತಿಷ್ಠಾನ ಮೈಸೂರು ಹಾಗೂ ಭಾರತೀಯ ವೈದ್ಯಕೀಯ ಸಂಘದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ದಿವಂಗತ ಡಾ|| ಎ.ಬಿ. ನಂಜಪ್ಪ ರವರ ಮೊದಲ ವರ್ಷದ ಪುಣ್ಯಸ್ಮರಣೆ ಅಂಗವಾಗಿ ನಡೆದ ಉಚಿತ ಆರೋಗ್ಯ ಶಿಬಿರದಲ್ಲಿ ಮಾತನಾಡಿದ ಅವರು, ನಂಜಪ್ಪ ನನಗಿಂತಲು ಹಿರಿಯರಾದರೂ ಸ್ನೇಹಿತರಂತೆ ಇದ್ದರು ಬಡವರ ಬಗ್ಗೆ ಅಪಾರ ಕಾಳಜಿ ವಹಿಸಿದ್ದ ಅವರ ಆದರ್ಶಗಳು ಯುವ ವೈದ್ಯರುಗಳಿಗೆ ದಾರಿದೀಪವಾಗಲಿ ಎಂದರು.

ಶಿಬಿರದಲ್ಲಿ ಸ್ತ್ರೀರೋಗ ತಜ್ಞರುಗಳಾದ ಡಾ|| ಶ್ವೇತಬಸವರಾಜೇಂದ್ರ ಡಾ|| ಭಾರತಿ ಅರವಳಿಕೆ ತಜ್ಞರಾದ ಡಾ|| ಮಹೇಶ್ ಪ್ರಸೂತಿ ತಜ್ಞ ಡಾ|| ಮಲಿಶಾ ಪಿಕಾಡೋ ಮಕ್ಕಳತಜ್ಞ ಡಾ|| ಶಶಿಧರ ಮೋಳೆ ತಜ್ಞ ಡಾ|| ಮಹದೇವ ಪ್ರಸಾದ್ ಡಾ||ಕಿಶನ್ ಪಿಕಾಡೋ ನೇತ್ರ ತಜ್ಞರುಗಳಾದ ಡಾ|| ಭೂಮಿಕ ಡಾ|| ಸಮೃದ್ಧಿ ರಾಣೆ ಭಾಗವಹಿಸಿದ್ದರು

ಶಿಬಿರದಲ್ಲಿ ಶ್ರೀಮತಿ ಶೀಲಾ ಡಾ. ನಂಜಪ್ಪ ಆಲೂರು ಗ್ರಾಮದ ಗೌಡರಾರ ಶಿವರುದ್ರಪ್ಪ ರೈತ ಸಂಘದ ಮಹೇಶ್ ಪ್ರಭು ಮುಖಂಡರಾದ ನಂದೀಶ ಪ್ರದೀಪ್ ಚಂದ್ರು ಮಹೇಶ್ ಬಿಲ್ಲಾ ನಾಗರಾಜು ಮಂಜು ಪರಶಿವ ಕುಮಾರ್ ವೀರಭದ್ರ ಸ್ವಾಮಿ ಸಚ್ಚಿನ್ ಬಸವರಾಜು ಶಿವಾನಂದ ಮುಂತಾದವರು ಹಾಜರಿದ್ದರು.

ಸಚಿವ ಸಂಪುಟದ ಸಭೆಯ ಸ್ಥಳ ಬದಲಾವಣೆ

ಚಾಮರಾಜನಗರ, ಏ.20–ಜಿಲ್ಲೆಯ ಪ್ರಸಿದ್ಧಯಾತ್ರಾ ಕ್ಷೇತ್ರವಾದ ಹನೂರು ತಾಲೂಕಿನ ಶ್ರೀಮಲೆ ಮಹದೇಶ್ವರಸ್ವಾಮಿ ಬೆಟ್ಟದಲ್ಲಿ ಏ.24ರಂದು ನಡೆಯಲಿರುವ ಸಚಿವ ಸಂಪುಟದ ಸಭೆಯ ಸ್ಥಳವನ್ನು ಬದಲಾವಣೆ ಮಾಡಲಾಗಿದೆ.

ಮಹದೇಶ್ವರಸ್ವಾಮಿ ಬೆಟ್ಟದ ದೀಪದಗಿರಿ ಒಡ್ಡುವಿನ 108 ಅಡಿ ಎತ್ತರದ ಮಲೆ ಮಹದೇಶ್ವರಸ್ವಾಮಿ ಪ್ರತಿಮೆಯ ಆವರಣದ ಬದಲು ಜೈನುಮಲೆ ಭವನದ ಸಮೀಪವಿರುವ ಖಾಲಿ ಜಾಗದಲ್ಲಿ ಸಭೆ ನಡೆಸಲು ತೀರ್ಮಾನಿಸಲಾಗಿದೆ.

ಈ ಮೊದಲು ನಿಗದಿಪಡಿಸಲಾಗಿದ್ದ ದೀಪದಗಿರಿ ಒಡ್ಡುವಿನ ಪ್ರದೇಶ ಎತ್ತರದಲ್ಲಿದ್ದು, ಈ ಸ್ಥಳದಲ್ಲಿ ಜೋರು ಗಾಳಿ ಬೀಸುತ್ತಿರುತ್ತದೆ. ಹೀಗಾಗಿ ಸ್ಥಳ ಬದಲಾವಣೆ ಮಾಡುವಂತೆ ತಜ್ಞರ ತಂಡ ಸೂಚನೆ ನೀಡಿದ ಹಿನ್ನೆಲೆಯಲ್ಲಿ ಸಂಪುಟ ಸಭೆ ನಡೆಸುವ ಸ್ಥಳ ಬದಲಾವಣೆ ಮಾಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸಚಿವ ಸಂಪುಟ ಸಭೆಯನ್ನು ಅಚ್ಚುಕಟ್ಟಾಗಿ ನಡೆಸುವ ಸಂಬಂಧ ಜಿಲ್ಲಾಡಳಿತ ಹಾಗೂ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದಿಂದ ಅಗತ್ಯ ಸಿದ್ಧತೆಗಳನ್ನು ನಡೆಸಲಾಗುತ್ತಿದ್ದು, ಈಗಾಗಲೇ ರಸ್ತೆ ಅಭಿವೃದ್ಧಿ ಕಾಮಗಾರಿ ನಡೆಸಲಾಗಿದೆ. ಅಲ್ಲದೇ ಬೆಟ್ಟದಲ್ಲಿ ಈಗಾಗಲೇ ಜಿಲ್ಲಾಧಿಕಾರಿಗಳು, ಶಾಸಕರು ಸಭೆ ನಡೆಸಿ ಸಿದ್ಧತೆಗಳ ಪರಿಶೀಲನೆ ನಡೆಸಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿದ್ದಾರೆ. ಎಲ್ಲಾ ಸಚಿವರು, ರಾಜ್ಯದ ವಿವಿಧ ಜಿಲ್ಲೆ, ತಾಲೂಕು ಶಾಸಕರು ಮತ್ತು ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಹೀಗಾಗಿ, ಅಧಿಕಾರಿ ಸಿಬ್ಬಂದಿ ವರ್ಗ ಯಾವುದೇ ಲೋಪದೋಷವಾಗದಂತೆ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ವಿವಿಧ ಸಮಿತಿಗಳ ಅಧಿಕಾರಿಗಳ ತಂಡವನ್ನು ರಚಿಸಿದ್ದು, ಸೂಕ್ತ ನಿರ್ದೇಶನ ನೀಡಿದ್ದಾರೆ.



ಜಿಲ್ಲಾಧಿಕಾರಿಗಳು, ಶಾಸಕರು ಸಭೆ ನಡೆಸಿ ಸಿದ್ಧತೆಗಳ ಪರಿಶೀಲನೆ ನಡೆಸಿದರು.

ಅಭಿವೃದ್ಧಿಗೆ ಪೂರಕ: ಮೈಸೂರು ಜಿಲ್ಲೆಯಿಂದ ಬೇರ್ಪಟ್ಟು ನೂತನ ಜಿಲ್ಲೆಯಾಗಿ 27 ವರ್ಷ ಕಳೆದರೂ ಇನ್ನೂ ಪೂರ್ಣ ಪ್ರಮಾಣದ ಮೂಲ ಸೌಲಭ್ಯಗಳು ದೊರಕಿಲ್ಲ. ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ಜಿಲ್ಲೆಯಾಗಿದೆ. ಆದರೆ ಜಿಲ್ಲೆಯ ಅಭಿವೃದ್ಧಿಗೆ ಸರ್ಕಾರದಿಂದ ವಿಶೇಷ ಅನುದಾನ ದೊರೆತಿಲ್ಲ. ಹಾಗಾಗಿ ಬೆಟ್ಟದಲ್ಲಿ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಜಿಲ್ಲೆಯ ಸ್ಥಳೀಯ ಸಮಸ್ಯೆಗಳಿಗೆ ಹೆಚ್ಚಿನ ಒತ್ತು ನೀಡಲು ಸಾಧ್ಯವಾಗಲಿದ್ದು, ಇದರಿಂದ ಜಿಲ್ಲೆಯ ಅಭಿವೃದ್ಧಿಗೆ ಪೂರಕವಾಗಲಿದೆ ಎಂದು ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಜಿಲ್ಲೆಯ ಜನರು ನಿರೀಕ್ಷಿಸಿದ್ದಾರೆ.

ಏ.22 ರಿಂದ 24ರ ವರೆಗೆ ಭಕ್ತಾದಿಗಳ ವಾಸ್ತವ್ಯಕ್ಕೆ ಪ್ರಾಧಿಕಾರದ ಕೊಠಡಿಗಳು ಲಭ್ಯವಿಲ್ಲ



ಹನೂರು: ಶ್ರೀ ಕ್ಷೇತ್ರ ಮಲೆ ಮಹದೇಶ್ವರಬೆಟ್ಟದಲ್ಲಿ ಏ.22 ರಿಂದ 24ರ ವರೆಗೆ ಮೂರು ದಿನಗಳ ಕಾಲ ಭಕ್ತಾದಿಗಳಿಗೆ ವಾಸ್ತವ್ಯಕ್ಕೆ ಪ್ರಾಧಿಕಾರದ ಕೊಠಡಿಗಳು ಲಭ್ಯವಿರುವುದಿಲ್ಲ ಎಂದು ಪ್ರಾಧಿಕಾರದ ಕಾರ್ಯದರ್ಶಿ ಎ.ಈ. ರಘು ತಿಳಿಸಿದ್ದಾರೆ.

ಶ್ರೀ ಕ್ಷೇತ್ರ ಮಲೆಮಹದೇಶ್ವರ ಬೆಟ್ಟದಲ್ಲಿ 2025ನೇ ಸಾಲಿನ 9ನೇ ಸಚಿವ ಸಂಪುಟ ಸಭೆ ಏ.24ರ ಗುರುವಾರ ನಡೆಯಲಿರುವುದರಿಂದ ಶ್ರೀ ಕ್ಷೇತ್ರಕ್ಕೆ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿ, ಸಚಿವರು, ಶಾಸಕರು, ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಹಿರಿಯ ಅಧಿಕಾರಿಗಳು ಆಗಮಿಸುವ ಹಿನ್ನೆಲೆ ಏ.22ರ ಮಂಗಳವಾರದಿಂದ ಏ.24ರ ಗುರುವಾರದವರೆಗೆ ಪ್ರಾಧಿಕಾರದ ಕೊಠಡಿಗಳು ಲಭ್ಯವಿರುವುದಿಲ್ಲ, ಮೂರು ದಿನಗಳ ಕಾಲ ಭಕ್ತಾದಿಗಳು ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ಜೊತೆ ಕೈಜೋಡಿಸಿ ಸಚಿವ ಸಂಪುಟ ಸಭೆಯ ಯಶಸ್ವಿಗೆ ಸಹಕರಿಸಬೇಕು. ಏ.25(ಶುಕ್ರವಾರ) ರಿಂದ ಎಂದಿನಂತೆ ವಾಸ್ತವ್ಯಕ್ಕೆ ಕೊಠಡಿ ಸೌಲಭ್ಯ ಇರುವುದಾಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರ್ವೋತ್ತಮ ಪುರಸ್ಕಾರಕ್ಕೆ ಗೀತಾ ಹುಡೇದ ಆಯ್ಕೆ




ಚಾಮರಾಜನಗರ: ಅತ್ಯುತ್ತಮವಾಗಿ ಸೇವೆ ಸಲ್ಲಿಸಿದವರಿಗೆ ರಾಜ್ಯ ಸರ್ಕಾರ ನೀಡುವ 2023ನೇ ಸಾಲಿನ ರಾಜ್ಯ ಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿ ಪುರಸ್ಕಾರಕ್ಕೆ ಚಾಮರಾಜನಗರ ಜಿಲ್ಲೆಯ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರು ಆಯ್ಕೆಯಾಗಿದ್ದಾರೆ.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಯ್ಕೆ ಸಮಿತಿಯು ಎಲ್ಲ ಅರ್ಹ ನಾಮ ನಿರ್ದೇಶನಗಳನ್ನು ಪರಿಶೀಲಿಸಿ ರಾಜ್ಯದ ವಿವಿಧ ಜಿಲ್ಲೆಗಳ 30 ಅರ್ಹ ಅಧಿಕಾರಿ ನೌಕರರನ್ನು ರಾಜ್ಯ ಮಟ್ಟದ ಸರ್ವೋತ್ತಮ ಪ್ರಶಸ್ತಿಗೆ ಆಯ್ಕೆಮಾಡಿದೆ. ಆಯ್ಕೆಯಾದವರಲ್ಲಿ ಚಾಮರಾಜನಗರ ಜಿಲ್ಲೆಯ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರು ಸೇರಿದ್ದಾರೆ.

ಪ್ರಶಸ್ತಿ ಪುರಸ್ಕೃತರಿಗೆ 50 ಸಾವಿರ ಪ್ರಶಸ್ತಿ ಮೊತ್ತ, ಫಲಕ, ಶಾಲು ಮತ್ತು ಹಾರಗಳೊಂದಿಗೆ ಗೌರವಿಸಲಾಗುತ್ತದೆ.

ಸೋಲಿಗ ಮಹಿಳೆಯರಿಗೆ ವಸ್ತ್ರಗಳ ವಿತರಣೆ



ಯಳಂದೂರು ತಾಲೂಕಿನ ಬಿಳಿಗಿರಿರಂಗನಬೆಟ್ಟದ ಗಂಗಾಧರೇಶ್ವರಸ್ವಾಮಿ ದೇಗುಲದ ಆವರಣದಲ್ಲಿ ಮಹದೇವಪ್ಪ ಅಭಿಮಾನಿ ಬಳಗದ ಸಹಯೋಗದಲ್ಲಿ ನಡೆದ ಎಚ್.ಸಿ.ಮಹದೇವಪ್ಪರವರ ಜನ್ಮದಿನಾಚರಣೆ ನಿಮಿತ್ತ ಸೋಲಿಗ ಮಹಿಳೆಯರಿಗೆ ವಸ್ತ್ರಗಳನ್ನು ವಿತರಣೆ ಮಾಡಿದರು. ಈ ವೇಳೆ ಜಿಪಂ ಮಾಜಿ ಉಪಾಧ್ಯಕ್ಷೆ ಕೇತಮ್ಮ, ನಗರಸಭಾ ಮಾಜಿ ಉಪಾಧ್ಯಕ್ಷ ಅಕ್ಮಲ್‌ಪಾಷ ಮಾಜಿ ಅಧ್ಯಕ್ಷೆ ಸುಶೀಲಾ ಶಾಂತರಾಜು, ಮುಡಿಗುಂಡ ಶಾಂತರಾಜು, ಜೆ.ಯೋಗೇಶ್ ಇದ್ದರು.

ಪತ್ರಿಕಾ ವಿತರಕರಿಗೆ 10 ಕೋಟಿ ಕ್ಷೇಮ ನಿಧಿ ಸ್ಥಾಪಿಸಲು ಸಿಎಂಗೆ ಮನವಿ



ಚಾಮರಾಜನಗರ, ಏ.20– ರಾಜ್ಯ ಪತ್ರಿಕಾ ವಿತರಕರಿಗೆ ಕ್ಷೇಮಭಿವೃದ್ಧಿ ನಿಧಿ ಸ್ಥಾಪಿಸಲು 10 ಕೋಟಿ ರೂ ಮೀಸಲಿಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗುವುದು ಎಂದು ರಾಜ್ಯ ಪತ್ರಿಕ ವಿತರಕರ ಒಕ್ಕೂಟದ ರಾಜ್ಯ ಅಧ್ಯಕ್ಷರಾದ ಕೆ. ಶಂಭುಲಿಂಗ ತಿಳಿಸಿದ್ದಾರೆ.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಇಂದು ನಡೆದ ಪತ್ರಿಕಾ ಪ್ರತಿನಿಧಿಗಳು ಹಾಗೂ ವಿತರಕರ ಸಂಘದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪತ್ರಿಕಾ ವಿತರಕರ ಒಕ್ಕೂಟ ಸ್ಥಾಪನೆಗೊಂಡ ಬಳಿಕ ವಿತರಕರಿಗೆ ಸರ್ಕಾರದಿಂದ ಅನೇಕ ಯೋಜನೆಗಳನ್ನು ಜಾರಿಗೊಳಿಸಲು ಮುಂದಾದಾಗ ಸರ್ಕಾರ ಸ್ಪಂದಿಸಿ ಅಪಘಾತ ಹೊಂದಿದಲ್ಲಿ ಪರಿಹಾರ, ಪ್ರಧಾನಮಂತ್ರಿ ಸ್ವನಿದಿ, ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವು ಯೋಜನೆಗಳನ್ನು ಜಾರಿಗೊಳಿಸಿದೆ ಎಂದರು.

ಮುಂದಿನ ದಿನದಲ್ಲಿ 60 ವರ್ಷ ಮೇಲ್ಪಟ್ಟ ವಿತರಿಕರಿಗೆ ಪಿಂಚಣಿ ಯೋಜನೆ ಹಾಗೂ ನಿವೇಶನ, ರಿಯಾಯಿತಿ ದರದಲ್ಲಿ ಎಲೆಕ್ಟ್ರಿಕ್ ಬೈಕ್ ಕಲ್ಪಿಸಲು ಕ್ರಮ ವಹಿಸಲಾಗುವುದು ರಾಜೀವ್ ಗಾಂಧಿ ಆವಾಜ್ ಯೋಜನೆ ಅಡಿ ಮನೆಗಳಿಗೆ ಅರ್ಜಿ ಕರೆಯಲಾಗಿದ್ದು ವಿತರಕರ ಸಂಘದಿಂದ ಮುಖ್ಯಮಂತ್ರಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸುವಂತೆ ಸಲಹೆ ನೀಡಿದರು. ಮೈಸೂರಿನಲ್ಲಿ ಆ.28 ರಂದು ರಾಜ್ಯಮಟ್ಟದ ಪತ್ರಿಕ ವಿತರಕರ ಸಮ್ಮೇಳನವನ್ನು ಆಯೋಜಿಸಲು ಉದ್ದೇಶಿಸಲಾಗಿದ್ದು ಎಲ್ಲರೂ ಸಹಕಾರ ನೀಡಬೇಕೆಂದು ತಿಳಿಸಿದರು.

ಸಂಘದ ಹಿರಿಯ ಸದಸ್ಯ ಸಿದ್ದಲಿಂಗಸ್ವಾಮಿ ಮಾತನಾಡಿ, ಇತ್ತೀಚಿಗೆ ದಿನನಿತ್ಯ ಬಳಸುವ ಆಹಾರ ಪದಾರ್ಥಗಳ ಬೆಲೆ ಹೆಚ್ಚಾಗಿದ್ದು, ಪತ್ರಿಕೆ ಬೆಲೆ ಕಡಿಮೆಯಾಗಿದೆ, ಪತ್ರಿಕೆ ವಿತರಣೆಗೆ ಖರ್ಚು ಹೆಚ್ಚಾಗುತ್ತಿದ್ದು, ಪತ್ರಿಕೆ ದರವನ್ನು ಹೆಚ್ಚು ಮಾಡಬೇಕೆಂದು ಸಲಹೆ ನೀಡಿದರು.

ಗೂಳಿಪುರ ನಂದೀಶ್ ಮಾತನಾಡಿ ಪತ್ರಿಕೆ ಹಂಚಲು ಹುಡುಗರು ಸಿಗುತ್ತಿಲ್ಲ, ಅಸಂಘಟಿತ ವಲಯಕ್ಕೆ ಸೇರಿದ ಪತ್ರಿಕ ವಿತರಕರಿಗೆ ಎಲೆಕ್ಟ್ರಿಕ್ ಸ್ಕೂಟರ್ ಕೊಡಿಸಲು ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು, ಎಲ್. ಶಿವಲಿಂಗ ಮೂರ್ತಿ ಮಾತನಾಡಿ ಪತ್ರಿಕಾ ವಿತರಕರಿಗೆ ಭದ್ರತೆ ಇರುವುದಿಲ್ಲ. ದಶಕಗಳ ಕಾಲ ದುಡಿದು ಯಾವುದೇ ಸೌಲಭ್ಯವಿಲ್ಲದೆ ಇಂದಿಗೂ ಸಾಕಷ್ಟು ಪತ್ರಕರ್ತರು ಕಷ್ಟವನ್ನು ಎದುರಿಸುತ್ತಿದ್ದಾರೆ. ಹೀಗಾಗಿ ವಿತರಕರಿಗೆ ಪಿಂಚಣಿ ಸೌಲಭ್ಯ ಹಾಗೂ ನಿವೇಶನ ಕಲ್ಪಿಸಿ ಕೊಡಬೇಕೆಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ರಾಜ್ಯಾಧ್ಯಕ್ಷ ಕೆ. ಶಂಭುಲಿಂಗ ಮೈಸೂರು ವಿತರಕರ ಸಂಘದ ಜಿಲ್ಲಾಧ್ಯಕ್ಷ ಓಂದೇವ್, ಕಾರ್ಯದರ್ಶಿ ಶಿವಣ್ಣ, ಸಂಘದ ಜಿಲ್ಲಾಧ್ಯಕ್ಷ ಪುರುಷೋತ್ತಮ್, ಗೌರವಾಧ್ಯಕ್ಷ ಎಚ್.ಎಸ್. ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಅಕ್ಷಯ್ ಸೇರಿದಂತೆ ಸಂಘದ ಸದಸ್ಯರು ಹಾಜರಿದ್ದರು.

ಮಹದೇವಪ್ಪ ಹುಟ್ಟುಹಬ್ಬದ ಪ್ರಯುಕ್ತ ಉಚಿತ ಆರೋಗ್ಯ ತಪಾಸಣಾ ಶಿಬಿರ



ಮಾಜಿ ಶಾಸಕ ನರೇಂದ್ರ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಹನೂರು, ಏ.20–ರಾಜ್ಯದ ಹಿಂದುಳಿದ ವರ್ಗ ಅಸಹಾಯಕರ ಪರ ಸದಾ ಕಾಳಜಿ ಹೊಂದಿರುವ ಸಮಾಜ ಕಲ್ಯಾಣ ಇಲಾಖೆ ಸಚಿವ ಹೆಚ್.ಸಿ.ಮಹದೇವಪ್ಪ ಹುಟ್ಟುಹಬ್ಬದ ಪ್ರಯುಕ್ತ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜನೆ ಮಾಡಿರುವುದು ಸಂತಸದ ವಿಚಾರ ಎಂದು ಮಾಜಿ ಶಾಸಕ ಆರ್.ನರೇಂದ್ರ ತಿಳಿಸಿದರು.

ಪಟ್ಟಣದ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಚ್.ಸಿ.ಮಹದೇವಪ್ಪ ಅಭಿಮಾನಿ ಬಳಗ ಸಮೃದ್ಧಿ ಫೌಂಡೇಶನ್, ಚಾರಿಟೇಬಲ್ ಟ್ರಸ್ಟ್ ಬೆಂಗಳೂರು, ಈಸ್ಟ್ ಪಾಯಿಂಟ್ ಮೆಡಿಕಲ್ ಕಾಲೇಜು ಆಸ್ಪತ್ರೆ ಬೆಂಗಳೂರು ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮ ಉದ್ಘಾಟನೆ ಮಾಡಿ ಮಾತನಾಡಿದ ಅವರು, ಪ್ರತಿಯೊಬ್ಬರು ಇಂದಿನ ದಿನಗಳಲ್ಲಿ ಆರೋಗ್ಯದ ಕಡೆ ಹೆಚ್ಚಿನ ಗಮನಹರಿಸಬೇಕು. ಆರೋಗ್ಯವಂತರಾಗಿದ್ದರೆ ಜೀವನದಲ್ಲಿ ಏನು ಬೇಕಾದರೂ ಸಾಧನೆ ಮಾಡಬಹುದು. ಎಂದರು.

ಕ್ಷೇತ್ರದಲ್ಲಿರುವ 82 ಹಾಡಿಗಳಲ್ಲಿ 20 ಹಾಡಿಗಳಿಗೆ ಸೋಲಾರ್ ವ್ಯವಸ್ಥೆ ಇತ್ತು ಇದೀಗ ಅರಣ್ಯ ಇಲಾಖೆಯಲ್ಲಿ ಇದ್ದ ಸಮಸ್ಯೆಯನ್ನು ಬಗೆಹರಿಸಿ ಎಲ್ಲಾ ಹಾಡಿಗಳಿಗೂ ವಿದ್ಯುತ್ ಸಂಪರ್ಕ ಕಲ್ಪಿಸುವಲ್ಲಿ ಮುಖ್ಯಮಂತ್ರಿ ಉಸ್ತುವಾರಿ ಸಚಿವರು ಹಾಗೂ ಸಮಾಜ ಕಲ್ಯಾಣ ಇಲಾಖೆ ಸಚಿವರು ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ನಿರ್ದೇಶಕ ಶಾಹುಲ್ ಅಹಮದ್, ಪಪಂ ಸದಸ್ಯ ಗಿರೀಶ್, ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಜಿಲ್ಲಾ ಉಪಾಧ್ಯಕ್ಷ ಸಿದ್ದರಾಜು, ಪಿಎಪಿಎಂಸಿ ಅಧ್ಯಕ್ಷ ನಟರಾಜು, ಜಿ.ಪಂ ಮಾಜಿ ಸದಸ್ಯರಾದ ಕೊಪ್ಪಳಿ ಮಹಾದೇವ ನಾಯಕ, ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಮುಕುಂದ ವರ್ಮ, ಈಶ್ವರ್, ತಾಪಂ ಮಾಜಿ ಅಧ್ಯಕ್ಷ ಮುರುಡೇಶ್ವರಸ್ವಾಮಿ, ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ಸೋಮಣ್ಣ, ತಾಲ್ಲೂಕು ವೈದ್ಯಾಧಿಕಾರಿ ಡಾ.ಪ್ರಕಾಶ್ ಕಂಠೀರವ ಸ್ಟುಡಿಯೋ ಮಾಜಿ ನಿರ್ದೇಶಕ ಮಂಗಲ ಪುಟ್ಟರಾಜು, ಅಕ್ರಮ ಸಕ್ರಮ ಸಮಿತಿ ಸದಸ್ಯ ಮಣಿ, ಮಹಿಳಾ ಘಟಕದ ಅಧ್ಯಕ್ಷ ಸುವರ್ಣಮ್ಮ ಸೇರಿದಂತೆ ಇನ್ನಿತರರು ಹಾಜರಿದ್ದರು.

ಬಾಲಕಿ ಮೊಬೈಲ್ ಕದ್ದು, ಮಾರ್ಫಿಂಗ್ ಫೋಟೋ ಶೇರ್ ಮಾಡಿ ಬ್ಲಾಕ್ ಮೇಲ್

ಕ್ರೈಂ ಬಾಕ್ಸ್

ಮೈಸೂರು, ಏ.20– ರೈಲಿನಲ್ಲಿ ಬಾಲಕಿ ಕಳೆದುಕೊಂಡ ಮೊಬೈಲ್‌ನಿಂದ ಖದೀಮನೊಬ್ಬ ಹಣಕ್ಕೆ ಬೇಡಿಕೆ ಇಡುವುದರ ಜೊತೆಗೆ ಆಕೆಯ ಮಾರ್ಫಿಂಗ್ ಫೋಟೋಗಳನ್ನು ಹಂಚಿ ಬೆದರಿಕೆ ಹಾಕಿರುವ ಬಗ್ಗೆ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಮಿಳುನಾಡಿನ ಉದ್ಯಮಿಯೊಬ್ಬರು, ತಮ್ಮ 15 ವರ್ಷದ ಮಗಳಿಗೆ ದುಷ್ಕರ್ಮಿಯಿಂದಾದ ಕಿರುಕುಳದ ಬಗ್ಗೆ ದೂರು ನೀಡಿದ್ದು, ಸೆನ್ ಪೊಲೀಸರು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಎರಡು ದಿನಗಳ ಹಿಂದೆ ತಮಿಳುನಾಡಿನಿಂದ ಮೈಸೂರಿಗೆ ಕಾವೇರಿ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣಿಸುವಾಗ ಬೆಳಗ್ಗೆ 6 ಗಂಟೆ ಸುಮಾರಿಗೆ ನನ್ನ ಮಗಳು ಮೊಬೈಲ್ ಕಳೆದುಕೊಂಡಳು. ಬಳಿಕ ನನ್ನ ನಂಬರ್‌ನಿಂದ ಕರೆ ಮಾಡಿದಾಗ ರಿಂಗ್ ಆಯಿತು. ಆದರೆ ನಿರಂತರವಾಗಿ ಕರೆ ಮಾಡಿದರೂ 8.30ರ ವರೆಗೂ ಕರೆ ಸ್ವೀಕರಿಸಲಿಲ್ಲ. ನಂತರ ಕಳೆದಿದ್ದ ಫೋನ್‌ನಿಂದ ನನ್ನ ಮೊಬೈಲ್‌ಗೆ ವಾಟ್ಸಾಪ್ ಸಂದೇಶ ಕಳುಹಿಸಿದ ವ್ಯಕ್ತಿ 9 ಸಾವಿರ ಹಣಕ್ಕೆ ಬೇಡಿಕೆಯಿಟ್ಟಿದ್ದ. ಹಣ ಕೊಡದಿದ್ದರೆ ಮಾರ್ಫಿಂಗ್ ಫೋಟೋಗಳನ್ನು ಮೊಬೈಲ್‌ನಲ್ಲಿರುವ ಎಲ್ಲಾ ಕಾಂಟಾಕ್ಟ್ ನಂಬರ್‌ಗಳಿಗೂ ಹಂಚುವುದಾಗಿ ಬೆದರಿಸಿದ.

ಕೂಡಲೇ ಚೈಲ್ಡ್ ಕೇರ್ ಸಂಖ್ಯೆ (1098)ಗೆ ಕರೆ ಮಾಡಿ, ದೂರು ನೀಡಲಾಯಿತು. ಈ ವಿಷಯ ತಿಳಿದ ಆತ ಮತ್ತೆ ಬೆದರಿಸಲು ಶುರುಮಾಡಿದ. ಅಲ್ಲದೆ ಕೆಲವು ಮಾರ್ಫಿಂಗ್ ಫೋಟೋಗಳನ್ನು ಮಗಳ ಸ್ನೇಹಿತೆಯರಿಗೆ ಶೇರ್ ಮಾಡಿದ. ಬಳಿಕ ಸುರಕ್ಷತೆ ದೃಷ್ಟಿಯಿಂದ ವಾಟ್ಸಾಪ್ ಹಾಗೂ ಗೂಗಲ್ ಅಕೌಂಟ್ ಅನ್ನು ಬ್ಲಾಕ್ ಮಾಡಿಸಲಾಯಿತು. ಆದರೂ ಫೋನ್ ಹಾಗೂ ಗೂಗಲ್ ಅಕೌಂಟ್‌ನ ಪಾಸ್‌ವರ್ಡ್ ಹ್ಯಾಕ್ ಮಾಡಿ, ವಾಟ್ಸಾಪ್ ಇನ್ಸ್ಟಾಲ್ ಮಾಡಿಕೊಂಡಿರುವುದಾಗಿ ದೂರಿನಲ್ಲಿ ತಿಳಿಸಿದ್ದಾರೆ.

ಮೈಸೂರಲ್ಲಿ ಧಾರಾಕಾರ ಮಳೆ



ಮೈಸೂರು, ಏ.20(ಎಂಕೆ)– ಮೈಸೂರು ನಗರ ಸೇರಿದಂತೆ ಜಿಲ್ಲೆಯ ಹಲವೆಡೆ ಭಾನುವಾರ ರಾತ್ರಿ ಅರ್ಧ ಗಂಟೆಗೂ ಹೆಚ್ಚು ಕಾಲ ಮಳೆ ಸುರಿಯಿತು.

ರಾತ್ರಿ 8.20ರ ಸುಮಾರಿಗೆ ಆರಂಭವಾದ ಮಳೆ ಅರ್ಧ ಗಂಟೆಗೂ ಹೆಚ್ಚು ಕಾಲ ಜೋರಾಗಿ ಸುರಿಯಿತು. ಪರಿಣಾಮ ರಸ್ತೆ, ಚರಂಡಿಗಳು ತುಂಬಿ ಹರಿದು ವಾಹನಗಳ ಸಂಚಾರಕ್ಕೆ ತೀವ್ರ ತೊಂದರೆ ಉಂಟಾಯಿತು.

ನಗರದ ಕೆ.ಆರ್.ವೃತ್ತ, ಆಯುರ್ವೇದಿಕ್ ವೃತ್ತ, ಹಾರ್ಡಿಂಜ್ ವೃತ್ತ, ದಾಸಪ್ಪ ಸರ್ಕಲ್, ರಾಮಸ್ವಾಮಿ ವೃತ್ತ ಸೇರಿದಂತೆ ಪ್ರಮುಖ ವೃತ್ತಗಳು ಮಳೆ ನೀರಿನಿಂದ ಆವೃತ್ತವಾಗಿದ್ದವು. ಏಕಾಏಕಿ ಜೋರಾಗಿ ಮಳೆ ಬಂದಿದ್ದರಿಂದ ಪಾದಚಾರಿಗಳು, ಅಂಗಡಿ–ಮಳಿಗೆ ಮಾಲೀಕರು ಪರದಾಡುವಂತಾಯಿತು.

ಜೋರು ಮಳೆಯಿಂದಾಗಿ ರಸ್ತೆ ಬದಿ ವ್ಯಾಪಾರಿಗಳು, ಮಾರುಕಟ್ಟೆಯ ಮಳಿಗೆದಾರರು ಅವದಿಗೂ ಮುನ್ನವೇ ಬಾಗಿಲು ಹಾಕುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿದ್ದವು. ದ್ವಿಚಕ್ರ ವಾಹನ ಸವಾರರು ಪೆಟ್ರೋಲ್ ಬಂಕ್‌ಗಳ ಬಳಿ ನಿಂತು ಮಳೆ ನಿಂತ ಬಳಿಕ ಸಾಗಿದರು. ಕೆಲ ದ್ವಿಚಕ್ರ ಸವಾರರು ಮಳೆಯಲ್ಲಿಯೇ ಸಂಚರಿಸುತ್ತಿದ್ದ ದೃಶ್ಯಗಳು ಕಂಡುಬಂದವು.

ಮೈಸೂರಿನ ತಗ್ಗು ಪ್ರದೇಶದಲ್ಲಿರುವ ಉದಯಗಿರಿ, ಗುಂಡೂರಾವ್‌ನಗರ, ಕನಕಗಿರಿ, ವಿದ್ಯಾರಣ್ಯಪುರಂ, ಮಧುವನ ಬಡಾವಣೆ, ಐಶ್ವರ್ಯನಗರ, ಆನಂದನಗರ ಸೇರಿದಂತೆ ಕೆಲ ಬಡಾವಣೆಗಳಲ್ಲಿ ಮನೆಗಳಿಗೆ ನುಗ್ಗಿ ನಿವಾಸಿಗಳು ಪರದಾಡುವಂತಾಯಿತು.

ಮರಗಳು, ವಿದ್ಯುತ್ ಕಂಬಗಳು ಮುರಿದು ಬಿದ್ದಿರುವ ಕುರಿತು ಯಾವುದೇ ಮಾಹಿತಿ ತಿಳಿದುಬಂದಿಲ್ಲ ಎಂದು ನಗರ ಪಾಲಿಕೆ ಕಂಟ್ರೋಲ್ ರೂಂ ಸಿಬ್ಬಂದಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮರೆಯದ ಮಾಣಿಕ್ಯ ಪ್ರಶಸ್ತಿ ಪ್ರದಾನ



ಆಶಾಕಿರಣ ಕಲಾ ಟ್ರಸ್ಟ್, ಗೋಕಾಕ್ ಮತ್ತು ಬೆಂಗಳೂರು ಸಂಸ್ಥೆ ಮರೆಯದ ಮಾಣಿಕ್ಯ ಪ್ರಶಸ್ತಿಯನ್ನು ರಾಮಕೃಷ್ಣ ನಗರದಲ್ಲಿರುವ ಶನೇಶ್ವರ ದೇವಸ್ಥಾನ ಸಂಕೀರ್ಣದಲ್ಲಿ ನಡೆದ ಸಮಾರಂಭದಲ್ಲಿ ರಂಗಕರ್ಮಿ ರಾಜಶೇಖರ ಕದಂಬ, ನಾಟಕಕಾರ ವೆಂಕಟೇಶ ಈಡಿಗರ್, ಆಕಾಶವಾಣಿ ಉದ್ಘೋಷಕ ಪ್ರಭುಸ್ವಾಮಿ ಮಳೀಮಠ್ ಅವರಿಗೆ ಪ್ರದಾನ ಮಾಡಲಾಯಿತು. ರಂಗನಟಿ ಮಾಲತಿಶ್ರೀ ಮೈಸೂರು, ಚಲನಚಿತ್ರ ನಿರ್ಮಾಪಕ–ನಿರ್ದೇಶಕ ಆದಿತ್ಯ ಚಿಕ್ಕಣ್ಣ, ವಿಜಯ ನಂಜುಂಡಪ್ಪ, ನರಕೇಸರಿ ಮತ್ತಿತರರು ಉಪಸ್ಥಿತರಿದ್ದರು.

'ಗೊಗ್ಗಯ್ಯನ ಗಾಳಿಪಟ': ಬುಕ್ ಚಟುವಟಿಕೆ

ಮೈಸೂರು,ಏ.20– ಏಪ್ರಿಲ್ 23 ರಂದು ವಿಶ್ವ ಪುಸ್ತಕ ಹಾಗೂ ಕೃತಿ ಸ್ವಾಮ್ಯ ದಿನಾಚರಣೆ ಅಂಗವಾಗಿ ಮೈಸೂರು ನಗರ ಕೇಂದ್ರ ಗ್ರಂಥಾಲಯ ಹಾಗೂ ಬೆಂಗಳೂರು ಪ್ರಥಮ ಬುಕ್ಸ್ ಸಂಯುಕ್ತಾಶ್ರಯದಲ್ಲಿ ಪಿಕ್ಚರ್ ಬುಕ್‌ಗಳ ಪರಿಚಯ, ಕಥಾ ವಾಚನ ಹಾಗೂ 'ಗೊಗ್ಗಯ್ಯನ ಗಾಳಿಪಟ' ಪಿಕ್ಚರ್ ಬುಕ್‌ನಲ್ಲಿರುವ ವಿಷಯಗಳ ಕುರಿತು ಚಟುವಟಿಕೆಯನ್ನು 6 ರಿಂದ 12 ವರ್ಷದ ವಯಸ್ಸಿನ ಕನಿಷ್ಟ 50 ಮಕ್ಕಳಿಗೆ ಪೀಪಲ್ಸ್ ಪಾರ್ಕ್‌ನ ನಗರ ಕೇಂದ್ರ ಗ್ರಂಥಾಲಯದಲ್ಲಿ 23 ರಂದು ಬೆಳಿಗ್ಗೆ 11 ಗಂಟೆಯಿಂದ 12.30 ಗಂಟೆಯ ರವರೆಗೆ ಆಯೋಜಿಸಲಾಗಿದೆ.

ಆಸಕ್ತಿಯುಳ್ಳ ವಿದ್ಯಾರ್ಥಿಗಳು ವೆಬ್‌ಸೈಟ್ https://forms.gle/S2dKzGnRdm9ZQyCv7 ಲಿಂಕ್‌ನಲ್ಲಿರುವ Google Form ಅನ್ನು ಭರ್ತಿಮಾಡಿ ಏ.22ರ ಬೆಳಿಗ್ಗೆ 11 ಗಂಟೆ ಒಳಗೆ ಕಳುಹಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಕಚೇರಿಯ ದೂರವಾಣಿ ಸಂ: 0821–2423678 ನ್ನು ಸಂಪರ್ಕಿಸಬಹುದು ಎಂದು ನಗರ, ಜಿಲ್ಲಾ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕ ಮಂಜುನಾಥ್ ಬಿ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಾಭದಾಸೆಗೆ ಆನ್‌ಲೈನ್‌ನಲ್ಲಿ ಹೂಡಿಕೆ ಮಾಡಿ 5.58 ಲಕ್ಷ ಕಳೆದುಕೊಂಡ ಬ್ಯಾಂಕ್ ಉದ್ಯೋಗಿ

ಮೈಸೂರು, ಏ.20– ಅಧಿಕ ಲಾಭದಾಸೆಗೆ ಬ್ಯಾಂಕ್ ಉದ್ಯೋಗಿಯೇ ಆನ್‌ಲೈನ್‌ನಲ್ಲಿ ಹೂಡಿಕೆ ಮಾಡಿ ಐದೂವರೆ ಲಕ್ಷ ರೂ. ಕಳೆದುಕೊಂಡಿದ್ದಾರೆ. ಮೈಸೂರಿನ ವಿವಿ ಮೊಹಲ್ಲಾದಲ್ಲಿ ನೆಲೆಸಿರುವ ಬ್ಯಾಂಕ್ ಉದ್ಯೋಗಿ ಹಣ ಕಳೆದುಕೊಂಡು, ಸೆನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಏ.6ರಂದು ಅಂಜು–1112 ಎಂಬ ಟೆಲಿಗ್ರಾಂ ಐಡಿಯಿಂದ ಪ್ರೊಮೋಷನಲ್ ಟಾಸ್ಕ್ ಬಗ್ಗೆ ಮೆಸೇಜ್ ಬಂದಿತ್ತು. ಅದರ ಬಗ್ಗೆ ತಿಳಿದುಕೊಳ್ಳಲೆಂದು ಡೆಮೋ ಟಾಸ್ಕ್ ಮಾಡಿದೆ. ಬಳಿಕ ಮತ್ತೊಂದು ಟೆಲಿಗ್ರಾಂ ಗ್ರೂಪ್‌ಗೆ ಸೇರಿಸಲಾಯಿತು. ಟಾಸ್ಕ್ ಪೂರೈಸಲು ಮೊದಲಿಗೆ ಸಾವಿರ ರೂ. ಹಣ ಪಾವತಿಸಿದೆ. ನಂತರ ಯಾವುದೋ ಲಿಂಕ್ ಕಳುಹಿಸಿ ಟಾಸ್ಕ್ ಮಾಡಲು ಸೂಚಿಸಲಾಯಿತು. ಹಾಗೆಯೇ 10 ಸಾವಿರ, ನಂತರ 12 ಸಾವಿರ ಹಣ ಹೂಡಿಕೆ ಮಾಡಿ, ಪ್ರೀಪೇಯ್ಡ್ ಟಾಸ್ಕ್ ಪೂರ್ಣಗೊಳಿಸಿದ್ದಕ್ಕಾಗಿ 31,380 ರೂ. ಹಣವನ್ನು ಲಾಭವೆಂದು ನನ್ನ ಖಾತೆಗೆ ಜಮಾ ಮಾಡಿದರು.

ಇದರಿಂದ ಟಾಸ್ಕ್ ಬಗ್ಗೆ ನಂಬಿಕೆ ಬಂದಿತು. ಮುಂದಿನ ಹಂತದಲ್ಲಿ ಹೂಡಿಕೆ ಮಾಡಿದ ಹಣಕ್ಕೆ ಶೇ.25ರಷ್ಟು ಲಾಭ ಬರುವುದಾಗಿ ತಿಳಿಸಿದರು. ಅಧಿಕ ಲಾಭದಾಸೆಗೆ ಸ್ನೇಹಿತರ ಬ್ಯಾಂಕ್ ಖಾತೆಗಳ ಮೂಲಕ ಒಟ್ಟು 5.58 ಲಕ್ಷ ರೂ.ಗಳನ್ನು ಹೂಡಿಕೆ ಮಾಡಿದೆ. ಅದರ ಲಾಭದ ಹಣವನ್ನು ಜಮಾ ಮಾಡಲು ಕೇಳಿದಾಗ ಮತ್ತಷ್ಟು ಹಣವನ್ನು ಹೂಡಿಕೆ ಮಾಡಬೇಕೆಂದು ಸೂಚಿಸಿದರು. ಇದರಿಂದ ಅನುಮಾನ ಬಂದು ಪರಿಶೀಲಿಸಿದಾಗ ಇದು ಮೋಸದ ಜಾಲವೆಂದು ತಿಳಿಯಿತೆಂದು ಅವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ವಿವಿಧ ಸೇವಾ ಕಾರ್ಯಗಳೊಂದಿಗೆ

ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹುಟ್ಟುಹಬ್ಬ ಆಚರಣೆ

ತಿ.ನರಸೀಪುರ, ಏ.20– ರಾಜ್ಯ ಸರ್ಕಾರದ ಪ್ರಭಾವಿ ಸಚಿವರು, ತಿ.ನರಸೀಪುರ ಕ್ಷೇತ್ರದ ಜನಪ್ರಿಯ ಶಾಸಕರೂ ಆದ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ. ಮಹದೇವಪ್ಪನವರ 72ನೇ ಹುಟ್ಟುಹಬ್ಬವನ್ನು ಪಟ್ಟಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ವಿವಿಧ ಸೇವಾ ಕಾರ್ಯಗಳೊಂದಿಗೆ ವಿಜೃಂಭಣೆಯಿಂದ ಆಚರಿಸಿದರು.

ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಬಳಿ ಜಮಾಯಿಸಿದ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಶ್ರೀಮಹಾಲಕ್ಷ್ಮಿ ಗುಂಜಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಸಚಿವರ ಹೆಸರಲ್ಲಿ ಅಭಿಷೇಕ ಮಾಡಿಸಿ ಆಯಸ್ಸು ವೃದ್ಧಿಗೆ ಪ್ರಾರ್ಥನೆ ಸಲ್ಲಿಸಿದರು. ಬಳಿಕ ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ತೆರಳಿ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಅಭಿಲಾಷ್ ಸಮ್ಮುಖದಲ್ಲಿ ಹೊರ ರೋಗಿಗಳಿಗೆ ಹಣ್ಣು ಬ್ರೆಡ್ ವಿತರಿಸಿದರು.



ಹುಟ್ಟುಹಬ್ಬ ಅಂಗವಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು 72 ಕೆಜಿ ತೂಕದ ಕೇಕ್ ಕತ್ತರಿಸಿದರು. ಈ ವೇಳೆ ತಾಪಂ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ ಹಾಗೂ ಬೆಂಬಲಿಗರಿದ್ದರು.

ಬಳಿಕ ಕಾಂಗ್ರೆಸ್ ಕಚೇರಿಗೆ ತೆರಳಿದ ಕಾರ್ಯಕರ್ತರು ಬೃಹತ್ ಕೇಕ್ ಕತ್ತರಿಸಿ ಡಾ. ಮಹದೇವಪ್ಪರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿ ಸಂಭ್ರಮಿಸಿದರು. ಈ ವೇಳೆ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಸೋಸಲೆ ಪಿಎಸಿಎಸ್ ಮಾಜಿ ಅಧ್ಯಕ್ಷ ಎಂ.ಪರಶಿವಮೂರ್ತಿ ಮಾತನಾಡಿ, ಡಾ.ಹೆಚ್.ಸಿ.ಮಹದೇವಪ್ಪನವರು ದಣಿವರಿಯದ ನಾಯಕರಾಗಿದ್ದು, ಅವರು ಸಚಿವರಾಗಿ ಕ್ಷೇತ್ರಕ್ಕೆ ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ಮುಂದಿನ ತಲೆಮಾರಿನವರು ಮರೆಯುವಂತಿಲ್ಲ. ಕ್ಷೇತ್ರವನ್ನು ಇನ್ನಿಲ್ಲದಂತೆ ಅಭಿವೃದ್ಧಿ ಪಡಿಸಿರುವ ಶಾಸಕರು ನೂರಾರು ಕೋಟಿ ರೂ. ಅನುದಾನವನ್ನು ಕ್ಷೇತ್ರಕ್ಕೆ ನೀಡುವ ಮೂಲಕ ಸಮಗ್ರ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಇಂದು ಅವರ ಹುಟ್ಟುಹಬ್ಬ. ಹಾಗಾಗಿ ಕ್ಷೇತ್ರದ ಕಾರ್ಯಕರ್ತರು ಒಂದೆಡೆ ಸೇರಿ ಅವರ ಜನ್ಮದಿನವನ್ನು ಸಂಭ್ರಮದಿಂದ ಆಚರಿಸಿದ್ದೇವೆ. ಅವರಿಗೆ ಭಗವಂತ ಇನ್ನೂ ಹೆಚ್ಚಿನ ಆರೋಗ್ಯ, ಆಯಸ್ಸು ಹಾಗೂ ಅಧಿಕಾರ ಕೊಡಲಿ ಎಂದು ಪ್ರಾರ್ಥನೆ ಸಲ್ಲಿಸಿದ್ದೇವೆ ಎಂದರು.

ತಾಪಂ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ಕ್ಷೇತ್ರಕ್ಕೆ ಸಚಿವ ಡಾ.ಹೆಚ್.ಸಿ. ಮಹದೇವಪ್ಪನವರ ಕೊಡುಗೆ ಅಪಾರ. ಕ್ಷೇತ್ರವನ್ನು ನಿರೀಕ್ಷೆಗೂ ಮೀರಿ ಅಭಿವೃದ್ಧಿ ಪಡಿಸಿದ್ದಾರೆ. ಇಂತಹ ಧೀಮಂತ ನಾಯಕರನ್ನು ಕ್ಷೇತ್ರದ ಜನತೆ ಹಾಗೂ ಕಾಂಗ್ರೆಸ್ ಪಕ್ಷ ಪಡೆದಿರುವುದೇ ಹೆಮ್ಮೆಯ ವಿಷಯ. ಮುಂದಿನ ದಿನಗಳಲ್ಲಿ ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ಚಿಂತಿಸಿರುವ ಅವರಿಗೆ ಇನ್ನೂ ಹೆಚ್ಚಿನ ಅಧಿಕಾರ ದೊರಕಬೇಕಿದೆ. ಆ ಮೂಲಕ ರಾಜ್ಯಕ್ಕೆ ಅವರ ಸೇವೆ ನಿರಂತರವಾಗಿರಲಿ. ಕಾಂಗ್ರೆಸ್ ಸರ್ಕಾರ ಸುಭದ್ರವಾಗಿದ್ದು, ಉತ್ತಮ ಆಡಳಿತ ನಡೆಸುವ ಮೂಲಕ ಜನರ ಕಲ್ಯಾಣವಾಗಲಿ ಎಂದರು.

ಸಮಾಜ ಕಲ್ಯಾಣ ಸಚಿವರ ಆಪ್ತ ಸಹಾಯಕ ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಬ್ಲಾಕ್ ಕಾಂಗ್ರೆಸ್ ಮೀನುಗಾರರ ಘಟಕದ ಅಧ್ಯಕ್ಷ ಕೊಳತ್ತೂರು ಕೆ.ಎನ್.ಕುಮಾರ್, ಸೋಸಲೆ ಮಹದೇವಸ್ವಾಮಿ, ಪುರಸಭಾ ಸದಸ್ಯ ಬಾದಾಮಿ ಮಂಜು, ಪುರಸಭಾ ಉಪಾಧ್ಯಕ್ಷೆ ರಾಜೇಶ್ವರಿ ರಾಘವೇಂದ್ರ, ಮಾಜಿ ಸದಸ್ಯ ಎಂ.ರಾಘವೇಂದ್ರ, ಹಿಂದುಳಿದ ಪ್ರವರ್ಗಗಳ ಜಿಲ್ಲಾಧ್ಯಕ್ಷ ಜೆಅನುಪ್‌ಗೌಡ, ತಾಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ರಾಮಲಿಂಗಯ್ಯ, ಉಮೇಶ್, ಮಹಿಳಾ ಘಟಕದ ಅಧ್ಯಕ್ಷ ಲತಾ ಜಗದೀಶ್, ನ್ಯಾಯಬೆಲೆ ಅಂಗಡಿ ಮಾಲಿಕ ಜಗದೀಶ್, ಗದ್ದೆಮೋಳೆ ಸಿದ್ದರಾಜು, ತಾಪಂ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ವಾಟಾಳು ಗ್ರಾಪಂ ಮಾಜಿ ಅಧ್ಯಕ್ಷ ನಾಗೇಶ್, ನಾಗರಾಜು, ಡೈರಿ ಅಧ್ಯಕ್ಷ ಹೆಮ್ಮಿಗೆ ಶೇಷಾದ್ರಿ, ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಸೋಮಣ್ಣ, ಪಪಂ ಮಾಜಿ ಅಧ್ಯಕ್ಷರಾದ ಬಸವಣ್ಣ, ಮಹದೇವಸ್ವಾಮಿ, ಮಾದೇಶ್, ಗುರುಮಲ್ಲ, ಸೋಮಣ್ಣ, ಸೋಸಲೆ ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್, ಕಲಿಯೂರು ಶಿವಣ್ಣ ಭೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ್, ಗುತ್ತಿಗೆದಾರ ಸಂಘದ ಜಿಲ್ಲಾಧ್ಯಕ್ಷ ಹೊಸಪುರ ಮಲ್ಲು, ಭಗೀರಥ ಉಪ್ಪಾರ ಮಹಾಸಭಾ ಅಧ್ಯಕ್ಷ ಕಾವೇರಿಪುರ ಮಹಾದೇವಶೆಟ್ಟಿ, ಎಪಿಎಂಸಿ ಮಾಜಿ ಸದಸ್ಯ ಬಸವಣ್ಣ, ಉಕ್ಕಲಗೆರೆ ರಾಜು, ವಡೆಯಾಂದಳ್ಳಿ ನಾಗರಾಜು ಸೇರಿದಂತೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು, ಮುಖಂಡರು ಹಾಜರಿದ್ದರು.

> ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಮಸ್ತ ಜನಾಂಗದ ಕಣ್ಮಣಿ. ಯಾವುದೇ ಜಾತಿ ಜನಾಂಗ ಕಡೆಗಣಿಸದೇ ಭೇದ ಭಾವ ಮಾಡದೇ ಎಲ್ಲರನ್ನೂ ಸಮಾನವಾಗಿ ಕಾಣುತ್ತಿದ್ದಾರೆ. ಅವರು ಕ್ಷೇತ್ರದಲ್ಲಿ ಜಾತಿ ತಾರತಮ್ಯ ಮಾಡದೇ ಇರುವುದರಿಂದಲೇ ಇಂದು ಅತಿ ಎತ್ತರಕ್ಕೆ ಬೆಳೆದಿದ್ದಾರೆ. ಇನ್ನು ಕ್ಷೇತ್ರದ ಅಭಿವೃದ್ಧಿ ವಿಷಯಕ್ಕೆ ಬಂದರೆ ಅವರಿಗೆ ಸರಿ ಸಮಾನವಾಗಿ ಅಭಿವೃದ್ಧಿ ಕೆಲಸ ಮಾಡುವ ಮತ್ತೊಬ್ಬರನ್ನು ನಾವೂ ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಕ್ಷೇತ್ರಕ್ಕೆ ಈಗಾಗಲೇ ಆಗಬೇಕಾದ ಕೆಲಸಗಳನ್ನೆಲ್ಲಾ ಮಾಡಿರುವ ಅವರು ರಾಜ್ಯದ ಅಭಿವೃದ್ಧಿಯೆಡೆಗೆ ಗಮನ ಹರಿಸಿದ್ದಾರೆ. ಅವರಿಗೆ ದೇವರು ಇನ್ನೂ ಹೆಚ್ಚಿನ ಜನಸೇವೆ ಮಾಡುವ ಶಕ್ತಿ ಸಾಮರ್ಥ್ಯ ಹಾಗೂ ಅಧಿಕಾರ ನೀಡಲಿ.
> - ಕುಕ್ಕೂರು ಗಣೇಶ್, ತಾಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ.



ಕಾಂಗ್ರೆಸ್ ಕಾರ್ಯಕರ್ತರು ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರ ಹುಟ್ಟುಹಬ್ಬ ಆಚರಿಸಿದರು.

ಸಚಿವರಿಗೆ ಹುಟ್ಟುಹಬ್ಬದ ಶುಭಾಶಯ



ಭಾನುವಾರ 72ನೇ ವರ್ಷದ ಹುಟ್ಟುಹಬ್ಬ ಆಚರಿಸಿಕೊಂಡ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜ್ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಮುಖಂಡರಾದ ಅನಿಲ್ ಬೋಸ್, ಗೋಪಾಲ್, ಶಿವಣ್ಣ, ರಾಮಣ್ಣ, ಮಹೇಶ್ ಮತ್ತಿತರರಿದ್ದರು.

ಉಪಾಧ್ಯಾಯರ ಸಹಕಾರ ಸಂಘಕ್ಕೆ ನಿರ್ದೇಶಕರ ಆಯ್ಕೆ



ಹೆಚ್.ಡಿ.ಕೋಟೆ ಉಪಾಧ್ಯಾಯರ ಪತ್ತಿನ ಸಹಕಾರ ಸಂಘಕ್ಕೆ ನಿರ್ದೇಶಕರನ್ನು ಆಯ್ಕೆ ಮಾಡಲಾಯಿತು.

ಹೆಚ್.ಡಿ.ಕೋಟೆ, ಏ.20– ತಾಲೂಕು ಉಪಾಧ್ಯಾಯರ ಪತ್ತಿನ ಸಹಕಾರ ಸಂಘದ ಮುಂದಿನ 5 ವರ್ಷಗಳ ಅವಧಿಗೆ ಭಾನುವಾರ ಸಂಘದ ಕಚೇರಿ ಆವರಣದಲ್ಲಿ ನಿರ್ದೇಶಕರನ್ನು ಆಯ್ಕೆ ಮಾಡಲಾಯಿತು.

ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಯಶವಂತ್, ಎಂ.ಕುಮಾರ್, ಎಂ.ಪ್ರಕಾಶ್, ಕೆಂಪರಾಜು, ಬಿ.ಎಂ.ನಾಗೇಶ, ಪುಟ್ಟಾಚಾರಿ, ಎ.ಆರ್.ಮಂಜುನಾಥ್, ಎನ್.ಆನಂದ, ಎಚ್.ಜಿ.ಚಿಕ್ಕದೇವಯ್ಯ, ಎ.ಎಸ್.ಮಹದೇವ, ಪ.ಜಾತಿ ಮೀಸಲು ಕ್ಷೇತ್ರದಿಂದ ಎಸ್.ಬಿ.ಸೋಮಸುಂದರ್, ಪ.ಪಂಗಡ ಮೀಸಲು ಕ್ಷೇತ್ರದಿಂದ ಹೊಸಮಾಳ ನಾಗನಾಯಕ, ಹಿಂದುಳಿದ ವರ್ಗಗಳ ಪ್ರವರ್ಗ 'ಎ' ಕ್ಷೇತ್ರದಿಂದ ಎಸ್.ಬಿ. ಮಹೇಶ್, ಹಿಂದುಳಿದ ವರ್ಗಗಳ ಪ್ರವರ್ಗ 'ಬಿ' ಕ್ಷೇತ್ರದಿಂದ ಎನ್.ಮಹದೇವಸ್ವಾಮಿ, ಮಹಿಳಾ ಮೀಸಲು ಕ್ಷೇತ್ರದಿಂದ ಎಂ.ಎ.ಸವಿತಾ ಮತ್ತು ಜೂಲಿಯಟ್ ವಿಲ್ಮಾ ಷಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿ ಜಿ.ಅನುಸೂಯ ಮತ್ತು ಸಿಇಓ ಚಿಕ್ಕೆರೆಯೂರು ಎಸ್.ಶಿವಕುಮಾರ್ ಕಾರ್ಯ ನಿರ್ವಹಿಸಿದರು.

ಅಭಿವೃದ್ಧಿಯ ಹರಿಕಾರ ಸಚಿವ ಮಹದೇವಪ್ಪ

ಶ್ರೀಕಂಠೇಶ್ವರ ಸಮಿತಿ ಮಾಜಿ ಅಧ್ಯಕ್ಷ ಇಂಧನಬಾಬು

ನಂಜನಗೂಡು, ಏ.20– ಡಾ.ಹೆಚ್.ಸಿ. ಮಹದೇವಪ್ಪನವರು ದೂರದೃಷ್ಟಿವುಳ್ಳ ಅಭಿವೃದ್ಧಿಯ ಹರಿಕಾರ. ಮೈಸೂರು ಜಿಲ್ಲೆ, ವಿಶೇಷವಾಗಿ ನಂಜನಗೂಡು ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ ಎಂದು ಶ್ರೀಕಂಠೇಶ್ವರ ಸಮಿತಿ ಮಾಜಿ ಅಧ್ಯಕ್ಷ ಇಂಧನಬಾಬು ತಿಳಿಸಿದರು.

ಡಾ.ಹೆಚ್.ಸಿ.ಮಹದೇವಪ್ಪನವರ ಹುಟ್ಟುಹಬ್ಬ ಹಿನ್ನೆಲೆಯಲ್ಲಿ ನಂಜನಗೂಡು ಮತ್ತು ವರುಣ ಕ್ಷೇತ್ರದ ಅಭಿಮಾನಿಗಳು ಶ್ರೀಕಂಠೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಮಹದೇವಪ್ಪನವರ ಹೆಸರಿನಲ್ಲಿ ಅರ್ಚನೆ ಮಾಡಿಸಿ ದೇವಾಲಯದ ಮುಂಭಾಗ ಕೇಕ್ ಕತ್ತರಿಸಿ ಸಿಹಿ ಹಂಚುವ ಮೂಲಕ ಹುಟ್ಟುಹಬ್ಬ ಆಚರಿಸಿದ ವೇಳೆ ಅವರು ಮಾತನಾಡಿದರು.

ಕಳೆದ ಬಾರಿ ಲೋಕೋಪಯೋಗಿ, ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ವೇಳೆ ನಂಜನಗೂಡು ತಾಲೂಕಿಗೆ ಅಪಾರ ಅನುದಾನ ತಂದು ಪ್ರತಿ ಗ್ರಾಮಗಳಲ್ಲಿ ಅಭಿವೃದ್ಧಿ ಕೆಲಸ ನಡೆಸಿದ್ದಾರೆ. ಜೊತೆಗೆ ರಾಜ್ಯಾದ್ಯಂತ ರಸ್ತೆಗಳನ್ನು ಅಭಿವೃದ್ಧಿಪಡಿಸಿ ರಸ್ತೆಗಳ ರಾಜ ಎಂದೇ ಬಿರುದು ಪಡೆದು ವಿಪಕ್ಷಗಳ ನಾಯಕರಿಂದಲೂ ಹೊಗಳಿಸಿಕೊಂಡ ದೂರದೃಷ್ಟಿಯುಳ್ಳ ಅಭಿವೃದ್ಧಿ ಚಿಂತಕರಾಗಿದ್ದಾರೆ. ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯಕ್ಕೆ ತಕ್ಕಂತೆ ರಾಜಕಾರಣ ಮಾಡುತ್ತಿರುವ ಅವರು ಸಂವಿಧಾನದ ರಕ್ಷಣೆಯನ್ನು ತಮ್ಮ ಮಂತ್ರವಾಗಿಸಿಕೊಂಡಿದ್ದಾರೆ. ಆ ನಿಟ್ಟಿನಲ್ಲಿ ಸಂವಿಧಾನದ ಮಹತ್ವವನ್ನು ಎಲ್ಲರಿಗೂ ತಲುಪಿಸುವ ಸಲುವಾಗಿ ಈ ಬಾರಿ ಸಮಾಜ ಕಲ್ಯಾಣ ಇಲಾಖೆ ಸಚಿವರಾಗಿ ಸಂವಿಧಾನ ಪೀಠಿಕೆ ಓದುವುದು. ಬೀದರ್‌ನಿಂದ ಚಾಮರಾಜನಗರದವರೆಗೆ ಮಾನವ ಸರಪಳಿ ನಿರ್ಮಿಸುವ ಕಾರ್ಯಕ್ರಮ ರೂಪಿಸಿದ್ದಾರೆ. ಜೊತೆಗೆ ಸಂವಿಧಾನದ ಆಶಯಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡಿದ್ದಾರೆ. ಹಲವಾರು ಬಾರಿ ಸಚಿವರಾಗಿ ಎಲ್ಲಾ ಖಾತೆಗಳನ್ನು ಸಮರ್ಥವಾಗಿ ನಿಭಾಯಿಸಿ ರಾಜ್ಯದ ಅಭಿವೃದ್ಧಿಗೆ ಕೊಡಿಗೆ ನೀಡಿದ್ದಾರೆ. ಮುಖ್ಯಮಂತ್ರಿಗಳಾಗಿ ಕೆಲಸ ಮಾಡುವ ಯೋಗ ಕೂಡಿ ಬರಲಿ, ದೇವರು ಅವರಿಗೆ ಆಯಸ್ಸು ಆರೋಗ್ಯ ಕೊಟ್ಟು ಕಾಪಾಡಲಿ ಎಂದರು.



ಕಾಂಗ್ರೆಸ್ ಕಾರ್ಯಕರ್ತರು ಸಚಿವ ಮಹದೇವಪ್ಪನವರ ಹುಟ್ಟುಹಬ್ಬ ಆಚರಿಸಿದರು.

ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ ಮಾತನಾಡಿದರು. ಈ ವೇಳೆ ಮುಖಂಡರಾದ ಬುಲೆಟ್ ಮಹದೇವಪ್ಪ, ಎನ್.ಟಿ.ಗಿರೀಶ್, ಜಿಪಂ ಮಾಜಿ ಸದಸ್ಯರಾದ ಕೆ.ಬಿ.ಸ್ವಾಮಿ, ಶಶಿರೇಖಾ, ಚೋಳರಾಜು, ತಗಡೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ತಾಪಂ ಮಾಜಿ ಸದಸ್ಯ ಮೂಗಶೆಟ್ಟಿ ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಕೆಂಪಣ್ಣ, ಮುಖಂಡರಾದ ಪರಶಿವಮೂರ್ತಿ, ಬಿ.ಪಿ.ಮಹದೇವು, ನಟರಾಜ, ಶಿವಬಸಪ್ಪ, ಮಹದೇವು, ಸೋಮಸುಂದರ, ನಗರಸಭಾ ಸದಸ್ಯರಾದ ಎನ್.ಎಸ್.ಯೋಗೀಶ್, ಕಾರ್ಯಕರ್ತರು ಉಪಸ್ಥಿತರಿದ್ದರು.


ಹಸಿರು ನಮ್ಮ ಉಸಿರು

ಹೆಚ್.ವಿಶ್ವನಾಥ್ ದಂಪತಿಗೆ ಅಭಿಮಾನಿಗಳ ಶುಭಹಾರೈಕೆ

ಕೆ.ಆರ್.ನಗರ, ಏ.20– ರಾಜಕೀಯ ವಲ್ಲದೇ ಸಾಹಿತ್ಯ, ಕಲೆ, ಸಂಸ್ಕೃತ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದಿರುವ ಮಾಜಿ ಸಚಿವ, ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಮತ್ತು ಪತ್ನಿ ಶಾಂತಮ್ಮ ಅವರ ದಾಂಪತ್ಯ ಜೀವನ ಸುಖಕರವಾಗಿರಲಿ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಶುಭ ಕೋರಿದರು.

ಪಟ್ಟಣದ ಶ್ರೀಚಂದ್ರಮೌಳೇಶ್ವರ ದೇವಸ್ಥಾನದ ಎದುರು ಹೆಚ್.ವಿಶ್ವನಾಥ್ ಅವರ ಅಭಿಮಾನಿಗಳು ಮತ್ತು ಹಿತೈಷಿಗಳು ಏರ್ಪಡಿಸಿದ್ದ ಅಡಗೂರು ಹೆಚ್.ವಿಶ್ವನಾಥ್ ಅವರ 50ನೇ ವರ್ಷದ ವಿವಾಹ ವಾರ್ಷಿಕೋತ್ಸವದಲ್ಲಿ ದಂಪತಿಗಳನ್ನು ಸನ್ಮಾನಿಸಿ ಮಾತನಾಡಿದ ಅವರು, ವಿಶ್ವನಾಥ್ ಅವರು ಆಡುವುಟ್ಟಿದ ಸೊಪ್ಪಿಲ್ಲ ಎಂಬಂತೆ ಎಲ್ಲಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ಛಾಪು ಮೂಡಿಸಿದ್ದಾರೆ ಎಂದರು.

ವಿಶ್ವನಾಥ್ ಅವರು ವಕೀಲ, ಕೃಷಿ ಮತ್ತು ಭೂ ಅಭಿವೃದ್ಧಿ ಬ್ಯಾಂಕ್ ನಿರ್ದೇಶಕ, ಅಧ್ಯಕ್ಷ, ಶಾಸಕ, ಸಚಿವ, ಸಂಸತ್ ಸದಸ್ಯ, ವಿಧಾನಪರಿಷತ್ ಸದಸ್ಯ, ಲೇಖಕ, ಕಲಾವಿದ, ಕವಿಯಾಗಿ ಅವರು ಮಾಡಿದ ಸಾಧನೆ ಇಂದಿನ ಯುವ ಪೀಳಿಗೆಗೆ ಮಾದರಿಯಾಗಿದ್ದು, ಅವರು ಹಾಕಿಕೊಟ್ಟ ದಾರಿಯಲ್ಲಿ ಈಗಿನ ಯುವಕರು ಸಾಗಬೇಕು ಎಂದರು.



ಅಡಗೂರು ಹೆಚ್.ವಿಶ್ವನಾಥ್, ಅವರ ಪತ್ನಿ ಶಾಂತಮ್ಮ ಅವರನ್ನು ಮಾಜಿ ಸಚಿವ ಸಾ.ರಾ.ಮಹೇಶ್ ಸನ್ಮಾನಿಸಿದರು.

ತಮ್ಮ ಅಧಿಕಾರಾವಧಿಯಲ್ಲಿ ವಿದ್ಯಾರ್ಥಿಗಳಿಗೆ ಬಿಸಿಯೂಟ ಯೋಜನೆ, ಆರೋಗ್ಯಕ್ಕಾಗಿ ಯಶಸ್ವಿನಿ, ಸಮುದಾಯದತ್ತ ಶಾಲೆ, ಮಹಿಳಾ ಸಂಘಗಳ ಸ್ಥಾಪನೆ ಸೇರಿದಂತೆ 10 ಹಲವು ಜನಪರ ಯೋಜನೆಗಳನ್ನು ಜಾರಿಗೆ ತಂದು ಇಂದಿಗೂ ಜನಮನದಲ್ಲಿ ಶಾಶ್ವತವಾಗಿ ಉಳಿದಿದ್ದಾರೆ ಎಂದರು.

ಇಂತಹ ಜನಪ್ರಿಯ ನಾಯಕನಿಗೆ ಸಹಕಾರ ನೀಡಿದ ಅವರ ಶ್ರೀಮತಿ ಶಾಂತಮ್ಮ ಅವರನ್ನು ನಾವು ಮರೆಯುವಂತಿಲ್ಲ. ಹೆಚ್.ವಿಶ್ವನಾಥ್ ಅವರು ಏನೇ ಮಾಡಿದರೂ ಯಾವುದೇ ಸಂದರ್ಭದಲ್ಲಿಯೂ ವಿರೋಧ ಮಾಡದೆ ಪ್ರೋತ್ಸಾಹ ನೀಡಿದ ಅವರ ಗುಣ ಪ್ರತಿಯೊಬ್ಬ ಹೆಣ್ಣು ಮಕ್ಕಳು ಪಾಲಿಸಬೇಕಾಗಿದೆ ಎಂದು ತಿಳಿಸಿದ ಮಾಜಿ ಸಚಿವರು ಇವರ ದಾಂಪತ್ಯ ಜೀವನ ಇನ್ನೂ ಹೆಚ್ಚು ಕಾಲ ಹೀಗೆ ಇದ್ದು ಜನಸೇವೆ ಮಾಡುವಂತಾಗಲಿ ಎಂದರು.

ಇದಕ್ಕೂ ಮೊದಲು ಸಾಗರೋಪಾದಿಯಲ್ಲಿ ಬಂದ ಸಾವಿರಾರು ಅಭಿಮಾನಿಗಳು, ಹಿತೈಷಿಗಳು ಹಾರಾ ತುರಾಯಿಗಳನ್ನು ಹಾಕುವ ಮೂಲಕ ದಂಪತಿಗಳಿಬ್ಬರಿಗೂ ಶುಭಾಶಯ ಕೋರಿದಲ್ಲದೆ ಚಂದ್ರಮೌಳೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸುವ ಮೂಲಕ ತಮ್ಮ ನಾಯಕನ ಯಶಸ್ವಿ ಹಾದಿ ಇದೆ ರೀತಿ ಮುಂದೆ ಸಾಗಲಿ ಎಂದು ಕೋರಿದರು.

ನವನಗರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಬಸಂತ್, ಪುರಸಭಾ ಅಧ್ಯಕ್ಷ ಶಿವುನಾಯಕ್, ಪುರಸಭಾ ಸದಸ್ಯರಾದ ನಟರಾಜ್, ಪ್ರಭುಶಂಕರ್, ಜಗದೀಶ್, ಸಂತೋಷ್‌ಗೌಡ, ಉಮೇಶ್, ಡಾ.ಮೆಹಬೂಬ್ ಖಾನ್, ಜೆಡಿಎಸ್ ಅಧ್ಯಕ್ಷ ಕುಮಾರ್, ಮೆಡಿಕಲ್ ರಾಜಣ್ಣ, ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್ ಜಿಪಂ ಮಾಜಿ ಅಧ್ಯಕ್ಷ ಸಿದ್ದಪ್ಪ, ಸಾ.ರಾ. ನಂದೀಶ್, ಅಮಿತ್ ವಿ.ದೇವರಟ್ಟಿ, ನಗರ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಕುಮಾರ್ ಸೇರಿದಂತೆ ಇತರರಿದ್ದರು.

ಗುರು ಶಿಷ್ಯರ ಸಂಬಂಧ ಪವಿತ್ರವಾದದು

ಸಹ ಪ್ರಾಧ್ಯಾಪಕ ಡಾ.ನಂಜುಂಡಸ್ವಾಮಿ ಹರದನಹಳ್ಳಿ ಅಭಿಪ್ರಾಯ

ಹೆಚ್.ಡಿ.ಕೋಟೆ, ಏ.20– ಗುರು ಶಿಷ್ಯರ ನಡುವಿನ ಸಂಬಂಧ ಪವಿತ್ರವಾದದು ಎಂದು ಹುಣಸೂರು ಮಹಿಳಾ ಕಾಲೇಜಿನ ಸಹ ಪ್ರಾಧ್ಯಾಪಕ ಡಾ.ನಂಜುಂಡಸ್ವಾಮಿ ಹರದನಹಳ್ಳಿ ಅಭಿಪ್ರಾಯಪಟ್ಟರು.

ತಾಲೂಕಿನ ಎನ್.ಬೆಳತ್ತೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಳೇ ವಿದ್ಯಾರ್ಥಿಗಳಿಂದ ಆಯೋಜಿಸಿದ್ದ ಗುರುವಂದನಾ ಹಾಗೂ ಸ್ನೇಹ ಸ್ಪಂದನ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಮಾನವನ ಸಂಬಂಧವನ್ನು ಸ್ನೇಹ, ಪ್ರೀತಿ–ಪ್ರೇಮ, ಮಮತೆ ಹೀಗೆ ಕರೆಯುವಾಗ ಗುರು ಶಿಷ್ಯರ ನಡುವಿನ ಸಂಬಂಧ ಭಕ್ತಿಯಿಂದ ಕೂಡಿರುತ್ತದೆ. ಹರಿಹರ ಕವಿಯ ಭಕ್ತಿ ಹೇಗೆ ನಂಬಿದ ದೇವರ ಮೇಲೆ ಇತ್ತು ಹಾಗೆ ಇಂದಿನ ಕಾರ್ಯಕ್ರಮ ನಡೆಯುತ್ತಿದೆ. ಜಿ.ಎಸ್.ಶಿವರುದ್ರಪ್ಪ–ವ್ಯಾಸರಾವ್, ರಾಮಕೃಷ್ಣ ಪರಮಹಂಸ–ಸ್ವಾಮಿ ವಿವೇಕಾನಂದ, ಗೋವಿಂದ ಭಟ್ಟ–ಸಂತ ಶಿಶುನಾಳ ಶರೀಫ್, ಕುವೆಂಪು– ವೆಂಕಣ್ಣಯ್ಯ, ಪ್ಲೇಟೋ–ಅರಿಸ್ಟಾಟಲ್ ನಡುವಿನ ಗುರು ಭಕ್ತಿಯನ್ನು ತಿಳಿಸಿ ಭಕ್ತಿ ಭಂಡಾರಿ ಬಸವಣ್ಣ, ಮಾದರ ಚೆನ್ನಯ್ಯನ ಮನೆಯ ಮಗ ನಾನು ಎಂದು ಹೇಳುವ ಮೂಲಕ ಭಕ್ತಿ ಮೆರೆದಿದ್ದಾರೆ. ಬೇಡರ ಕಣ್ಣಪ್ಪ ಮತ್ತು ಏಕಲವ್ಯರ ಭಕ್ತಿ ಇಂದಿಗೂ ಸಾಹಿತ್ಯದ ಸಂದರ್ಭ, ಸಮಾಜದ ಸಂದರ್ಭ ಹೇಳುತ್ತೇವೆ. ಗುರುಭಕ್ತಿಗೆ ಜಾತಿ, ಮತ, ಧರ್ಮ, ಲಿಂಗ ಯಾವುದೇ ತಾರತಮ್ಯತೆ ಇಲ್ಲ. ಹಸು ಹುಲ್ಲು ತಿಂದು ಹಾಲು ಕೊಡುವಂತೆ ಅವಿದ್ಯಾವಂತ ಮಗುವಿಗೆ ಜ್ಞಾನ ಕೊಡುವವರೇ ಗುರು. ಇಂದು ಬದಲಾದ ಸಮಾಜದಲ್ಲಿ ಕೆಲವು ದುಷ್ಟರಿಂದ ಪೆನ್ನು ಪುಸ್ತಕ ಹಿಡಿಯುವ ಕೈಗಳು ಖಡ್ಗ, ಬಾಂಬ್, ಗನ್‌ಗಳನ್ನು ಹಿಡಿಯುವಂತಹ ಕೆಟ್ಟ ವ್ಯವಸ್ಥೆ ಇದೆ. ಮಕ್ಕಳ ಕೈಗೆ ಮೊಬೈಲ್ ಕೊಡುವ ಬದಲು ಪೆನ್ನು, ಪುಸ್ತಕ ಕೊಡಿ ಎಂದರು.



ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು.


ಉದ್ಯಮಿ ನಿಂಗರಾಜು ಮಾತನಾಡಿ, ಗುರುವಿನ ಶಿಕ್ಷಣದಿಂದ ನಾವು ಬದುಕನ್ನು ಉತ್ತಮವಾಗಿ ಕಟ್ಟಿಕೊಂಡಿದ್ದೇವೆ. ಓದುವಾಗ ನಮಗೆ ತಂದೆ ತಾಯಿಯಂತೆ ಸಹಕಾರ, ಸಹಾಯ ನೀಡಿದ್ದು, ಹಾಡು, ಅಭಿನಯ ಕಲಿಸಿದವರು ಗುರುಗಳು ಎಂದರು.

ಕಾರ್ಯಕ್ರಮದಲ್ಲಿ ಗುರುವಂದನೆ ಸ್ವೀಕರಿಸಿದ ನಿವೃತ್ತ ಶಿಕ್ಷಕರಾದ ಸ್ವಾಮಿನಾಯಕ, ವರದನಾಯಕ, ಬಸವರಾಜು, ಸುಂದರಮ್ಮಣಿ ತಮ್ಮ ಅನುಭವ ಹಂಚಿಕೊಂಡರು. ಸಾಧಕರಾದ ವೈದ್ಯಕೀಯ ಆಡಳಿತಾಧಿಕಾರಿ ಡಾ.ಪುಟ್ಟರಾಜು, ಮಹೇಶ್, ಶಿವಕುಮಾರ್, ಭೀಮರಾಜ್, ಕೆಂಪರಾಜ್ ಗೌರವ ಸ್ವೀಕರಿಸಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಪಿಡಿಓ ವೀರನಾಯಕ, ಕೆಂಪರಾಜು, ಉಮೇನ್ ಪಾಷ, ಕುಮಾರ್ ಸೇರಿದಂತೆ ನೂರಾರು ಹಳೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಹೆತ್ತ ತಾಯಿಯನ್ನೇ ಹತ್ಯೆಗೈದ ಮಗ

ಬೈಲಕುಪ್ಪೆ, ಏ.20– ಕುಡಿಯಲು ಹಣ ನೀಡಲಿಲ್ಲವೆಂದು ಪುತ್ರ ನೋರ್ವ ಹೆತ್ತ ತಾಯಿಯನ್ನೇ ಹತ್ಯೆ ಮಾಡಿರುವ ಘಟನೆ ಬೈಲಕುಪ್ಪೆ ಠಾಣಾ ವ್ಯಾಪ್ತಿಯ ನವಿಲೂರು ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿವಾಸಿ ಗೌರಮ್ಮ(60) ಮಗನಿಂದಲೇ ಸಾವಿಗೀಡಾದವರು. ಆರೋಪಿ ಸ್ವಾಮಿ (40)ಯನ್ನು ಬೈಲಕುಪ್ಪೆ ಪೊಲೀಸರು ಬಂಧಿಸಿದ್ದಾರೆ.

ವಿವರ: ಕಳೆದ 2 ತಿಂಗಳ ಹಿಂದೆ ಗೌರಮ್ಮ ಅವರು ಅನಾರೋಗ್ಯದಿಂದ ಬಳಲುತ್ತಿದ್ದ ಪತಿಯ ಚಿಕಿತ್ಸೆಗಾಗಿ 90 ಸಾವಿರ ರೂ.ಗಳಿಗೆ ಒಂದು ಜೊತೆ ದನಗಳನ್ನು ಮಾರಾಟ ಮಾಡಿ ಚಿಕಿತ್ಸೆ ಕೊಡಿಸಿ ಸ್ವಲ್ಪ ಹಣ ಉಳಿಸಿಕೊಂಡಿದ್ದರು ಎನ್ನಲಾಗಿದೆ. ಕುಡಿತದ ದಾಸನಾಗಿದ್ದ ಸ್ವಾಮಿ ಕುಡಿಯಲು ಹಣ ನೀಡುವಂತೆ ನಿತ್ಯ ತನ್ನ ತಾಯಿಯನ್ನು ಪೀಡಿಸುತ್ತಿದ್ದ. ಇತನ ಕಾಟ ತಾಳಲಾರದೇ ಬೇಸತ್ತ ಗೌರಮ್ಮ ತಮ್ಮ ಜಮೀನಿನಲ್ಲಿದ್ದ ಮನೆಗೆ ತಮ್ಮ ಪತಿಯೊಂದಿಗೆ ತೆರಳಿ ವಾಸ ಮಾಡುತ್ತಿದ್ದರು. ಶನಿವಾರ ಬೆಳಗ್ಗೆ ಈಕೆ ಪತಿ ಹುಷಾರಿಲ್ಲದ ಕಾರಣ ಆಸ್ಪತ್ರೆಗೆ ಹೋಗಿದ್ದ ವೇಳೆ ಸ್ವಾಮಿ ಮದ್ಯಪಾನ ಮಾಡಲು ಹಣ ನೀಡುವಂತೆ ಒತ್ತಾಯಿಸಿದ್ದಾನೆ. ಈ ವೇಳೆ ಹಣ ನೀಡದಿದ್ದಾಗ ಗೌರಮ್ಮ ಅವರನ್ನು ಕೈಯಲ್ಲೇ ಹೊಡೆದು ಹತ್ಯೆ ಮಾಡಿದ್ದಾನೆ ಎನ್ನಲಾಗಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಎಸ್ಪಿ ವಿಷ್ಣುವರ್ಧನ್, ಪಿರಿಯಾಪಟ್ಟಣ ವೃತ್ತ ನಿರೀಕ್ಷಕ ಗೋವಿಂದರಾಜು, ಬೈಲಕುಪ್ಪೆ ಎಸ್ಐ ಡಿ.ಆರ್.ರವಿಕುಮಾರ್ ಹಾಗೂ ಸಿಬ್ಬಂದಿಗಳಾದ ಮುದ್ದುರಾಜ್, ರುದ್ರೇಶ್, ಕುಮಾರಸ್ವಾಮಿ ಪರಿಶೀಲನೆ ನಡೆಸಿದರು. ಬಳಿಕ ಆರೋಪಿ ಸ್ವಾಮಿಯನ್ನು ವಶಕ್ಕೆ ಪಡೆದರು. ಈ ಸಂಬಂಧ ಬೈಲಕುಪ್ಪೆ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ದೇವಾಲಯಗಳು ಸಾಂಸ್ಕೃತಿಕ ಕೇಂದ್ರಗಳಾಗಿವೆ: ಸುತ್ತೂರುಶ್ರೀ

ತಿ.ನರಸೀಪುರ, ಏ.20– ದೇವಾಲಯಗಳು ಧಾರ್ಮಿಕ ಕೇಂದ್ರಗಳಾಗಿರದೇ ಸಾಂಸ್ಕೃತಿಕ ಕೇಂದ್ರಗಳಾಗಿವೆ ಎಂದು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಶಂಭುದೇವನಪುರದಲ್ಲಿ ಭಾನುವಾರ ನಡೆದ ಶ್ರೀಶಂಭುಲಿಂಗೇಶ್ವರ ಸ್ವಾಮಿ ದೇವಸ್ಥಾನದ ನೂತನ ಶಿಖರ ಮತ್ತು ಕಳಸಾರೋಹಣ ಹಾಗೂ ದೇವಾಲಯ ಸಂಪ್ರೋಕ್ಷಣ ಕಾರ್ಯಕ್ರಮದ ಧಾರ್ಮಿಕ ಸಭೆಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಒಂದೊಂದು ದೇವಾಲಯಕ್ಕೂ ತನ್ನದೇ ಆದ ವೈಶಿಷ್ಟತೆ ಇದೆ. ಹಿಂದೆ ಮನುಷ್ಯ ತಾನು ಕಲಿತ ಸಂಗೀತ, ನೃತ್ಯ ಅಥವಾ ಯಾವುದೇ ಕಲೆಯ ರಂಗ ಪ್ರವೇಶವನ್ನು ದೇವಾಲಯಗಳಲ್ಲಿ ಮಾಡುತ್ತಿದ್ದನು. ಆ ಮೂಲಕ ತಾವು ಕಲಿತ ಕಲೆಯನ್ನು ಭಗವಂತನಿಗೆ ಸಮರ್ಪಿಸುತ್ತಿದ್ದರು. ಕಲೆ ಮನುಷ್ಯನ ಅವಿಭಾಜ್ಯ ಅಂಗ. ಪ್ರತಿಭೆ ದೇವರು ಕೊಟ್ಟಂತಹ ಕೊಡುಗೆ. ಅದನ್ನು ಭಗವಂತನಿಗೆ ಸಮರ್ಪಣೆ ಮಾಡಬೇಕು. ಆಗ ಆ ಕಲೆಗೆ ಶ್ರೇಷ್ಠತೆ ಬರುತ್ತದೆ ಎನ್ನುವುದು ಭಾರತೀಯ ಸಂಸ್ಕೃತಿಯಲ್ಲಿರುವ ನಂಬಿಕೆಯಾಗಿದೆ ಎಂದರು.

ಪ್ರತಿಯೊಂದು ಲಿಂಗಕ್ಕೂ ಒಂದೊಂದು ಕ್ಷೇತ್ರದಲ್ಲಿ ಒಂದೊಂದು ಹೆಸರಿದೆ. ಇಲ್ಲಿ ಶಂಭುಲಿಂಗೇಶ್ವರ ಎಂದರೆ, ನಂಜನಗೂಡಿನಲ್ಲಿ ನಂಜುಂಡೇಶ್ವರ ಎಂತಲೂ, ಕಾಶಿ ಯಲ್ಲಿ ವಿಶ್ವೇಶ್ವರ ಎಂತಲೂ ಕರೆಯು ತ್ತಾರೆ. ದೇವರಿಗೆ ನಮ್ಮ ಕಲ್ಪನೆಯಲ್ಲಿ ಒಂದೊಂದು ರೂಪ ನೀಡಿದ್ದೇವೆ. ದೇವಾಲಯದಲ್ಲಿ ದೇವರಿದ್ದಾನೆ ಎಂಬ ನಂಬಿಕೆಯಿಂದ ನಮ್ಮ ಆತ್ಮ ಸಂತೋಷಕ್ಕೆ ಪೂರಕವಾಗಿ ಮೂರ್ತಿ ರೂಪ ನೀಡಿದ್ದೇವೆ ಎಂದರು.



ಕಾರ್ಯಕ್ರಮದಲ್ಲಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿದರು.

ಭಗವಂತನಿಗೆ ನಾನಾ ರೂಪಗಳನ್ನು ಕೊಟ್ಟಿದ್ದರೂ, ದೇವರು ಒಬ್ಬನೇ. ಅದಕ್ಕೆ ಬಸವಣ್ಣನವರು ಹೇಳಿದಂತೆ ದೇವನೊಬ್ಬ ನಾಮ ಹಲವು ಎಂಬುದನ್ನು ನಾವು ತಿಳಿಯಬೇಕು. ಕಣ್ಣಿಗೆ ಕಾಣದ್ದು, ಕೈಗೆ ಸಿಗದಿದ್ದು ಎಂದರೆ ಭಗವಂತ. ನಮ್ಮೊಳಗೆ ಭಗವಂತನಿದ್ದಾನೆ. ಒಳ್ಳೆಯ ಕೆಲಸ ಕಾರ್ಯ ಗಳ ಮೂಲಕ, ಮತ್ತೊಬ್ಬರ ಭಾವನೆ, ಕಷ್ಟಕ್ಕೆ ಸ್ಪಂದಿಸುವ ಮೂಲಕ ನಮ್ಮ ಒಳ ಗಿನ ಪರಮಾತ್ಮನಿಗೆ ಸಂತೋಷವಾಗುವಂತೆ ನಡೆದುಕೊಳ್ಳಬೇಕು ಎಂದರು.

ಎಂ.ಎಲ್.ಹುಂಡಿ ವಿರಕ್ತ ಮಠದ ಶ್ರೀ ಗೌರಿಶಂಕರ ಸ್ವಾಮೀಜಿ ಮಾತನಾಡಿದರು. ಕಾರ್ಯಕ್ರಮದ ನಂತರ ಸಾಂಸ್ಕೃತಿಕ ನಾಯಕ ಶ್ರೀ ಬಸವೇಶ್ವರ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಬಿ.ಎಸ್.ಸುಗಂಧರಾಜು ನಿವಾಸದಲ್ಲಿ ಸುತ್ತೂರುಶ್ರೀಗಳಿಗೆ ಪಾದಪೂಜೆ ನಡೆಯಿತು.

ಸಭೆಯಲ್ಲಿ ಹರಚರ ಗುರುಮೂರ್ತಿಗ ಳಿದ್ದರು. ಅಲ್ಲದೇ ನಿವೃತ್ತ ಅಪರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಎಸ್.ಎಂ.ಪುಟ್ಟಬುದ್ಧಿ, ಎಸ್.ಬಿ.ಸುಗಂಧರಾಜು, ಗೌಡ್ರು ದೊಡ್ಡೇಗೌಡರು, ಎಂ.ಗಿರೀಶ್, ನಿವೃತ್ತ ಮುಖ್ಯ ಶಿಕ್ಷಕ ಪುಟ್ಟಬುದ್ಧಿ, ನಿವೃತ್ತ ಉಪತಹಸೀಲ್ದಾರ್ ವಿ.ಪ್ರಭುಸ್ವಾಮಿ, ಬಸವರಾಜು, ಅಂಗಡಿ ಪುಟ್ಟಸ್ವಾಮಿ, ಪರಶಿವ, ರಾಜೇಶ್, ಬಸವಲಿಂಗಪ್ಪ ಸಿ.ಬಸವಣ್ಣ, ಪಿ.ನಾಗರಾಜು, ಮಹದೇವಪ್ಪ ಗ್ರಾಪಂ ಸದಸ್ಯ ಎಸ್.ಮಹೇಶ್, ಎಸ್.ಎಂ. ಜಯಶಂಕರ್ ಮೂರ್ತಿ, ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ಕುಮಾರ್, ಎಸ್.ಬಿ.ಟಿ.ಸುರೇಶ್, ಹೋಟೆಲ್ ಕುಮಾರ್, ವಕೀಲ ಜ್ಞಾನೇಂದ್ರಮೂರ್ತಿ, ಜ್ಯೋತಿ ಪರಮೇಶ್ ಪಟೇಲ್, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಎಸ್ಎಂಆರ್ ಪ್ರಕಾಶ್, ಯುವ ಘಟಕದ ಅಧ್ಯಕ್ಷ ಅಶೋಕ್, ದೊಡ್ಡನಹುಂಡಿ ನಂಜುಂಡ ಸ್ವಾಮಿ, ರವೀಶ, ಎಸ್.ಬಿ.ಶಿವಪ್ರಸಾದ್, ಕಾವೇರಿಪುರ ಮಲ್ಲು, ಪುರಸಭಾ ಸದಸ್ಯ ಎಸ್.ಕೆ. ಕಿರಣ್, ಪಿಎಸಿಸಿ ಬ್ಯಾಂಕ್ ಅಧ್ಯಕ್ಷ ಮಲ್ಲಣ್ಣ, ಆಲ್ದೂದರು ರಾಜ ಶೇಖರ್, ಮೂಗೂರು ಕುಮಾರ ಸ್ವಾಮಿ, ಕರೋಹಟ್ಟಿ ಬಸವರಾಜು ಇತರರಿದ್ದರು.

ಪ್ರಭುಸ್ವಾಮಿ ನಿಧನ



ಕೆ.ಆರ್.ನಗರ, ಏ.20– ಸಾಲಿಗ್ರಾಮ ತಾಲೂಕಿನ ಕುಪ್ಪೆ ಗ್ರಾಮದ ನಿವಾಸಿ ಪ್ರಭುಸ್ವಾಮಿ(86) ಭಾನುವಾರ ಬೆಳಗ್ಗೆ ನಿಧನರಾದರು.

ಮೃತರು ಪತ್ನಿ ನಾಗರತ್ನ, ಪತ್ರಕರ್ತ ಮಹದೇವಸ್ವಾಮಿ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಐಪಿಎಲ್ ಹಂಗಾಮ

ಹಾರ್ದಿಕ್ ಪಡೆಗೆ ಹ್ಯಾಟ್ರಿಕ್ ಗೆಲುವು



ಮುಂಬೈ, ಏ.20– ರೋಹಿತ್ ಶರ್ಮಾ ಹಾಗೂ ಸೂರ್ಯಕುಮಾರ್ ಯಾದವ್ ಅವರ ಅಜೇಯ ಅರ್ಧ ಶತಕದ ಬಲದಿಂದ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಮುಂಬೈ ಇಂಡಿಯನ್ಸ್ 9 ವಿಕೆಟ್‌ಗಳ ಜಯ ದಾಖಲಿಸಿತು. ಈ ಮೂಲಕ ಮುಂಬೈ ಇಂಡಿಯನ್ಸ್ ಹ್ಯಾಟ್ರಿಕ್ ಜಯ ಸಾಧಿಸಿದರೆ, ಸಿಎಸ್‌ಕೆ 6ನೇ ಸೋಲಿನೊಂದಿಗೆ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿ ಉಳಿದಿದೆ.

ಇಲ್ಲಿನ ವಾಂಖೆಡೆ ಕ್ರಿಕೆಟ್ ಸ್ಟೇಡಿಯಂನಲ್ಲಿ ಭಾನುವಾರ ನಡೆದ 2ನೇ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ಸೂಪರ್ ಕಿಂಗ್ಸ್, ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 176 ರನ್ ಗಳಿಸಿತು. ಆರಂಭಿಕ ರಾದ ಶೇಖ್ ರಶೀದ್ (19), ರಚಿನ್ ರವೀಂದ್ರ (5) ಬೇಗನೆ ವಿಕೆಟ್ ಒಪ್ಪಿಸಿ ನಿರಾಸೆ ಮೂಡಿಸಿದರೆ, 17 ವರ್ಷದ ಯುವ ಬ್ಯಾಟ್ಸ್‌ಮನ್ ಆಯುಷ್ ಮ್ಹಾತ್ರೆ ಕೇವಲ 15 ಎಸೆತಗಳಲ್ಲಿ 4 ಬೌಂಡರಿ, 2 ಸಿಕ್ಸ್ ಸಹಿತ 32 ರನ್ ಬಾರಿಸುವ ಮೂಲಕ ಹೊಸ ಭರವಸೆ ಮೂಡಿಸಿ, ದೀಪಕ್ ಚಹಾರ್‌ಗೆ ವಿಕೆಟ್ ಒಪ್ಪಿಸಿದರು.

ನಂತರ ಜೊತೆಯಾದ ಆಲ್‌ರೌಂಡರ್‌ಗಳಾದ ಶಿವಂ ದುಬೆ 32 ಎಸೆತಗಳಲ್ಲಿ 2 ಬೌಂಡರಿ, 4 ಸಿಕ್ಸರ್ ಸಹಿತ 50 ರನ್ ಗಳಿಸಿದರೆ, ರವೀಂದ್ರ ಜಡೇಜಾ 35 ಎಸೆತಗಳಲ್ಲಿ 4 ಬೌಂಡರಿ, 2 ಸಿಕ್ಸ್ ಸಹಿತ 53 ರನ್ ಗಳಿಸಿ ಅಜೇಯರಾಗುಳಿದರು. ಮುಂಬೈ ಪರ ಜಸ್ಪ್ರಿತ್ ಬುಮ್ರಾ 2 ವಿಕೆಟ್ ಪಡೆದರು.

177 ರನ್ ಗುರಿ ಬೆನ್ನತ್ತಿದ ಮುಂಬೈ ಇಂಡಿಯನ್ಸ್ 15.4 ಓವರ್‌ಗಳಲ್ಲಿ ಕೇವಲ 1 ವಿಕೆಟ್ ಕಳೆದುಕೊಂಡು ಜಯ ದಾಖಲಿಸಿತು. ಇಂಪ್ಯಾಕ್ಟ್ ಪ್ಲೇಯರ್ ಆಗಿ ಬಂದ ರೋಹಿತ್ ಶರ್ಮಾ ಹಾಗೂ ಸೂರ್ಯಕುಮಾರ್ ಯಾದವ್ ಅಕ್ಷರಶಃ ಅಬ್ಬರಿಸಿದರು. ರೋಹಿತ್ ಶರ್ಮಾ 45 ಎಸೆತಗಳಲ್ಲಿ 4 ಬೌಂಡರಿ, 6 ಭರ್ಜರಿ ಸಿಕ್ಸ್ ಸಹಿತ ಅಜೇಯ 76 ರನ್ ಚಚ್ಚಿದರೆ, ಸೂರ್ಯಕುಮಾರ್ ಯಾದವ್ 30 ಎಸೆತಗಳಲ್ಲಿ 6 ಬೌಂಡರಿ, 5 ಸಿಕ್ಸ್ ಸಹಿತ 68 ರನ್ ಬಾರಿಸಿದರು. ಶತಕದ ಜೊತೆಯಾಟವಾಡಿದ ಈ ಜೋಡಿ, ಮತ್ತೆ ಲಯಕ್ಕೆ ಬಂದಿರುವುದು ಮುಂಬೈ ಬ್ಯಾಟಿಂಗ್ ಬಲ ಹೆಚ್ಚಿಸಿದೆ.

ಕಳಪೆ ಬೌಲಿಂಗ್: ಮುಂಬೈ ಇಂಡಿಯನ್ಸ್ ಬ್ಯಾಟಿಂಗ್ ಕಟ್ಟಿಹಾಕಲು ಸಿಎಸ್‌ಕೆ ಬೌಲರ್‌ಗಳು ಪರದಾಡಿದರು. ಯಾರ್ಕರ್ ಸ್ಪೆಷಲಿಸ್ಟ್ ಮಥೀಷ ಪತಿರಾನ ಕೇವಲ 1.4 ಓವರ್‌ಗಳಲ್ಲಿ ಬರೋಬ್ಬರಿ 34 ರನ್ ನೀಡಿದರೆ, ಜೇಮೀ ಓವರ್ಟನ್ 2 ಓವರ್‌ಗಳಲ್ಲಿ 29 ರನ್ ಬಿಟ್ಟುಕೊಡುವ ಮೂಲಕ ದುಬಾರಿ ಬೌಲರ್‌ಗಳಾದರು. ರೋಹಿತ್ ಶರ್ಮಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಪಂಜಾಬ್ ಕಿಂಗ್ಸ್ ವಿರುದ್ಧ ಆರ್‌ಸಿಬಿಗೆ ಭರ್ಜರಿ ಜಯ



ಚಂಡೀಗಢ, ಏ.20– ವಿರಾಟ್ ಕೊಹ್ಲಿ (ಅಜೇಯ 73) ಹಾಗೂ ದೇವದತ್ತ ಪಡಿಕ್ಕಲ್ (61) ಆಕರ್ಷಕ ಅರ್ಧಶತಕಗಳ ನೆರವಿನಿಂದ ಪಂಜಾಬ್ ಕಿಂಗ್ಸ್ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರು 7 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿದೆ. ಈ ಮೂಲಕ ಪಾಯಿಂಟ್ ಪಟ್ಟಿಯಲ್ಲಿ 3ನೇ ಸ್ಥಾನಕ್ಕೇರಿದೆ.

ಇಲ್ಲಿನ ಮಹಾರಾಜ ಯಾದವೀಂದ್ರ ಸಿಂಗ್ ಅಂತರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ಭಾನುವಾರ ನಡೆದ ಮೊದಲ ಪಂದ್ಯದಲ್ಲಿ ಟಾಸ್ ಗೆದ್ದ ಆರ್‌ಸಿಬಿ ನಾಯಕ ರಜತ್ ಪಾಟೀದಾರ್ ಫೀಲ್ಡಿಂಗ್ ಆಯ್ದುಕೊಂಡರು. ಸಂಘಟಿತ ಬೌಲಿಂಗ್ ಪ್ರದರ್ಶನ ನೀಡಿದ ಆರ್‌ಸಿಬಿ ಬೌಲರ್‌ಗಳು ಸಾಧಾರಣ ಮೊತ್ತಕ್ಕೆ ಪಂಜಾಬ್ ಕಿಂಗ್ಸ್ ಕಟ್ಟಿಹಾಕುವಲ್ಲಿ ಯಶಸ್ವಿಯಾದರು.

ಪಂಜಾಬ್ ಕಿಂಗ್ಸ್ ಆರಂಭಿಕರಾದ ಪ್ರಿಯಾಂಶ್ ಆರ್ಯ (22 ರನ್), ಪ್ರಬ್‌ಸಿಮ್ರಾನ್ ಸಿಂಗ್ (33) ಮೊದಲ ವಿಕೆಟ್‌ಗೆ 42 ರನ್ ಜೊತೆಯಾಟದ ಮೂಲಕ ಉತ್ತಮ ಆರಂಭ ನೀಡಿದರಾದರೂ ನಂತರ ಬಂದ ನಾಯಕ ಶ್ರೇಯಸ್ ಅಯ್ಯರ್(6), ನೆಹಲ್ ವಧೇರಾ (5) ಬ್ಯಾಟಿಂಗ್ ವೈಫಲ್ಯ ಅನುಭವಿಸಿದರು. ಜೋಸ್ ಇಂಗ್ಲಿಸ್ 29 ರನ್, ಶಶಾಂಕ್ ಸಿಂಗ್ ಅಜೇಯ 31 ರನ್ ಹಾಗೂ ಮಾರ್ಕೊ ಜಾನ್ಸೆನ್ ಅಜೇಯ 25 ರನ್‌ಗಳ ಉಪಯುಕ್ತ ಆಟದ ಹೊರತಾಗಿಯೂ ಅಂತಿಮವಾಗಿ ಪಂಜಾಬ್ ಕಿಂಗ್ಸ್ 6 ವಿಕೆಟ್ ನಷ್ಟಕ್ಕೆ 157 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಆರ್‌ಸಿಬಿ ಪರ ಕೃಣಾಲ್ ಪಾಂಡ್ಯ ಹಾಗೂ ಸುಯೇಶ್ ಶರ್ಮಾ ತಲಾ ಎರಡು ವಿಕೆಟ್ ಪಡೆದು ಮಿಂಚಿದರು.

158 ರನ್‌ಗಳ ಗುರಿ ಬೆನ್ನತ್ತಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು 18.5 ಓವರ್‌ಗಳಲ್ಲಿ ಮೂರು ವಿಕೆಟ್ ನಷ್ಟಕ್ಕೆ ಗುರಿ ತಲುಪಿತು. ರನ್ ಮೆಷಿನ್ ಖ್ಯಾತಿಯ ವಿರಾಟ್ ಕೊಹ್ಲಿ 54 ಎಸೆತಗಳಲ್ಲಿ 7 ಬೌಂಡರಿ, 1 ಸಿಕ್ಸ್ ಸಹಿತ 73 ರನ್ ಗಳಿಸಿ ಅಜೇಯರಾಗುಳಿದರು. ಕೊಹ್ಲಿಗೆ ಉತ್ತಮ ಸಾಥ್ ನೀಡಿದ ದೇವದತ್ತ ಪಡಿಕ್ಕಲ್ 35 ಎಸೆತಗಳಲ್ಲಿ 5 ಬೌಂಡರಿ, 4 ಸಿಕ್ಸರ್ ಸಹಿತ 61 ರನ್ ಗಳಿಸಿದರು. ವಿರಾಟ್ ಕೊಹ್ಲಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ತವರಿನಾಚೆಯ ಅಂಗಳದಲ್ಲಿ ಸತತ ಐದನೇ ಗೆಲುವು: ಇದುವರೆಗೆ 8 ಪಂದ್ಯಗಳನ್ನಾಡಿರುವ ಆರ್‌ಸಿಬಿ 5 ಗೆಲುವು, 3 ಸೋಲು ಕಂಡಿದ್ದು, ತವರಿನಾಚೆಯ ಅಂಗಳದಲ್ಲಿ ಆಡಿರುವ ಎಲ್ಲ ಐದು ಪಂದ್ಯಗಳಲ್ಲಿ ಗೆಲುವು ದಾಖಲಿಸಿದೆ. ಹಾಗೆಯೇ ಈ ಗೆಲುವಿನೊಂದಿಗೆ ಪಂಜಾಬ್ ಕಿಂಗ್ಸ್ ತಂಡವನ್ನು ಹಿಂದಿಕ್ಕಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು, ಅಂಕಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಜಿಗಿತ ಕಂಡಿದೆ.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಗುಜರಾತ್	7	5	2	0	10
ಡೆಲ್ಲಿ	7	5	2	0	10
ಬೆಂಗಳೂರು	8	5	3	0	10
ಪಂಜಾಬ್	8	5	3	0	10
ಲಕ್ನೋ	8	5	3	0	10
ಮುಂಬೈ	8	4	4	0	8
ಕೋಲ್ಕತ್ತಾ	7	3	4	0	6
ರಾಜಸ್ಥಾನ್	8	2	6	0	4
ಹೈದರಾಬಾದ್	7	2	5	0	4
ಚೆನ್ನೈ	8	2	6	0	4

ಇಂದಿನ ಪಂದ್ಯ

ಕೊಲ್ಕತ್ತಾ ನೈಟ್ ರೈಡರ್ಸ್
V/S
ಗುಜರಾತ್ ಟೈಟಾನ್
ಸಮಯ: ಸಂಜೆ 7.30
ಸ್ಥಳ : ಈಡೆನ್ ಗಾರ್ಡನ್ಸ್, ಕೊಲ್ಕತ್ತಾ

ಮಿತ ಬಳಕೆ ಮಾಡದೇ ಇದ್ದರೆ ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೆ ಕ್ಷಾಮ

ನೀರಾವರಿ ಇಲಾಖೆಯ ನಿವೃತ್ತ ಅಧೀಕ್ಷಕ ಅಭಿಯಂತರ ಹೆಚ್.ರಮೇಶ್ ಎಚ್ಚರಿಕೆ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಆಯೋಜಿಸಿದ್ದ 'ಮಳೆ ನೀರಿನ ಸಂಗ್ರಹಣೆ ಮತ್ತು ಬೋರ್‌ವೆಲ್, ತೆರೆದ ಬಾವಿ ಅಂತರ್ಜಲ ಅಭಿವೃದ್ಧಿಯ ಬಗ್ಗೆ ಪ್ಲಂಬಿಂಗ್ ತಂತ್ರಜ್ಞಾನ' ಕುರಿತ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದವರಿಗೆ ಪ್ರಮಾಣ ಪತ್ರ ನೀಡಲಾಯಿತು.

ಮೈಸೂರು,ಏ.20(ಎಂಟಿವೈ)– ಮಳೆ ನೀರು ಸದ್ಬಳಕೆ ಹಾಗೂ ಕುಡಿಯುವ ನೀರಿನ ಮಿತ ಬಳಕೆ ಮಾಡದೇ ಇದ್ದರೆ ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೆ ಕ್ಷಾಮ ಉಂಟಾಗುತ್ತದೆ ಎಂದು ನೀರಾವರಿ ಇಲಾಖೆಯ ನಿವೃತ್ತ ಅಧೀಕ್ಷಕ ಅಭಿಯಂತರ ಹೆಚ್.ರಮೇಶ್ ಎಚ್ಚರಿಸಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ ಆಯೋಜಿಸಿದ್ದ 'ಮಳೆ ನೀರಿನ ಸಂಗ್ರಹಣೆ ಮತ್ತು ಬೋರ್‌ವೆಲ್, ತೆರೆದ ಬಾವಿ ಅಂತರ್ಜಲ ಅಭಿವೃದ್ಧಿಯ ಬಗ್ಗೆ ಪ್ಲಂಬಿಂಗ್ ತಂತ್ರಜ್ಞಾನ' ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಕಳೆದ ಕೆಲವು ವರ್ಷಗಳಿಂದ ಹೆಚ್ಚು ಮಳೆ ಬೀಳುವ ಜಿಲ್ಲೆಗಳಲ್ಲಿನ ಕೆಲವು ಬಡಾವಣೆ, ನಗರ ಪ್ರದೇಶದಲ್ಲಿಯೇ ಕುಡಿಯುವ ನೀರಿನ ಅಭಾವ ಉಂಟಾಗಿರುವುದು ಕಂಡು ಬಂದಿದೆ. ಇದು ಎಚ್ಚರಿಕೆ ಗಂಟೆಯಾಗಿದ್ದು, ಮೈಸೂರು ಸೇರಿದಂತೆ ಎಲ್ಲಡೆ ಇನ್ನಾದರೂ ನೀರಿನ ಮಿತ ಬಳಕೆ ಮಾಡಿ, ಮಳೆ ನೀರನ್ನು ಉಪಯೋಗಿಸದಿದ್ದರೆ ಮುಂದಿನ ದಿನಗಳಲ್ಲಿ ಜಲಕ್ಷಾಮ ಉಂಟಾಗುತ್ತದೆ ಎಂದರು.

ಕೆರೆಗಳು ಜನರಿಗೆ ಜಲಪಾತ್ರೆಯಂತೆ ಇವೆ. ಅವುಗಳ ಸಂರಕ್ಷಣೆಗೆ ಆದ್ಯತೆ ನೀಡಬೇಕಾಗಿದೆ. ಮೈಸೂರು, ಚಾಮರಾಜನಗರ, ಹಾಸನ ಸೇರಿದಂತೆ ವಿವಿದೆಡೆ ಕೆರೆಗಳ ಒತ್ತುವರಿ ಎಗ್ಗಿಲ್ಲದೆ ನಡೆಯುತ್ತಿದೆ. ಮೊದಲು ಕೆರೆ ಒತ್ತುವರಿಗೆ ಕಡಿವಾಣ ಹಾಕಬೇಕು. ಕೆರೆಗಳನ್ನು ಸಂರಕ್ಷಿಸಬೇಕು. ಆಗ ಅಂತರ್ಜಲದ ಪ್ರಮಾಣ ವೃದ್ಧಿಯಾಗುತ್ತದೆ. ಜಾನುವಾರು, ಪ್ರಾಣಿ–ಪಕ್ಷಿಗಳಿಗೂ ಕುಡಿಯುವ ನೀರಿನ ಲಭ್ಯತೆ ಉಂಟಾಗುತ್ತದೆ ಎಂದರು.

ಇತ್ತೀಚಿನ ಕೆಲ ದಶಕಗಳಿಂದ ನದಿ, ಕೆರೆ, ಕಾಲುವೆಗಳಲ್ಲಿ ನೀರು ಕಲುಷಿತಗೊಂಡಿವೆ. ಇಲ್ಲಿನ ನೀರನ್ನು ನೇರವಾಗಿ ಕುಡಿಯಲು ಯೋಗ್ಯವಲ್ಲ ಎಂದು ಸಂಶೋಧನೆಗಳು ಸ್ಪಷ್ಟಪಡಿಸಿವೆ. ನೀರಿನಲ್ಲಿ ಫ್ಲೋರೈಡ್ ಪ್ರಮಾಣ ಹೆಚ್ಚಾಗುತ್ತಿದೆ. ಇದರಿಂದ ಜನರ ಆರೋಗ್ಯದ ಮೇಲೂ ದುಷ್ಪರಿಣಾಮ ಉಂಟಾಗುತ್ತಿದೆ. ಕ್ಲೋರಿನ್ ಅಂಶವುಳ್ಳ ನೀರಿಗೆ ಅಯೋಡಿನ್ ಸೇರಿದರೆ ವಿಷಕಾರಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಶುದ್ಧ ಕುಡಿಯುವ ನೀರಿನ ಬಳಕೆ ಅನಿವಾರ್ಯ ಎಂದು ತಿಳಿಸಿದರು.

ಆರ್‌ಓ ಪ್ಲಾಂಟ್‌ಗಳು ಬಂದ ಮೇಲೆ ಶುದ್ಧ ಕುಡಿಯುವ ನೀರು ಸಿಗುತ್ತದೆ ಎಂದು ಕೆಲವರು ಭಾವಿಸಿದ್ದಾರೆ. ಆರ್‌ಓ ಪ್ಲಾಂಟ್‌ಗಳಲ್ಲಿ ಪೂರೈಕೆಯಾಗುವ ನೀರು ಶುದ್ಧವಾಗಿಲ್ಲ. ಪ್ಲಾಂಟ್‌ಗಳ ನಿರ್ವಹಣೆ ಸರಿಯಾಗಿ ನಡೆಯುತ್ತಿಲ್ಲ. ನೀರನ್ನು ಆರ್‌ಓ ಪ್ಲಾಂಟ್‌ಗಳಲ್ಲಿ ಶುದ್ಧೀಕರಣ ಮಾಡಬೇಕಾದರೆ, ಶೇ.70ರಷ್ಟು ನೀರು ಪೋಲಾಗುತ್ತದೆ. ಶೇ.30ರಷ್ಟು ನೀರು ಮಾತ್ರ ಶುದ್ಧೀಕರಣಗೊಂಡು ಬಳಕೆ ಸಿಗುತ್ತದೆ. ಈ ಹಿನ್ನೆಲೆಯಲ್ಲಿ ಆರ್‌ಓ ಪ್ಲಾಂಟ್‌ಗಳಲ್ಲೂ ಪರಿಪೂರ್ಣವಾದ ಶುದ್ಧ ಕುಡಿಯುವ ನೀರು ಸಿಗುತ್ತಿಲ್ಲ ಎಂದು ವಿಷಾದಿಸಿದರು.

ಮುಂಬರುವ ದಿನಗಳಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗದಂತೆ ತಡೆಗಟ್ಟಲು ಜನರಲ್ಲಿ ಜಾಗೃತಿ ಮೂಡಿಸಬೇಕಾಗಿದೆ. ಅದರಲ್ಲೂ ನಗರ ಪ್ರದೇಶಗಳಲ್ಲಿ ವಿದ್ಯಾವಂತರೇ ನೀರಿನ ಪೋಲು ಮಾಡುತ್ತಿದ್ದಾರೆ. ವಾಹನಗಳನ್ನು ತೊಳೆಯಲು ಕುಡಿಯುವ ನೀರನ್ನೇ ಬಳಸುವುದು, ಮನೆ ಮುಂದೆ ನಲ್ಲಿ ಮೂಲಕ ಅನಗತ್ಯವಾಗಿ ನೀರು ಹಾಕುವುದು ಸೇರಿದಂತೆ ವಿವಿಧ ಸ್ವರೂಪದಲ್ಲಿ ನೀರು ಪೋಲಾಗುತ್ತದೆ. ಅದನ್ನು ತಡೆಗಟ್ಟಲು ಜಾಗೃತಿ ಮೂಡಿಸುವುದೊಂದೆ ಮಾರ್ಗ. ಮನೆಯಲ್ಲಿ ಬಳಸುವ ನೀರನ್ನು ಹೇಗೆ ಮಿತಗೊಳಿಸಬಹುದು. ಕೈ ತೊಳೆದ ನೀರು ವಾಶ್‌ರೂಮ್‌ನಲ್ಲಿ ಮರು ಬಳಕೆ ಮಾಡುವುದು, ಹೊಸ ತಂತ್ರಜ್ಞಾನವುಳ್ಳ ನಲ್ಲಿ ಅಳವಡಿಸಿಕೊಂಡು ನೀರು ಮಿತವಾಗಿ ಬರುವಂತೆ ನೋಡಿಕೊಳ್ಳಬಹುದು. ನೀರಿನ ಯಥೇಚ್ಛ ಬಳಕೆಗೆ ಕಡಿವಾಣ ಹಾಕಲು ಕಡ್ಡಾಯವಾಗಿ ಮೀಟರ್ ಅಳಡಿಸುವ ಕ್ರಮ ಕೈಗೊಳ್ಳಬೇಕಾಗಿದೆ ಎಂದು ತಿಳಿಸಿದರು.

ಹೊಸ ಮನೆ ಕಟ್ಟುವಾಗಿ ಮಳೆ ನೀರಿನ ಸದ್ಬಳಕೆಗೆ ಕ್ರಮ ಕೈಗೊಳ್ಳಬೇಕು. ಮಳೆ ನೀರಿನ ಇಂಗು ಗುಂಡಿ ಕಡ್ಡಾಯಗೊಳಿಸಬೇಕು. ಇಂತಹ ಕ್ರಮ ಪ್ರೋತ್ಸಾಹಿಸಲು ಸರ್ಕಾರ ಅಥವಾ ಸ್ಥಳೀಯ ಸಂಸ್ಥೆಗಳು ಕೆಲ ವಿನಾಯಿತಿ ನೀಡಬೇಕು. ಟೆರೆಸ್ ಮೇಲೆ ಬಿದ್ದ ಮಳೆ ನೀರು ಸುರಕ್ಷಿತವಾಗಿ ಸಂಗ್ರಹವಾಗುವಂತೆ ನೋಡಿಕೊಳ್ಳಬೇಕು. ಪ್ಲಂಬರ್‌ಗಳು ಹೊಸ ಮನೆ ಕೆಲಸದ ವೇಳೆ ಮಳೆ ನೀರಿನ ಸದ್ಬಳಕೆಗೆ ಮಾರ್ಗೋಪಾಯ ಕಂಡು ಹಿಡಿಯಬೇಕೆಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಂಸ್ಥೆಯ ಅಧ್ಯಕ್ಷ ಡಾ.ಆರ್.ದೀಪು, ಸಮಿತಿ ಸದಸ್ಯ ಎಸ್.ಎಸ್.ಮಹದೇವಸ್ವಾಮಿ, ಗೌರವ ಕಾರ್ಯದರ್ಶಿ ಡಾ.ಎಂ.ಎಸ್.ಮೋಹನ್ ಕೃಷ್ಣ, ಕಾರ್ಯಕ್ರಮದ ಸಂಚಾಲಕ ಎಂ.ಕೆ.ನಂಜಯ್ಯ, ಸರ್ ಎಂ. ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಸ್.ಮಹೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಲವತ್ತರ ನಲಿವು ಕಾರ್ಯಕ್ರಮದ ಸಮಾರೋಪ

ಸುಗಮ ಸಂಗೀತ ಕ್ಷೇತ್ರದ ಧ್ರುವತಾರೆ ಹೆಚ್.ಆರ್.ಲೀಲಾವತಿ

ವಿದ್ವಾನ್ ಪ್ರವೀಣ್ ಡಿ.ರಾವ್ ಅಭಿಮತ



'ನಲವತ್ತರ ನಲಿವು' ಕಾರ್ಯಕ್ರಮದ ಸಮಾರೋಪದಲ್ಲಿ ಹಿರಿಯ ಕಲಾವಿದೆ ಹೆಚ್.ಆರ್.ಲೀಲಾವತಿ, ಮಾಜಿ ಮೇಯರ್ ಮೋದಾಮಣಿ, ಬಿ.ಕೆ ಸುಮಿತ್ರಾ, ಡಾ.ರೋಹಿಣಿ ಮೋಹನ್, ಇಂದು ವಿಶ್ವನಾಥ್, ಸುಕುಮಾರ್, ಎಸ್.ರಘುರಾಂ ಸೇರಿದಂತೆ ಇತರರಿದ್ದರು.

ಮೈಸೂರು, ಏ.20(ಎಸ್‌ಪಿಎನ್)–ಹಲವು ವರ್ಷಗಳಿಂದ ಸುಗಮ ಸಂಗೀತ ಕ್ಷೇತ್ರದಲ್ಲಿ ಹಿರಿಯ ಕಲಾವಿದೆ ಹೆಚ್.ಆರ್.ಲೀಲಾವತಿ ಅವರು ಧ್ರುವತಾರೆಯಾಗಿ ಮೆರೆದಿದ್ದಾರೆ ಎಂದು ವಿದ್ವಾನ್ ಪ್ರವೀಣ್ ಡಿ.ರಾವ್ ಅಭಿಪ್ರಾಯಪಟ್ಟರು.

ಮೈಸೂರಿನ ಕುವೆಂಪುನಗರ ಗಾನಭಾರತೀ ಆವರಣದ ರಮಾಗೋವಿಂದ ರಂಗಮಂದಿರದಲ್ಲಿ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ನಾಲ್ಕು ದಿನಗಳ 'ನಲವತ್ತರ ನಲಿವು' ಕಾರ್ಯಕ್ರಮದ ಸಮಾರೋಪದಲ್ಲಿ ಭಾಗವಹಿಸಿ ಮಾತನಾಡಿದರು.

ಹೆಚ್.ಆರ್.ಲೀಲಾವತಿಯವರ ಜೀವನ ಚರಿತ್ರೆ ಕೇಳುವುದು ಎಂದರೆ, ಕನ್ನಡ ನಾಡಿನ ವಿವಿಧ ಕವಿಗಳ ಕಥೆ ಕೇಳಿದಂತೆ. ಬಹುತೇಕ ಎಲ್ಲಾ ಹಿರಿಯ ಕವಿಗಳೊಂದಿಗೆ ನಿಕಟ ಸಂಬಂಧ ಹೊಂದಿದ್ದ ಲೀಲಾವತಿ ಅವರು ಮಾತಿಗೆ ಕುಳಿತರೆ, ಅವರ ವ್ಯಕ್ತಿತ್ವದ ಜೊತೆಗೆ ಕವಿಗಳ, ಸಾಹಿತಿಗಳ ಬದುಕಿನ ಒಳಹೊರಗು ತೆರೆದುಕೊಳ್ಳುತ್ತದೆ ಎಂದರು.

ರಾಷ್ಟ್ರಕವಿ ಕುವೆಂಪು, ದ.ರಾ.ಬೇಂದ್ರೆ, ಗೋಪಾಲ ಕೃಷ್ಣ ಅಡಿಗರು, ಜಿ.ಎಸ್.ಶಿವರುದ್ರಪ್ಪ, ಪ್ರೊ ನಿಸಾರ್ ಅಹಮದ್ ಹಾಗೂ ಲಕ್ಷ್ಮೀನಾರಾಯಣ ಭಟ್, ಕೆ.ಎಸ್.ನರಸಿಂಹಸ್ವಾಮಿ ಸೇರಿದಂತೆ ಅನೇಕ ಖ್ಯಾತನಾಮ ಕವಿಗಳ ಕವಿತೆಗಳನ್ನು ಸ್ವರ ಸಂಯೋಜನೆ ಮಾಡಿ, ಸುಗಮಸಂಗೀತ ಕ್ಷೇತ್ರಕ್ಕೆ ಹೊಸ ದಿಕ್ಕು ತೋರಿದ್ದಾರೆ. ಅಲ್ಲದೆ, ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ ಮೂಲಕ ಸಾವಿರಾರು ಗಾಯಕರನ್ನು ಈ ಕ್ಷೇತ್ರಕ್ಕೆ ಪರಿಚಯಿಸಿದ್ದಾರೆ ಎಂದರು.

ಹೆಚ್.ಆರ್.ಲೀಲಾವತಿಯವರು ಸುಗಮ ಸಂಗೀತ ಅಕಾಡೆಮಿ ಸ್ಥಾಪಿಸಿ 40 ವಸಂತಗಳನ್ನು ಕಂಡಿವೆ. ಈ ಸಂಸ್ಥೆ ಈವರೆಗೆ ಹಲವಾರು ಶ್ರೇಷ್ಠ ಸಂಗೀತಗಾರರನ್ನು ಸಮಾಜಕ್ಕೆ ನೀಡಿದೆ. ಶಾಸ್ತ್ರೀಯ ಸಂಗೀತ ಕಲಿಯಲು ಹೆಚ್ಚು ಕಷ್ಟವೆಂದು ಹಲವರು ಸುಗಮ ಸಂಗೀತ ಕಲಿಕೆಯಲ್ಲಿ ತೊಡಗುತ್ತಾರೆ. ಒಬ್ಬ ಒಳ್ಳೆಯ ಸಂಗೀತಗಾರನಾಗಲು, ಶಾಸ್ತ್ರೀಯ ಸಂಗೀತ ಮೂಲ ನೆಲೆ ಎಂದರು.

ಶಾಸ್ತ್ರೀಯ ಸಂಗೀತ ಕಲಿತರೆ ಎಲ್ಲಾ ಸಂಗೀತವನ್ನು ಸುಲಲಿತವಾಗಿ ಕಲಿಯಬಹುದು. ಒಬ್ಬ ಗಾಯಕ ಸಂಗೀತ ಕಲಿತು ವೇದಿಕೆಯಲ್ಲಿ ಹಾಡಿದರೆ ಅಷ್ಟೇ ಸಾಲದು. ತನ್ನ ಸಂಗೀತ, ಗಾಯನದ ಜೊತೆಗೆ ಕೇಳುಗರ ಮನಸ್ಪರ್ಶಿಸಬೇಕು. ಪ್ರೇಕ್ಷಕರು ಸಂಗೀತದೊಳಹೊಕ್ಕುವಂತೆ ಮಾಡುವುದು ಸಂಗೀತಗಾರನ ಜವಾಬ್ದಾರಿಯಾಗಿರುತ್ತದೆ. ಅಂತಹ ಕೆಲಸವನ್ನು ಲೀಲಾವತಿಯವರು ಮಾಡಿದ್ದು, ತಮ್ಮ ಶಿಷ್ಯ ವರ್ಗಕ್ಕೂ ಈ ನಿಟ್ಟಿನಲ್ಲಿ ಸಂಗೀತ ತರಬೇತಿ ನೀಡಿದ್ದಾರೆ.

ಬಳಿಕ ವೈವಿಧ್ಯಮಯ ಸಂಗೀತ ಕಾರ್ಯಕ್ರಮ 'ಹಾಡಾಗಿ ಹರಿದಾಳೆ' ಹೆಚ್.ಆರ್ ಲೀಲಾವತಿ ಅವರ ಗಾಯನ, ಸಂಗೀತ ಸಂಯೋಜನೆ ಹಾಗೂ ಕಾವ್ಯ ಸಂಗೀತ ಸಂಜೆ ವಿವಿಧ ಜನಪ್ರಿಯ ಗಾಯಕರು ಹಾಗೂ ಸಂಗೀತ ವಾದ್ಯ ಸಂಯೋಜನೆಯಲ್ಲಿ ನಡೆಯಿತು, ಕೆ.ಎಸ್ ನಿಸ್ಸಾರ್ ಅಹಮದ್ ಅವರ ರಚನೆಯ 'ಹೊತ್ತಿ ಉರಿದೆ' ಭಾವಗೀತೆ ಜನಪ್ರಿಯ ಚಲನಚಿತ್ರ ಗಾಯಕಿ (ಜೋಗಿ)ಸುನೀತಾ ಮುರಳಿ ಇಂಪಾಗಿ ಹಾಡಿ ಕೇಳುಗರ ಕಿವಿಗಳನ್ನು ಮಂತ್ರ ಮುಗ್ಧಗೊಳಿಸಿದರು.

ಬಳಿಕ ಗಾಯಕಿ ಲಕ್ಷ್ಮೀ ನಟರಾಜ್, ಇಂದು ನಾಗರಾಜ್, ಕೀರ್ತನ್ ಹೊಳ್ಳ, ಶ್ರೀಲಕ್ಷ್ಮಿ ಬೆಳ್ಮಣ್ಣು ಸೇರಿದಂತೆ ಹಲವರು ಗಾಯನ ನಡೆಸಿಕೊಟ್ಟರು. ವಾದ್ಯ ಸಂಯೋಜನೆ ಕೊಳಲು– ಸಮೀರ್‌ರಾವ್, ಮ್ಯಾಂಡೋಲೀನ್– ಸಿ.ವಿಶ್ವಾಥ್, ಕೀಬೋರ್ಡ್– ಷಣ್ಮುಖ ಸಜ್ಜಾ, ತಬಲ– ವೇಣುಗೋಪಾಲ ರಾಜು, ರಿದಂ ಪ್ಯಾಡ್– ವಿನಯ್ ರಂಗಧೋಳ್ ನಡೆಸಿದರು. ವೇದಿಕೆಯಲ್ಲಿ ಬಿ.ಕೆ ಸುಮಿತ್ರಾ, ಡಾ.ರೋಹಿಣಿ ಮೋಹನ್, ಇಂದು ವಿಶ್ವನಾಥ್, ಚಲನಚಿತ್ರನಟಿ ಅಂಕಿತಾ ಅಮರ್, ಸುಕುಮಾರ್ ಎಸ್.ರಘುರಾಂ ಉಪಸ್ಥಿತರಿಸದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ / ಚಿತ್ರ	
ಪದ್ಮ ಚಿತ್ರಮಂದಿರ	(ದೂ: 2521923)
ಅರ್ಜುನ್ S/O ವೈಜಯಂತಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗುಡ್ ಬ್ಯಾಡ್ ಅಗ್ಲಿ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಿಕಂದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಒಡೆಲಾ–2 (ತೆ)	4 ಪ್ರದರ್ಶನಗಳು
ಗಾಯಿತ್ರಿ	
ವಿದ್ಯಾಪತಿ (ಕ)	4 ಪ್ರದರ್ಶನಗಳು
ರಾಜಕಮಲ್	
ಒಡೆಲಾ–2 (ತೆ)+ ಅರ್ಜುನ್ S/O ವೈಜಯಂತಿ (ತೆ)	2+2 ಪ್ರದರ್ಶನಗಳು
ಸಂಗಂ	
ವಾಮನ (ಕ)	4 ಪ್ರದರ್ಶನಗಳು
ಲಿಡೋ	
ಅಜ್ಞಾತವಾಸಿ (ಕ) ಜಾಟ್ (ಹಿಂ)	2+2 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಗುಡ್ ಬ್ಯಾಡ್ ಅಗ್ಲಿ (ತ): ಬೆ.10.30ಕ್ಕೆ, ಮ.1.25ಕ್ಕೆ, ಸಂ.4.20ಕ್ಕೆ, ರಾ.7.15ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಅಲಪ್ಪುಳ ಜಿಮ್ಖಾನ (ಮ): ಬೆ.10.20ಕ್ಕೆ, ಜಾಕ್ (ತೆ): ಮ.1.20ಕ್ಕೆ, ಸಂ.4.15ಕ್ಕೆ, ಅಜ್ಞಾತವಾಸಿ (ಕ): ರಾ.7.15ಕ್ಕೆ, ಬಜೂಕ (ಮ): ರಾ.9.55ಕ್ಕೆ.
ಸ್ಕ್ರೀನ್ 3	ದಿ ಅಮಚೂರ್ (ಇಂ): ಬೆ.10.40ಕ್ಕೆ, ರಾ.7.15ಕ್ಕೆ, ಅಲಪ್ಪುಳ ಜಿಮ್ಖಾನ (ಮ): ಮ.1.20ಕ್ಕೆ, ರಾ.10ಕ್ಕೆ, ಜಾಟ್ (ಹಿಂ): ಸಂ.4.10ಕ್ಕೆ.
ಸ್ಕ್ರೀನ್ 4	ವಿದ್ಯಾಪತಿ (ಕ): ಬೆ.10.30ಕ್ಕೆ, ರಾ.7.05ಕ್ಕೆ, ವಾಮನ (ಕ): ಮ.1.20ಕ್ಕೆ, ಸಂ.4.15ಕ್ಕೆ, ಜಾಟ್ (ಹಿಂ): ರಾ.9.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ವಿದ್ಯಾಪತಿ (ಕ): ಬೆ.10.45ಕ್ಕೆ, ಸಂ.4.15ಕ್ಕೆ, ಸಂ.6.45ಕ್ಕೆ, ಮನದ ಕಡಲು (ಕ): ಮ.1.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 2	ಗುಡ್ ಬ್ಯಾಡ್ ಅಗ್ಲಿ (ತ): ಬೆ.10.30ಕ್ಕೆ, ಸಂ.4ಕ್ಕೆ, ವಾಮನ (ಕ): ಮ.1.15ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ವಾಮನ (ಕ): ಬೆ.10.40ಕ್ಕೆ, ಸಂ.4.05ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಮ.1.20ಕ್ಕೆ, ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಎಂಪುರನ್ 2 (ಕ): ಮ.12.30ಕ್ಕೆ, ಬಜೂಕ (ಮ): ಮ.3.50ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಯೋಗದಿಂದ ಇಂದ್ರಿಯ ನಿಗ್ರಹ ಸಾಧ್ಯ : ಡಾ. ಸೋನಿಯಾ



ಸುತ್ತೂರು ಶ್ರೀಕ್ಷೇತ್ರದಲ್ಲಿ ಏರ್ಪಡಿಸಿರುವ ಫಾರ್ಮಸಿ ಮತ್ತು ಲೈಫ್ ಸೈನ್ಸ್ ವಿದ್ಯಾರ್ಥಿಗಳ ಶಿಬಿರದಲ್ಲಿ ಡಾ. ಸೋನಿಯಾ ಹಾಗೂ ಡಾ. ಕುಮಾರ್ ಅಕ್ಕಿಹೆಬ್ಬಾಳ್ ಉಪನ್ಯಾಸ ನೀಡಿದರು.

ಸುತ್ತೂರು, ಏ.20– ಯೋಗದಿಂದ ಇಂದ್ರಿಯ ನಿಗ್ರಹ ಸಾಧ್ಯ ಎಂದು ಎಸ್‌ಡಿಎಂ ಆಯುರ್ವೇದ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಸೋನಿಯಾ ಅವರು ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ಫಾರ್ಮಸಿ ಮತ್ತು ಲೈಫ್ ಸೈನ್ಸ್ ವಿದ್ಯಾರ್ಥಿಗಳ ಶಿಬಿರದಲ್ಲಿ ಮಾತನಾಡುತ್ತಾ ತಿಳಿಸಿದರು.

ಮಾನಸಿಕ ಹಾಗೂ ದೈಹಿಕ ಸಮತೋಲನೆಗೆ ಯೋಗ ಅಗತ್ಯವಾಗಿದೆ. ಒತ್ತಡದ ಜೀವನದಿಂದ ವ್ಯಕ್ತಿಯು ಅನೇಕ ಸಮಸ್ಯೆಗಳಿಗೆ ಒಳಗಾಗುತ್ತಾನೆ. ಇದರಿಂದ ಮಧುಮೇಹ, ರಕ್ತದೊತ್ತಡದಂತಹ ಅನೇಕ ವ್ಯಾಧಿಗಳು ಕಾಡುತ್ತವೆ. ದಿನನಿತ್ಯ ಯೋಗಾಭ್ಯಾಸದಿಂದ ಇವೆಲ್ಲವನ್ನು ನಿಯಂತ್ರಿಸಬಹುದು. ವಿದ್ಯಾರ್ಥಿಗಳು ಧ್ಯಾನ, ಪ್ರಾಣಾಯಾಮ, ಸೂರ್ಯ ನಮಸ್ಕಾರಗಳಂತಹ ಸರಳ ಯೋಗಗಳನ್ನು ಪ್ರತಿದಿನ ಅಭ್ಯಸಿಸಿದರೆ, ಮಾನಸಿಕ ಒತ್ತಡವನ್ನು ಹೋಗಲಾಡಿಸಿಕೊಳ್ಳಬಹುದು ಎಂದು ತಿಳಿಸಿದರು.

ಜ್ಯೋತಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರಾಧ್ಯಾಪಕ ಡಾ. ಕುಮಾರ್ ಅಕ್ಕಿಹೆಬ್ಬಾಳ್ ಮಾತನಾಡಿ, ಜೀವನದಲ್ಲಿ ನಿರ್ದಿಷ್ಟ ಗುರಿ, ಉದ್ದೇಶಗಳೊಂದಿಗೆ ಮುನ್ನಡೆಯಬೇಕು. ಪರಾವಲಂಬಿಗಳಾಗದೆ, ಸ್ವಸಾಮರ್ಥ್ಯ ಹಾಗೂ ಸ್ವಾನುಭವಗಳಿಂದ ಕಾರ್ಯನಿರ್ವಹಿಸಬೇಕು. ಯಶಸ್ಸಿಗೆ ಶಿಸ್ತು ಪ್ರಮುಖ ಪಾತ್ರ ವಹಿಸುತ್ತದೆ. ಎಷ್ಟೇ ಬುದ್ಧಿವಂತಿಕೆಯಿದ್ದರೂ ಪರಿಶ್ರಮವಿಲ್ಲದಿದ್ದರೆ ಸಾಧನೆ ಕಷ್ಟಸಾಧ್ಯ. ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮತ್ತು ದೃಢ ಸಂಕಲ್ಪವಿರಬೇಕು. ಸ್ವಾಧ್ಯಾಯ ಬಹಳ ಮುಖ್ಯವಾದದು ಎಂದು ಹೇಳಿದರು.

ಶಿಬಿರಾರ್ಥಿಗಳು ಬೆಳಗ್ಗೆ ಸಾಮೂಹಿಕ ಪ್ರಾರ್ಥನೆ, ಯೋಗಾಭ್ಯಾಸಗಳಲ್ಲಿ ಪಾಲ್ಗೊಂಡಿದ್ದರು. ಸಂಜೆ ದೇಸಿ ಆಟಗಳನ್ನು ಉತ್ಸಾಹದಿಂದ ಆಡಿದರು. ಮೂಲ ಶ್ರೀಮಠ, ಶ್ರೀ ಮಹದೇಶ್ವರರು ರಾಗಿ ಬೀಸಿದ ಕಲ್ಲು ಹಾಗೂ ಐತಿಹಾಸಿಕ ಶ್ರೀ ಸೋಮೇಶ್ವರ ದೇವಸ್ಥಾನ ಹಾಗೂ ಶ್ರೀ ವೀರಭದ್ರೇಶ್ವರ ದೇವಸ್ಥಾನಗಳ ದರ್ಶನ ಪಡೆದರು. ಕೃಷಿ ವಿಜ್ಞಾನ ಕೇಂದ್ರದಲ್ಲಿ ಕೃಷಿಯ ಬಗ್ಗೆ ಮಾಹಿತಿ ಪಡೆದು, ಮಾವಿನ ತೋಟ, ವಿವಿಧ ಬೆಳೆಗಳು ಹಾಗೂ ಗೋ–ಶಾಲೆಯನ್ನು ವೀಕ್ಷಿಸಿದರು. ಕಪಿಲಾ ನದಿ ತೀರದಲ್ಲಿ ಪ್ರಾರ್ಥನೆ ಹಾಗೂ ಕಪಿಲಾರತಿ ಕಾರ್ಯಕ್ರಮದಲ್ಲಿ ಶ್ರದ್ಧಾ ಭಕ್ತಿಗಳಿಂದ ಪಾಲ್ಗೊಂಡರು. ನಂತರ ಶಿಬಿರಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದರು. ಶಿಬಿರದಲ್ಲಿ ಒಟ್ಟು 140 ಶಿಬಿರಾರ್ಥಿಗಳು ಪಾಲ್ಗೊಂಡಿದ್ದಾರೆ.

ಡಾ.ರಾಜ್‌ಕುಮಾರ್ ರಸ್ತೆಯ ಸುಮಾರು 200 ಮೀಟರ್ ಗುಂಡಿಮಯ ; ಎಚ್ಚರ ತಪ್ಪಿದರೆ ಅನಾಹುತ ಗ್ಯಾರಂಟಿ




ಮೈಸೂರಿನ ಡಾ.ರಾಜ್‌ಕುಮಾರ್ ರಸ್ತೆಯ ಯರಗನಹಳ್ಳಿ ಹೊಸ ಬಡಾವಣೆ ಬಳಿ ರಸ್ತೆಯು ಅವ್ಯವಸ್ಥೆಯಿಂದ ಕೂಡಿರುವುದು.

ಮೈಸೂರು,ಏ.20(ಪಿಎಂ)– ಅದೊಂದು ಪ್ರಮುಖ ರಸ್ತೆ. ನಿತ್ಯ ವಾಹನ ಸಂಚಾರ ಇರುವ ಆ ರಸ್ತೆಯ ಸುಮಾರು 200 ಮೀಟರ್ ಹಾದು ಹೋಗುವುದು ಮಾತ್ರ ನರಕ ಯಾತನೆಯೇ ಸರಿ. ಎಂದೋ ಹಾಕಿರುವ ಡಾಂಬರ್‌ನಿಂದ ಕಿತ್ತು ಬಂದಿರುವ ಜಲ್ಲಿಕಲ್ಲುಗಳು ಚಲ್ಲಾಪಿಲ್ಲಿಯಾಗಿ ಹರಡಿದ್ದು, ದ್ವಿಚಕ್ರ ವಾಹನ ಸವಾರರು ಅತ್ಯಂತ ಜಾಗರೂಕತೆಯಿಂದ ಇಲ್ಲಿ ಸಾಗದೇ ಇದ್ದಲ್ಲಿ ಜಾರಿ ಬೀಳುವುದು ಗ್ಯಾರಂಟಿ.

ಅಪಾಯಕಾರಿ ಗುಂಡಿಗಳ ನಡುವೆ ಸವಾರರು ಜೀವ ಕೈಯಲ್ಲಿಡಿದು ಸಾಗುವ ಸನ್ನಿವೇಶ ಅನೇಕ ವರ್ಷಗಳಿಂದ ಇಲ್ಲಿ ನಿರ್ಮಾಣವಾಗಿದೆ. ಈ ಗುಂಡಿಮಯ ರಸ್ತೆಯಲ್ಲಿ ಎಚ್ಚರ ತಪ್ಪಿದರೆ ಅಪಾಯ ತಪ್ಪಿದ್ದಲ್ಲ. ಮಹದೇವಪುರ ಮುಖ್ಯ ರಸ್ತೆ ಹಾಗೂ ಬನ್ನೂರು–ಟಿ.ನರಸೀಪುರ ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುವ ಮೈಸೂರಿನ ಡಾ.ರಾಜ್‌ಕುಮಾರ್ ರಸ್ತೆ ಬಹುತೇಕ ಭಾಗ ಅಭಿವೃದ್ಧಿಗೊಂಡು ಸುವ್ಯವಸ್ಥೆಯಿಂದ ಕೂಡಿದೆ.

ಆದರೆ ಯರಗನಹಳ್ಳಿ ಹೊಸ ಬಡಾವಣೆಯ ಬಳಿ ಸುಮಾರು 200 ಮೀಟರ್ ವ್ಯಾಪ್ತಿಯಲ್ಲಿರುವ ಗುಂಡಿಗಳು ವಾಹನ ಸವಾರರಿಗೆ ನಿತ್ಯ ನರಕದರ್ಶನ ಮಾಡಿಸುತ್ತಿವೆ. ಡಾ.ರಾಜ್‌ಕುಮಾರ್ ರಸ್ತೆ ಅಭಿವೃದ್ಧಿಯಾಗಿದ್ದರೂ ಈ ಭಾಗದಲ್ಲಿ ಮಾತ್ರ ಅಭಿವೃದ್ಧಿ ಮರೀಚಿಕೆಯಾಗಿದೆ. ಇಲ್ಲಿ ವಾಹನ ಸವಾರರು ಸಾಗುವುದು ನಿಜಕ್ಕೂ ಸವಾಲೇ ಸರಿ.

ಶಕ್ತಿನಗರ, ಯರಗನಹಳ್ಳಿ, ಟೀಚರ್ಸ್ ಲೇಔಟ್, ರಾಘವೇಂದ್ರ ನಗರ, ಸಾತಗಳ್ಳಿ ಮೊದಲಾದ ಬಡಾವಣೆಗಳ ಸಾವಿರಾರು ನಾಗರಿಕರು ಈ ರಸ್ತೆಯಲ್ಲಿ ನಿತ್ಯ ಸಂಚರಿಸುತ್ತಾರೆ. ಆದರೆ ಈ ಗುಂಡಿ ಬಿದ್ದಿರುವ ಭಾಗದಲ್ಲಿ ಸಾಗುವುದು ನಿಜಕ್ಕೂ ಸಂಕಷ್ಟವೇ ಸರಿ. ಅಷ್ಟರ ಮಟ್ಟಿಗೆ ಈ ಭಾಗದಲ್ಲಿ ರಸ್ತೆ ದುಸ್ಥಿತಿಗೆ ತಲುಪಿದೆ. ಇನ್ನು ಪಾದಚಾರಿಗಳು ಈ ಭಾಗದ ರಸ್ತೆ ಬದಿಯಲ್ಲಿ ಅತ್ಯಂತ ಎಚ್ಚರಿಕೆಯಿಂದಲೇ ಸಾಗಬೇಕು. ಸಮತಟ್ಟಾದ ನೆಲ ಇಲ್ಲದೇ, ಹಳ್ಳಕೊಳ್ಳಗಳು ಇರುವ ಹಿನ್ನೆಲೆಯಲ್ಲಿ ಜೋಪಾನವಾಗಿ ಹೆಜ್ಜೆ ಹಾಕಿದರಷ್ಟೇ ಅಪಾಯದಿಂದ ಪಾರಾಗಬಹುದು. ಇಲ್ಲವಾದರೆ ಬಿದ್ದು ಕೈಕಾಲು ಮುರಿದುಕೊಳ್ಳುವ ಸಂಕಷ್ಟ ಎದುರಾಗಲಿದೆ.

ಮೈಸೂರು ಮಹಾನಗರ ಪಾಲಿಕೆ ವಾರ್ಡ್ ನಂಬರ್ 36ರ ಯರಗನಹಳ್ಳಿ ಹೊಸ ಬಡಾವಣೆಯ 9ನೇ ಅಡ್ಡರಸ್ತೆ ಹಾಗೂ ಕಾವೇರಿ ವೃತ್ತದ ನಡುವೆ ಈ ಪರಿಯ ಅವ್ಯವಸ್ಥೆ ಉಂಟಾಗಿದೆ. ಮೈಸೂರಿನ ಟಿ.ನರಸೀಪುರ–ಬನ್ನೂರು ರಸ್ತೆಯ ಮೂಲಕ ಇಲ್ಲಿನ ಆರ್.ಮಹದೇವಪ್ಪ ವೃತ್ತದ ಮೂಲಕ ರಾಜ್‌ಕುಮಾರ್ ರಸ್ತೆಗೆ ಸಂಪರ್ಕ ಪಡೆದರೆ, ಬಹುತೇಕ ಉತ್ತಮ ರಸ್ತೆ ಎಂದು ಹೊಸಬರು ಸಾಗಬಹುದು. ಆದರೆ ಯರಗನಹಳ್ಳಿ ಹೊಸಬಡಾವಣೆಯ 9ನೇ ಅಡ್ಡರಸ್ತೆ ಸಮೀಪಕ್ಕೆ ಬರುತ್ತಿದ್ದಂತೆ ಹಠಾತನೇ ರಸ್ತೆಯ ದುಸ್ಥಿತಿ ದರ್ಶನವಾಗುತ್ತದೆ. ಮಾತ್ರವಲ್ಲ, ವಾಹನ ವೇಗ ಕಡಿಮೆ ಮಾಡಿಕೊಳ್ಳದೇ ಹೋದಲ್ಲಿ ಅಪಾಯಕ್ಕೆ ಸಿಲುಕುವುದು ತಪ್ಪಿದ್ದಲ್ಲ.

ಇನ್ನು ಈ ಭಾಗದಲ್ಲಿ ನಿತ್ಯ ಸಂಚರಿಸುವವರ ಪಾಡು ಹೇಳತೀರದು. ಮಳೆ ಬಂದರೆ ರಸ್ತೆಯಲ್ಲಿ ನಿಲ್ಲುವ ನೀರು ಕೆಸರು ಗದ್ದೆಯ ಸನ್ನಿವೇಶ ಸೃಷ್ಟಿಸಲಿದೆ. ಇನ್ನು ಬಿಸಿಲಿದ್ದರೆ ಧೂಳು ಕವಿಯುವ ವಾತಾವರಣ ನಿರ್ಮಾಣವಾಗುತ್ತಿದ್ದು, ಇದರಿಂದ ವಾಹನ ಸವಾರರು ಮಾತ್ರವಲ್ಲದೆ, ಇಲ್ಲಿನ ಅಂಗಡಿ ಮುಂಗಟ್ಟುಗಳವರು ಹಾಗೂ ಸ್ಥಳೀಯ ನಿವಾಸಿಗಳು ನಿತ್ಯ ಸಮಸ್ಯೆ ಅನುಭವಿಸುವಂತಾಗಿದೆ. ರಸ್ತೆಯ ಅವ್ಯವಸ್ಥೆಯಿಂದಾಗಿ ಆಗಾಗ್ಗೆ ಸಣ್ಣಪುಟ್ಟ ಅಪಘಾತಗಳು ಸಂಭವಿಸುತ್ತಿದ್ದು, ಈ ಪೈಕಿ ಬಿದ್ದು ಏಳುತ್ತಿರುವವರಲ್ಲಿ ದ್ವಿಚಕ್ರ ವಾಹನ ಸವಾರರೇ ಹೆಚ್ಚು ಇಂತಹ ಅವ್ಯವಸ್ಥೆಯಿಂದ ತೊಂದರೆ ಅನುಭವಿಸುತ್ತಿರುವವರು ಸ್ಥಳೀಯ ಆಡಳಿತಕ್ಕೆ ಹಿಡಿಶಾಪ ಹಾಕುತ್ತಿದ್ದಾರೆ.

200 ಮೀಟರ್ ರಸ್ತೆ ಅಭಿವೃದ್ಧಿಗೆ ತೊಡಕೇನು?

ಡಾ.ರಾಜ್‌ಕುಮಾರ್ ರಸ್ತೆಯನ್ನು ಬಹುತೇಕ ಅಭಿವೃದ್ಧಿ ಮಾಡಿದ್ದರೂ ಈ ಭಾಗದಲ್ಲೇಕೆ ಹೀಗೆ ಎಂಬ ಪ್ರಶ್ನೆ ಕಾಡದಿರದು. ಈ ಸಂಬಂಧ ಮುಡಾ ಮೂಲಗಳು ಕಾರಣ ತಿಳಿಸಿವೆ. 'ರಸ್ತೆ ನಿರ್ಮಾಣ ಸಂಬಂಧ ಭೂಮಿ ನೀಡಿದ ಕುಟುಂಬಗಳಲ್ಲಿ ಪರಿಹಾರ ಪಡೆಯುವ ಬಗ್ಗೆ ವಿವಾದ ಏರ್ಪಟ್ಟು ಪ್ರಕರಣ ಕೋರ್ಟ್‌ನಲ್ಲಿರುವ ಕಾರಣ ಸದರಿ ಭಾಗದಲ್ಲಿ ರಸ್ತೆ ಅಭಿವೃದ್ಧಿಗೆ ಸಮಸ್ಯೆಯಾಗಿದೆ. ಕೋರ್ಟ್ ಸೂಚಿಸಿದವರಿಗೆ ಮುಡಾ ಪರಿಹಾರಧನ ನೀಡಲಿದೆ. ಸಾರ್ವಜನಿಕ ಹಿತದೃಷ್ಟಿಯಿಂದ ರಸ್ತೆ ಅಭಿವೃದ್ಧಿಗೆ ಅವಕಾಶ ನೀಡಬೇಕೆಂದು ಮುಡಾದಿಂದ ಕೋರ್ಟ್ ಅನ್ನು ಕೋರಲಾಗಿದೆ. ಈ ಸಂಬಂಧ ಕೋರ್ಟ್ ಶೀಘ್ರ ರಸ್ತೆ ಅಭಿವೃದ್ಧಿಗೆ ನಿರ್ದೇಶನ ನೀಡುವ ಸಾಧ್ಯತೆ ಇದೆ' ಎಂದು ಮುಡಾ ಮೂಲಗಳು ತಿಳಿಸಿವೆ.

ಸ್ಥಳೀಯರು, ವಾಹನ ಸವಾರರ ಕಿಡಿ...

ಈ ಭಾಗದಲ್ಲಿದ್ದ ಹಳೇ ರಸ್ತೆಯ ಡಾಂಬರು ಕಿತ್ತು ಬಂದು, ಹಳ್ಳಕೊಳ್ಳಗಳು ನಿರ್ಮಾಣವಾಗಿವೆ. ಸಾರ್ವಜನಿಕರ ಹಿತದೃಷ್ಟಿಯ ಬಗ್ಗೆ ಸ್ಥಳೀಯ ಆಡಳಿತಕ್ಕೆ ಬದ್ಧತೆ ಇದ್ದರೆ ಇಷ್ಟೊತ್ತಿಗೆ ಸಮಸ್ಯೆ ನಿವಾರಣೆಯಾಗುತ್ತಿತ್ತು. ಅಧಿಕಾರಿ ವರ್ಗದ ನಿರ್ಲಕ್ಷ್ಯದಿಂದಲೇ ಈ ಸಮಸ್ಯೆ ಇನ್ನು ಉಳಿದಿದೆ. ರಸ್ತೆ ಅಭಿವೃದ್ಧಿ ಇರಲಿ, ಗುಂಡಿಗಳಿಗೆ ಒಂದಿಷ್ಟು ಮಣ್ಣಾದರೂ ಹಾಕಿದ್ದಾರೆಯೇ? ಎಂದು ಸ್ಥಳೀಯರು, ವಾಹನ ಸವಾರರು ಕಿಡಿಕಾರಿದ್ದಾರೆ.

75 ದಿನ ಪೂರೈಸಿದ ಭಗೀರಥ ಚಿತ್ರ
ಮೈಸೂರಲ್ಲಿ ಸ್ಟಾರ್ ಮೆರವಣಿಗೆ

ಮೈಸೂರು,ಏ.20(ಪಿಎಂ)– ಡಾ.ವಿಷ್ಣುವರ್ಧನ್ ಅಭಿಮಾನಿಗಳ ಬಳಗದ ವತಿಯಿಂದ ಭಾನುವಾರ ಡೇರಿಂಗ್ ಸ್ಟಾರ್ ಎಸ್.ಜಯಪ್ರಕಾಶ್ (ಜೆಪಿ) ನಾಯಕ ನಟರಾಗಿ ಅಭಿನಯಿಸಿರುವ 'ಭಗೀರಥ' ಚಲನಚಿತ್ರವು 75 ದಿನಗಳನ್ನು ಪೂರೈಸುತ್ತಿರುವ ಹಿನ್ನಲೆಯಲ್ಲಿ ಸ್ಟಾರ್ ಮೆರವಣಿಗೆ ನಡೆಸಲಾಯಿತು.

ಮೆರವಣಿಗೆಯಲ್ಲಿ ಸಾಹಸ ಸಿಂಹ ಡಾ.ವಿಷ್ಣುವರ್ಧನ್ ಅವರ ಫೋಟೋ ಜೊತೆಗೆ ಭಗೀರಥ ಚಿತ್ರದ ಬ್ಯಾನರ್ ಹಾಗೂ ಪೋಸ್ಟರ್‌ಗಳು ರಾರಾಜಿಸಿದವು. ಹುಣಸೂರು ರಸ್ತೆಯ ಬೆಳವಾಡಿ ಟೋಲ್‌ಗೇಟ್‌ನಿಂದ ಆಟೋರಿಕ್ಷಾಗಳ ಸ್ಟಾರ್ ಮೆರವಣಿಗೆಯು ಪ್ರಾರಂಭವಾಗಿ, ಮೈಸೂರಿನ ಮೆಟ್ರೋಪೋಲ್ ವೃತ್ತದ ಮೂಲಕ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಆವರಣ ತಲುಪಿತು. ಇದೇ ವೇಳೆ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಮುಂದುವರೆದ ಮೆರವಣಿಗೆಯು, ಬಳಿಕ ಪ್ರಭಾ ಟಾಕೀಸ್ ತಲುಪಿ ಮುಕ್ತಾಯಗೊಂಡಿತು.



ಮೈಸೂರಿನಲ್ಲಿ 'ಭಗೀರಥ' ಚಿತ್ರದ ಸ್ಟಾರ್ ಮೆರವಣಿಗೆ ನಡೆಸಲಾಯಿತು.

ಇನ್ನು ಮೈಸೂರು ವಿವಿಯಿಂದ ಯಾವುದೇ ಪ್ರಮಾಣ ಪತ್ರವನ್ನು ಮನೆಯಲ್ಲೇ ಕೂತು ಪಡೆಯಿರಿ!

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ನಿಗದಿತ ಶುಲ್ಕ ಪಾವತಿಸಿದರೆ ಮುಗಿಯಿತು; ವಿದ್ಯಾರ್ಥಿಗಳ ಅಲೆದಾಟ ಅನಗತ್ಯ



ಮೈಸೂರು, ಏ.20(ಎಸ್‌ಪಿಎನ್)– ಪದವಿ, ಸ್ನಾತಕೋತ್ತರ ಪದವಿ ಅಂಕಪಟ್ಟಿ ದೋಷ, ಅಂಕಪಟ್ಟಿ ತಿದ್ದುಪಡಿ, ಘಟಿಕೋತ್ಸವ ಪ್ರಮಾಣ ಪತ್ರ, ಅಂಕಪಟ್ಟಿ ಕ್ರೋಢೀಕರಣ ಸೇರಿದಂತೆ ಒಟ್ಟು 28 ಬಗೆಯ ಪ್ರಮಾಣ ಪತ್ರಗಳನ್ನು ಮೈಸೂರು ವಿವಿಯಿಂದ ಪಡೆಯಲು ಇನ್ಮುಂದೆ ಕ್ರಾಫರ್ಡ್ ಹಾಲ್‌ಗೆ ವಿದ್ಯಾರ್ಥಿಗಳು ಎಡತಾಕುವ ಬದಲು, ಮನೆಯಲ್ಲೇ ಕುಳಿತು ಎಲ್ಲಾ ಬಗೆಯ ಪ್ರಮಾಣ ಪತ್ರಗಳನ್ನು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ, ಪಡೆಯಬಹುದು.

ಶತಮಾನ ಪೂರೈಸಿರುವ ಮೈಸೂರು ವಿವಿ ಹಲವು ಬಗೆಯ ನವನವೀನ ತಂತ್ರಜ್ಞಾನ ಅಳವಡಿಸಿಕೊಳ್ಳಲು ಮುಂದಾಗಿದ್ದು, ವಿವಿಯಲ್ಲಿ ಮೈಸೂರು ನಗರ, ಗ್ರಾಮಾಂತರ, ಮಂಡ್ಯ, ಹಾಸನ ಹಾಗೂ ಚಾಮರಾಜನಗರ ಸೇರಿದಂತೆ ವಿವಿದೆಡೆಯ ವಿದ್ಯಾರ್ಥಿಗಳು ಮೈಸೂರು ವಿವಿ ವ್ಯಾಪ್ತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಆದರೆ, ಈ ವಿದ್ಯಾರ್ಥಿಗಳಿಗೆ ಮುಂದಿನ ವಿದ್ಯಾಭ್ಯಾಸ ಹಾಗೂ ಉದ್ಯೋಗದ ನಿಮಿತ್ತ ಅಂಕಪಟ್ಟಿ, ವರ್ಗಾವಣೆ ಪತ್ರ ಸೇರಿದಂತೆ 28 ಬಗೆಯ ಪ್ರಮಾಣ ಪತ್ರ ಪಡೆಯಬೇಕಿದೆ. ಆದರೆ, ತಮ್ಮ ಗ್ರಾಮದಿಂದ ಮೈಸೂರಿಗೆ ಬರುವ ವಿದ್ಯಾರ್ಥಿಗಳು ಯಾವುದೇ ಪ್ರಮಾಣ ಪತ್ರ ಬೇಕಾದರೂ ಕ್ರಾಫರ್ಡ್ ಹಾಲ್, ಸಂಶೋಧನಾ ವಿಭಾಗ, ಬ್ಯಾಂಕ್‌ಗೆ ಅಲೆಯಬೇಕಿದೆ.

ಇದನ್ನು ತಪ್ಪಿಸಿ ವಿದ್ಯಾರ್ಥಿಗಳಿಗೆ ಮನೆಯಿಂದಲೇ ಆನ್‌ಲೈನ್ ಮೂಲಕ ಪ್ರಮಾಣ ಪತ್ರ ಪಡೆಯಲು ಮೈಸೂರು ವಿಶ್ವವಿದ್ಯಾಲಯ ಅವಕಾಶ ಕಲ್ಪಿಸಿಕೊಟ್ಟಿದೆ. ಮುಂದಿನ ವಾರದಿಂದ ಈ ಸೇವೆ ನೀಡಲು ವಿವಿ ಪರೀಕ್ಷಾಂಗ ವಿಭಾಗ ತೀರ್ಮಾನಿಸಿದ್ದು, ಏಪ್ರಿಲ್ ಅಂತ್ಯದೊಳಗೆ ಲೋಕಾರ್ಪಣೆಗೊಳ್ಳಲಿದೆ ಎನ್ನುತ್ತಾರೆ ಮೈಸೂರು ವಿವಿ ಪರೀಕ್ಷಾಂಗ ಕುಲ ಸಚಿವ ಪ್ರೊ.ಎನ್.ನಾಗರಾಜ.

ಪ್ರಮಾಣ ಪತ್ರಕ್ಕಾಗಿ ಡಿಜಿಟಲ್ ಮೊರೆ: ಬಹುತೇಕ ವಿದ್ಯಾರ್ಥಿಗಳು ಡಿಗ್ರಿ ಪೂರೈಸಿ ಎಷ್ಟೋ ವರ್ಷಗಳಾಗಿರುತ್ತದೆ. ಆದರೆ, ಅಂತಹ ವಿದ್ಯಾರ್ಥಿಗಳು ಪ್ರಮಾಣಪತ್ರವನ್ನೇ ಪಡೆದುಕೊಂಡಿರುವುದಿಲ್ಲ. ಕೆಲವರು ಘಟಿಕೋತ್ಸವ ಪ್ರಮಾಣ ಪತ್ರ ಸ್ವೀಕರಿಸದೆ ನಿರ್ಲಕ್ಷ್ಯ ವಹಿಸಿರುತ್ತಾರೆ. ಇನ್ನೂ ಕೆಲವರಿಗೆ ವಲಸೆ ಪತ್ರ, ನಕಲಿ ಪ್ರಮಾಣಪತ್ರ ಬೇಕಿರುತ್ತದೆ. ಒಂದು ಪ್ರಮಾಣ ಪತ್ರ ಪಡೆಯಲು ಬೆಳಗ್ಗೆಯಿಂದ ಸಂಜೆಯವರೆಗೂ ಅಲೆಯಬೇಕಾದ ಪರಿಸ್ಥಿತಿ ಇದೆ.

> ಎಷ್ಟೋ ವಿದ್ಯಾರ್ಥಿಗಳು ವಿವಿಧ ಬಗೆಯ ಪ್ರಮಾಣ ಪತ್ರ ಪಡೆಯಲು ದೂರದೂರಿನಿಂದ ಬರುತ್ತಿದ್ದು. ಅವರಿಗೆ ಅನುಕೂಲವಾಗಲಿ ಎಂದು ಇನ್ಮುಂದೆ ಎಲ್ಲಾ ರೀತಿಯ ಪ್ರಮಾಣ ಪತ್ರ ಪಡೆಯಲು ಆನ್‌ಲೈನ್ ವ್ಯವಸ್ಥೆ ಜಾರಿಗೊಳಿಸಲಾಗಿದ್ದು, ಅಧಿಕೃತವಾಗಿ ಏಪ್ರಿಲ್ ಕೊನೆಯ ವಾರದಲ್ಲಿ ಜಾರಿಗೆ ಬರಲಿದೆ. ಇದರಿಂದ ವಿದ್ಯಾರ್ಥಿಗಳು ಮನೆಯಲ್ಲಿ ಕುಳಿತುಕೊಂಡೆ ತಮಗೆ ಬೇಕಾದ ಪ್ರಮಾಣಪತ್ರಗಳನ್ನು ಪಡೆಯಬಹುದು.
> -ಪ್ರೊ.ಎನ್.ನಾಗರಾಜ, ಕುಲಸಚಿವ (ಪರೀಕ್ಷಾಂಗ), ಮೈಸೂರು ವಿವಿ

ಅಂತಹ ವಿದ್ಯಾರ್ಥಿಗಲು ಒಂದು ದಿನ ಕೆಲಸ ಬದಿಗೊತ್ತಿ ಇಲ್ಲವೇ ರಜೆ ಹಾಕಿ ಈ ಕೆಲಸಕ್ಕೆ ಬರುವ ಅನಿವಾರ್ಯತೆಯೂ ಇದೆ. ಹೀಗಾಗಿ ಇನ್ಮುಂದೆ ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲೇ ಎಲ್ಲಾ ದಾಖಲಾತಿಯನ್ನು ಅಪ್ಲೋಡ್ ಮಾಡಿ, ಹಣ ಜಮಾ ಮಾಡಿ ವಾರದೊಳಗೆ ಪ್ರಮಾಣಪತ್ರ ಪಡೆಯಬಹುದು. ಇದರಿಂದ ವಿವಿಗೆ ಅಲೆಯುವುದೂ ತಪ್ಪುತ್ತದೆ. ಡಿಜಿಟಲ್ ವ್ಯವಸ್ಥೆಯೂ ಸಾಕಾರಗೊಳ್ಳುತ್ತದೆ.

ಸಮಯ ಉಳಿತಾಯ: ಈ ಹಿಂದೆ ಮೈಸೂರು ವಿವಿಯಲ್ಲಿ ಸಕಾಲ ಸೇವೆ ಜಾರಿಯಲ್ಲಿತ್ತು. ವಿದ್ಯಾರ್ಥಿಗಳ ಯಾವುದೇ ಕೆಲಸವನ್ನೂ 20 ದಿನದೊಳಗೆ ಮುಗಿಸಿ ಕೊಡಲು ಈ ಸೇವೆಯನ್ನು ಆರಂಭಿಸಲಾಗಿತ್ತು. ಕಚೇರಿಯ ಸಿಬ್ಬಂದಿ ಅಥವಾ ಅಧಿಕಾರಿಗಳು ನಿಗದಿಪಡಿಸಿದ ಗುರಿ ತಲುಪುವಲ್ಲಿ ವಿಫಲವಾದರೆ ಪ್ರತಿ ಅರ್ಜಿಗೆ ದಿನಕ್ಕೆ 20 ರೂ. ದಂಡ ವಿಧಿಸಲು ಅವಕಾಶವಿತ್ತು. ಈ ಮೊತ್ತವನ್ನು 500 ರೂ.ವರೆಗೆ ಹೆಚ್ಚಿಸಲು ಅವಕಾಶವಿತ್ತು. ದಂಡದ ಮೊತ್ತವನ್ನು ಉದ್ಯೋಗಿಯ ಸಂಬಳದಲ್ಲಿ ಕಡಿತ ಮಾಡಲು ಮೈಸೂರು ವಿವಿ ಸೂಚನೆಯನ್ನೂ ನೀಡಿತ್ತು. ಆದರೆ, ಕೆಲವೇ ವರ್ಷಗಳ ನಂತರ ಇದು ನಿಂತು ಹೋಯಿತು. ಇದೀಗ ಆನ್‌ಲೈನ್ ಸೇವೆ ವಿದ್ಯಾರ್ಥಿಗಳಿಗೆ ಅನುಕೂಲಕರ ವಾತಾವರಣ ನಿರ್ಮಾಣ ಮಾಡಿಕೊಟ್ಟಿದೆ.

ವಿಲೇವಾರಿ ತ್ವರಿತ: ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ತ್ವರಿತ ಸೇವೆ ಒದಗಿಸಲು ವಿವಿ ಸಿಬ್ಬಂದಿಗೆ ಆನ್‌ಲೈನ್ ತರಬೇತಿ ನೀಡಲಾಗಿದೆ. ಸಿಬ್ಬಂದಿಯೂ ಪ್ರತಿ ಆನ್‌ಲೈನ್ ಅರ್ಜಿ ಮತ್ತು ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲಿಸಿ ಅಂತಿಮ ಮುದ್ರೆ ಒತ್ತಿದ ನಂತರ ಸರ್ಟಿಫಿಕೇಟ್ ಪಡೆಯಬಹುದು.

ಇದಕ್ಕಾಗಿ ತಾಂತ್ರಿಕತೆಯನ್ನು ಅಭಿವೃದ್ಧಿಪಡಿಸಲಾಗಿದೆ. ಆನ್‌ಲೈನ್‌ನಲ್ಲಿ ಅರ್ಜಿ ಹಾಕಿದ ವಾರದೊಳಗೆ ಪ್ರಮಾಣ ಪತ್ರವನ್ನು ವಿದ್ಯಾರ್ಥಿಗಳು ಪಡೆಯಬಹುದು. ತುರ್ತು ಇದ್ದವರು ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ, ಎರಡು ದಿನದೊಳಗೆ ವಿವಿಗೆ ಬಂದು ಆಫ್‌ಲೈನ್‌ನಲ್ಲೂ ಪ್ರಮಾಣಪತ್ರ ಪಡೆಯಬಹುದು ಎನ್ನುತ್ತಾರೆ ಮೈಸೂರು ವಿವಿ ಕುಲಸಚಿವ (ಪರೀಕ್ಷಾಂಗ) ಪ್ರೊ.ಎನ್.ನಾಗರಾಜ.

ಏನೆಲ್ಲಾ ಪ್ರಯೋಜನ: ಆನ್‌ಲೈನ್ ಸೇವೆಯಿಂದ ಮೈಸೂರು ವಿವಿಯಲ್ಲಿ ಭ್ರಷ್ಟಾಚಾರಕ್ಕೆ ಕಡಿವಾಣ, ವಿದ್ಯಾರ್ಥಿಗಳ ಸಮಯ ಉಳಿತಾಯ, ಪೇಪರ್ ಬಳಕೆಗೆ ಕಡಿವಾಣ, ಆಡಳಿತದಲ್ಲಿ ಪಾರದರ್ಶಕತೆ ತರಲು ಅನುಕೂಲವಾಗಲಿದೆ.

